2	Constn of Employment Exchange Office building at Hubli	Hubli	4 00	-	-
	Total		4 00	0 00	15 00
	Gadag Division				
1	Constn of Womens Industrial Training Institute at Gadag Betageri (1st floor)	Gadag	0 00	-	6 00
	Total		0 00	0 00	6 00

1	2	3	4	5	6
	Belgaum Division				
1	Constn of Safe House and Meeting Hall at Sambra Air port, Belgaum	Belgaum	0 00	-	15 00
	Total		0 00	0 00	15 00
	Chikkodi Division				
1	Constn of Sub Registrar Office at building at Gokak	Gokak	0 00	-	6 00
	Total		0 00	0 00	6 00
	Bagalkot Division				
1	Construction of ITI @ Jamakhandi	Jamakhandi	0 00	25 00	24 45
	Total		0 00	25 00	24 45
	Raichur Division				
1	Constn of District Training Institute Building at Raichur	Raichur	30 00	40 00	28 50
	Total		30 00	40 00	28 50
	OTHER DEPT TOTAL		34 00	65 00	94 95

1	2	3	4	5	6
	15 TREASURIES DEPT				
	Dharwad Division				
1	Providing water proofing to the roof of Dist Treasury at Dharwad	Dharwad City	0 00	-	4 50
	Total		0 00	0 00	4 50
	Karwar Division				
1	Constn of Sub-Tresury building at Ankola in U K Dist	Ankola	5 00	5 00	2 13
2	Constn of Sub-Treasury building at Yallapur in U K Dist	Yallapur	-	-	6 00
	Total		5 00	5 00	8 13
	Bijapur Division				
1	Constn of Sub-Treasury building at Chadachan	Indi	0 00	-	7 50
	Total		0 00	0 00	7 50

1	2	3	4	5	6
	Bellary Division				
1	Constn of Sub-Treasury building at Kurugod	Kurgod	0 00	-	12 00
	Total		0 00	0 00	12 00
	Raichur Division				
1	Constn of Sub-Treasury building at Manvi in Raichur Dist	Manvi	0 00	-	6 00
2	Constn of Sub-Treasury building at Deodurga in Raichur Dist	Deodurga	6 00	8 00	6 00
	Total		6 00	8 00	6 00
	Gulbarga Division				
1	Constn of Sub-Treasury building at Chincholli	Chincholli	3 00	1 00	4 50
	Total		3 00	1 004 50	
	Total for Treasury		14 00	14 00	42 63
	4059 P W GRAND TOTAL		1430 99	2438 50	4001 11

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ 762
ಅನುಬಂಧ–ಆ
ಪೂರ್ಣಗೊಂಡಿರುವ ಕಾಮಗಾರಿಗಳು

ಕ್ರಸಂ	ಕ್ಷೇತ್ರ	ಕಾಮಗಾರಿಯ ವಿವರ
ಅ	ಬೆಂಗಳೂರು ಗ್ರಾಮಾಂತರ	
1	ಮಾಗಡಿ	ಮಾಗಡಿಯಲ್ಲಿ ನ್ಯಾಯಾಲಯ ಸಂಕೀರ್ಣ ಕಟ್ಟಡ ನಿರ್ಮಾಣ
2	ರಾಮನಗರ	ರಾಮನಗರದ ನ್ಯಾಯಾಲಯಕ್ಕೆ ರೆಕಾರ್ಡ್ ಕೊರಡಿ ನಿರ್ಮಾಣ
3	ರಾಮನಗರ	ರಾಮನಗರದಲ್ಲಿ ಜೆಎಂಎಫ್‌ಸಿ ಕೋರ್ಟ್ ಕಾಂಪ್ಲೆಕ್ಸ್‌ನ ಮೊದಲನೇ ಅಂತಸ್ತಿನ ನಿರ್ಮಾಣ
4	ರಾಮನಗರ	ರಾಮನಗರದಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ
5	ರಾಮನಗರ	ರಾಮನಗರದಲ್ಲಿ ಸರ್ಕಾರಿ ಕಟ್ಟಡದ ನವೀಕರಣ ಹಾಗೂ ಅಭಿವೃದ್ಧಿ ಕಾಮಗಾರಿ
6	ರಾಮನಗರ	ರಾಮನಗರದಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಕಟ್ಟಡ ನಿರ್ಮಾಣ
7	ಆನೆಕಲ್	ಬೆಂಗಳೂರು ದಕ್ಷಿಣ ತಾಲ್ಲೂಕಿನ ಎನ್ ಸಿಪಿಯಲ್ಲಿ ಸೂರ್ ಸೆಕ್ಯುರಿಟಿ ಕಟ್ಟಡ ನಿರ್ಮಾಣ
8	ಹೊಸಕೋಟೆ	ಹೊಸಕೋಟೆ ತಾಲ್ಲೂಕಿನಲ್ಲಿ ಸಿಟಿಓ ಚೆಕ್ ಪೋಸ್ಟ್ ನಿರ್ಮಾಣ (ಒಳಭಾಗ)
ಬ	ಬೆಂಗಳೂರು ನಗರ	
1	ಶಿವಾಜಿನಗರ	ಬೆಂಗಳೂರು ಉಚ್ಛ ನ್ಯಾಯಾಲಯ ಕಟ್ಟಡದಲ್ಲಿ ಗ್ರಂದಾಲಯ ನಿರ್ಮಾಣ
2	ಶಿವಾಜಿನಗರ	ಬೆಂಗಳೂರು ಉಚ್ಚ ನ್ಯಾಯಾಲಯ ಕಟ್ಟಡಕ್ಕೆ ಅಂಲಕಾರಿಕ ಭದ್ರತಾ ಗ್ರಿಲ್ ಮತ್ತು ಗೇಟ್ ಗಳನ್ನು ಅಳವಡಿಸುವ ಕಾಮಗಾರಿ
3	ಶಿವಾಜಿನಗರ	ವಿಧಾನಸೌಧ ಮೊದಲನೆ ಮಹಡಿ ಕೊರಡಿ ಸಂಖ್ಯೆ 125 ರಲ್ಲಿ ಕಂಪ್ಯೂಟರ್ ಅಳವಡಿಸುವ ಬಗ್ಗೆ
4	ಶಿವಾಜಿನಗರ	ಜುಡಿಷಿಯಲ್ ಅಕಾಡೆಮಿ ಗ್ರಂಥಾಲಯ ಕಟ್ಟಡದಲ್ಲಿ ರ್‍ಯಾಕ್ ವಿಟ್ರಿಫೈಡ್ ಟೈಲ್ಸ್ ಬದ್ರತಾ ಗಾರ್ಡ್ ಕೊರಡಿ ನಿರ್ಮಾಣ
5	ಶಿವಾಜಿನಗರ	ಬೆಂಗಳೂರಿನ ಅಶೋಕ್ ನಗರದಲ್ಲಿ ಪೋಲೀಸ್ ಠಾಣೆ ಕಟ್ಟಡ ನಿರ್ಮಾಣ

1	2	3
6	ಶಿವಾಜಿನಗರ	ಬೆಂಗಳೂರಿನ ನೃಪತುಂಗರಸ್ತೆಯಲ್ಲಿರುವ ಡಿಜಿಪಿ ಅವರ ಕಛೇರಿಗೆ ಲಿಫ್ಟ್ ಅಳವಡಿಸುವ ಕಾಮಗಾರಿ
7	ಶಿವಾಜಿನಗರ	ಬೆಂಗಳೂರಿನ ಮುಖ್ಯ ಅಬಿಯಂತರರು, ಸಂಕದ ಆವರಣದಲ್ಲಿ ಲೋಕೋಪಯೋಗಿ ಇಲಾಖೆಯ ಪೂರಕ ಕಟ್ಟಡದ 4ನೇ ಮಹಡಿ ನಿರ್ಮಾಣ
8	ಚಿಕ್ಕಪೇಟೆ	ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯ ಸಂಕೀರ್ಣದಲ್ಲಿ 4,5 ಮತ್ತು 6ನೇ ಮಹಡಿ ಕಟ್ಟಡ ನಿರ್ಮಾಣ ಕಾಮಗಾರಿ (ಎರಡನೇ ಹಂತ)
9	ಚಿಕ್ಕಪೇಟೆ	ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯ ಕಟ್ಟಡದ ನೆಲಮಹಡಿಯಲ್ಲಿ ಮತ್ತು 3 ಮಹಡಿಗಳಲ್ಲಿ ಛಾಪಾ ಕಾಗದ ಮಾರಾಟಗಾರರಿಗೆ ಮಳಿಗೆಗಳ ನಿರ್ಮಾಣ ಹಾಗೂ ಅಡ್ವೋಕೇಟ್ಸ್ ಕ್ಯುಬಿಕಲ್ಸ್ ನಿರ್ಮಾಣ ಹಾಗೂ ಲಿಪ್ಟ್‌ಗಳನ್ನು ಅಳವಡಿಸುವ ಕಾಮಗಾರಿ (ಎರಡನೇ ಹಂತ)
10	ಚಿಕ್ಕಪೇಟೆ	ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯ ಕಟ್ಟಡದ ಮೊದಲನೇ ಹಂತದ ಹಿಂಭಾಗದ ನೆಲಮಹಡಿಯಲ್ಲಿ ಕಾರ್ ಪಾರ್ಕಿಂಗ್ ನಿರ್ಮಾಣ ಕಾಮಗಾರಿಯೊಂದಿಗೆ 9 ಅಂತಸ್ತುಗಳಿಗೆ ತಳಪಾಯದ ಕಾಮಗಾರಿ
11	ಚಿಕ್ಕಪೇಟೆ	ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯ ಕಟ್ಟಡದ ಸುತ್ತಲೂ ಡಬಲ್ ರೊಡ್ ನಿರ್ಮಾಣ (ಮಿಡಿಯನ್, ಡ್ರೈನ್ಸ್ ಮತ್ತು ಎಲಿಕ್ಟ್ರಿಫಿಕೇಷನ್ ಕಾಮಗಾರಿಗಳು)
12	ಚಿಕ್ಕಪೇಟೆ	ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯದ ಆವರಣದಲ್ಲಿ ಕಾರ್ ಪಾರ್ಕಿಂಗ್ ನಿರ್ಮಾಣ (ನೆಲ ಮತ್ತು ಮೊದಲನೆ ಮಹಡಿ)
13	ಚಿಕ್ಕಪೇಟೆ	ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯದ ಆವರಣದಲ್ಲಿ 2 ಸಂಖ್ಯೆಯ 10 ಜನ ಸಾಮರ್ಥ್ಯವುಳ್ಳ ಎಲಿವೇಟರ್ಸ್‌ಗಳನ್ನು ಅಳವಡಿಸುವುದು ಹಾಗೂ 20 ಜನ ಚಲಿಸಬಹುದಾದ ಎಲಿವೇಟರ್ಸ್‌ಗಳಿಗೆ ಸ್ಟ್ರಕ್ಚರಲ್ ಗ್ಲೇಜಿಂಗ್ ಅಳವಡಿಸುವ ಬಗ್ಗೆ
14	ಉತ್ತರಹಳ್ಳಿ	ಬೆಂಗಳೂರಿನ ತಿಲಕ್ ನಗರದಲ್ಲಿ ಪೊಲೀಸ್ ಠಾಣೆ ಕಟ್ಟಡ ನಿರ್ಮಾಣ

1	2	3
15	ಉತ್ತರಹಳ್ಳಿ	ಬೆಂಗಳೂರಿನ ಜೈಪ್ರಕಾಶ್ ನಗರದಲ್ಲಿ ಪೊಲೀಸ್ ಠಾಣೆ ಕಟ್ಟಡ ನಿರ್ಮಾಣ
16	ಉತ್ತರಹಳ್ಳಿ	ಬೆಂಗಳೂರಿನ ಮೈಸೂರು ರಸ್ತೆಯ ಕೆಂಚೇನಹಳ್ಳಿಯಲ್ಲಿರುವ ಸಬ್ ಅರ್ಬನ್ ಮುದ್ರಣಾಲಯಕ್ಕೆ ಗೋಡೌನ್ ನಿರ್ಮಾಣ
17	ಉತ್ತರಹಳ್ಳಿ	ಬೆಂಗಳೂರಿನ ಮೈಸೂರು ರಸ್ತೆಯ ಕೆಂಚೇನಹಳ್ಳಿಯಲ್ಲಿರುವ ಹೊರ ವಲಯ ಮುದ್ರಣಾಲಯದ ಆವರಣದಲ್ಲಿ ವಸತಿ ಗೃಹ ನಿರ್ಮಾಣ
18	ಕೆ ಆರ್ ಪುರಂ	ಕೆ ಆರ್ ಪುರಂ ನಲ್ಲಿ ಕಛೇರಿ ಸಂಕೀರ್ಣ ನಿರ್ಮಾಣ
19	ಬಸವನಗುಡಿ	ಬೆಂಗಳೂರಿನ ಹನುಮಂತನಗರದಲ್ಲಿ ಪೊಲೀಸ್ ಠಾಣೆ ಕಟ್ಟಡ ನಿರ್ಮಾಣ
20	ಶಾಂತಿನಗರ	ಬೆಂಗಳೂರಿನ ಕೋರಮಂಗಲದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡದ ನಿರ್ಮಾಣ
21	ಶಾಂತಿನಗರ	ಬೆಂಗಳೂರಿನ ಕೋರಮಂಗಲದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡಕ್ಕೆ ಅಧಿಕಾರಿಗಳಿಗೆ ಕ್ಯೂಬಿಕಲ್ಸ್ ನಿರ್ಮಾಣ ಮತ್ತು ಆವರಣ ರಸ್ತೆಗಳಿಗೆ ಡಾಂಬರೀಕರಣ
22	ಬೆಂಗಳೂರು ದಕ್ಷಿಣ	ಬೆಂಗಳೂರು ದಕ್ಷಿಣ ತಾಲ್ಲೂಕಿನ ಪರಪ್ಪನ ಅಗ್ರಹಾರದಲ್ಲಿರುವ ನೂತನ ಕೇಂದ್ರ ಕಾರಾಗೃಹ ಮೊದಲನೆ ಮಹಡಿಯಲ್ಲಿ ಬಂದಿಗಳ ವಾಹನಗಳ ಗ್ಯಾರೇಜ್ ನಿರ್ಮಾಣ
ಆ	ಕೋಲಾರ	
1	ಮಾಲೂರು	ಮಾಲೂರಿನಲ್ಲಿ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣ
2	ಮುಳಬಾಗಿಲು	ಮುಳಬಾಗಿಲಿನಲ್ಲಿ ಪರಿವೀಕ್ಷಣಾ ಮಂದಿರ ಮೊದಲ ಅಂತಸ್ತಿನ ನಿರ್ಮಾಣ
3	ಶ್ರೀನಿವಾಸಪುರ	ಶ್ರೀನಿವಾಸಪುರದಲ್ಲಿ ಜೆಎಂಎಫ್‌ಸಿ ನ್ಯಾಯಾಲಯ ಕಟ್ಟಡ ನಿರ್ಮಾಣ
4	ಮಾಲೂರು	ಮಾಲೂರಿನಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಾಣ
5	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರದಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಾಣ
6	ಬಾಗೆಪಲ್ಲಿ	ಬಾಗೇಪಲ್ಲಿ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣ
ಇ	ತುಮಕೂರು	
1	ಚಿಕ್ಕನಾಯಕನಹಳ್ಳಿ	ಚಿಕ್ಕನಾಯಕನಹಳ್ಳಿಯಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಾಣ

1	2	3
2	ತುಮಕೂರು	ತುಮಕೂರಿನಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿ ಕಟ್ಟಡ ನಿರ್ಮಾಣ
ಈ	ಚಿಕ್ಕಮಗಳೂರು	
1	ಚಿಕ್ಕಮಗಳೂರು	ಚಿಕ್ಕಮಗಳೂರಿನಲ್ಲಿರುವ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಅನೆಕ್ಸ್ ಕಟ್ಟಡ ನಿರ್ಮಾಣ
2	ಚಿಕ್ಕಮಗಳೂರು	ಚಿಕ್ಕಮಗಳೂರಿನಲ್ಲಿರುವ ಕೃಷಿ ಇಲಾಖೆ ಉಪ ನಿರ್ದೇಶಕರ ಕಛೇರಿ ಕಟ್ಟಡ
3	ಶೃಂಗೇರಿ	ನ ರಾ ಪುರದಲ್ಲಿ ಉಪ ಬಂಧೀಖಾನೆ ಕಟ್ಟಡ ನಿರ್ಮಾಣ
ಉ	ಶಿವಮೊಗ್ಗ	
1	ತೀರ್ಥಹಳ್ಳಿ	ತೀರ್ದಹಳ್ಳಿಯಲ್ಲಿ ಜೆಎಂಎಫ್‌ಸಿ ನ್ಯಾಯಾಲಯ ಕಟ್ಟಡ ನಿರ್ಮಾಣ
2	ಸಾಗರ	ಸಾಗರದ ಹಾಲಿ ನ್ಯಾಯಾಲಯ ಸಂಕೀರ್ಣಕ್ಕೆ ಹೆಚ್ಚುವರಿ ಕೊರಡಿ ನಿರ್ಮಾಣ
3	ಸಾಗರ	ಸಾಗರದಲ್ಲಿ ಅಗ್ನಿ ಶಾಮಕ ರಾಣೆ ನಿರ್ಮಾಣ
4	ಶಿವಮೊಗ್ಗ	ಶಿವಮೊಗ್ಗದ ಉಪ ಬಂದಿಖಾನೆಗೆ ಕಾಂಪೌಂಡ್ ಗೋಡೆ ನಿರ್ಮಾಣ
5	ಶಿವಮೊಗ್ಗ	ಶಿವಮೊಗ್ಗದಲ್ಲಿ ಉಪ ಆಯುಕ್ತರ ಕಛೇರಿ ಸಂಕೀರ್ಣ ನಿರ್ಮಾಣ
6	ಶಿವಮೊಗ್ಗ	ಶಿವಮೊಗ್ಗದಲ್ಲಿ ಅಬಕಾರಿ ಉಪ ಆಯುಕ್ತರ ಕಛೇರಿ ನಿರ್ಮಾಣ
7	ಸೊರಬ	ಸೊರಬದಲ್ಲಿ ಪರಿವೀಕ್ಷಣಾ ಮಂದಿರ ನಿರ್ಮಾಣ
8	ಸಾಗರ	ಜೋಗ್ ನಲ್ಲಿನ ಪರಿವೀಕ್ಷಣಾ ಮಂದಿರಕ್ಕೆ ಹೆಚ್ಚುವರಿ ಕೊರಡಿ ನಿರ್ಮಾಣ ಹಾಗೂ ಅಬಿವೃದ್ಧಿ
9	ಹೊಸನಗರ	ಹೊಸನಗರದಲ್ಲಿ ಪರಿವೀಕ್ಷಣಾ ಮಂದಿರ ನಿರ್ಮಾಣ
10	ಶಿವಮೊಗ್ಗ	ಶಿವಮೊಗ್ಗದಲ್ಲಿ ಉಪ ಆಯುಕ್ತರ ಕಟೇರಿ ಸಂಕೀರ್ಣ ನಿರ್ಮಾಣ
11	ಶಿಕಾರಿಪುರ	ಶಿಕಾರಿಪುರದಲ್ಲಿ ಜೆಎಂಎಫ್ ಸಿ ನ್ಯಾಯಾಲಯ ಕಟ್ಟಡ ನಿರ್ಮಾಣ
ಊ	ಹಾಸನ	
1	ಬೇಲೂರು	ಬೇಲೂರಿನಲ್ಲಿ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣ

1	2	3
2	ಅರಸಿಕೆರೆ	ಅರಸಿಕೆರೆಯಲ್ಲಿ ಹಿರಿಯ ನ್ಯಾಯಾಧೀಶರ ಕಟ್ಟಡ ನಿರ್ಮಾಣ
3	ಹೊಳೆನರಸೀಪುರ	ಹೊಳೆನರಸೀಪುರ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣ
4	ಹೊಳೇನರಸೀಪುರ	ಹೊಳೇನರಸೀಪುರ ಮಿನಿ ವಿಧಾನ ಸೌಧಕ್ಕೆ ಮೊದಲನೆ ಅಂತಸ್ತು ನಿರ್ಮಾಣ
ಕ	ಚಿತ್ರದುರ್ಗ	
1	ಹಿರಿಯೂರು	ಹಿರಿಯೂರಿನಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಾಣ
2	ಹಿರಿಯೂರು	ಹಿರಿಯೂರಿನಲ್ಲಿ ವಿಐಪಿ ಕೊರಡಿ ಹಾಗೂ ಐಬಿ ನಿರ್ಮಾಣ
3	ಹಿರಿಯೂರು	ಹಿರಿಯೂರಿನಲ್ಲಿ ಅಗ್ನಿ ಶಾಮಕ ರಾಣೆ ನಿರ್ಮಾಣ
4	ಹೊಳಲ್ಕೆರೆ	ಹೊಳಲ್ಕರೆಯಲ್ಲಿ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣ
5	ಹೊಳಲ್ಕರೆ	ಹೊಳಲ್ಕೆರೆಯಲ್ಲಿ ಮಿನಿ ವಿಧಾನಸೌಧಧ ಕಾಂಪೌಂಡ್ ಗೋಡೆ ನಿರ್ಮಾಣ
6	ಹೊಸದುರ್ಗ	ಹೊಸದುರ್ಗದ ವೆಲಗೂರಿನಲ್ಲಿ ಐ ಬಿ ಕಟ್ಟಡ ನಿರ್ಮಾಣ
7	ಮೊಳಕಾಲ್ಮೂರು	ಮೊಳಕಾಲ್ಮೂರು ತಾಲ್ಲೂಕಿನ ರಾಂಪುರದಲ್ಲಿ ಐಬಿ ನಿರ್ಮಾಣ
8	ಚಿತ್ರದುರ್ಗ	ಚಿತ್ರದುರ್ಗದಲ್ಲಿ ಜಿಲ್ಲಾ ತರಬೇತಿ ಕೇಂದ್ರ ಕಟ್ಟಡ ನಿರ್ಮಾಣ
ಖ	ಮೈಸೂರು	
1	ಮಳವಳ್ಳಿ	ಮಳವಳ್ಳಿಯಲ್ಲಿ ಜೆಎಂಎಫ್‌ಸಿ ಕಟ್ಟಡದ 2ನೇ ಹಂತದ ನಿರ್ಮಾಣ
ಗ	ಮಂಗಳೂರು	
1	ವಿಟ್ಲ	ವಿಟ್ಲದಲ್ಲಿ ಐಬಿ ನಿರ್ಮಾಣ
2	ಮಂಗಳೂರು	ಮಂಗಳೂರಿನಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಗಳ ಕಚೇರಿ ಕಟ್ಟಡ
3	ಕಾರ್ಕಳ	ಕಾರ್ಕಳದಲ್ಲಿ ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣ
4	ಮಂಗಳೂರು	ಮಂಗಳೂರಿನಲ್ಲಿ ಜಿಲ್ಲಾ ತರಬೇತಿ ಸಂಸ್ಥೆ ಕಟ್ಟಡ ನಿರ್ಮಾಣ
ಘ	ಉಡುಪಿ	
1	ಉಡುಪಿ	ಉಡುಪಿಯಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಗಳ ಕಛೇರಿ ಕಟ್ಟಡ
2	ಉಡುಪಿ	ಉಡುಪಿಯಲ್ಲಿ ಟ್ರಜರಿ ಕಟ್ಟಡ ನಿರ್ಮಾಣ
3	ಉಡುಪಿ	ಉಡುಪಿಯಲ್ಲಿ ಅಬಕಾರಿ ಇಲಾಖೆಯ ಬಹುಮಹಡಿ ಕಟ್ಟಡ ನಿರ್ಮಾಣ
4	ಉಡುಪಿ	ಉಡುಪಿಯಲ್ಲಿ ಜಿಲ್ಲಾ ನ್ಯಾಯಾಲಯ ಕಟ್ಟಡ ನಿರ್ಮಾಣ

E-36

1	2	3
5	ಉಡುಪಿ	ಪೆರಂಬೂರಿನಲ್ಲಿ ಚೆಕ್ ಪೋಸ್ಟ್ ನಿರ್ಮಾಣ
ಚ	ದಾವಣಗೆರೆ	
1	ದಾವಣಗೆರೆ	ದಾವಣಗೆರೆ ನಗರದಲ್ಲಿ ವಾಣಿಜ್ಯ ತೆರಿಗೆ ಕಚೇರಿ ಕಟ್ಟಡ ನಿರ್ಮಾಣ
ಛ	ಚಾಮರಾಜನಗರ	
1	ಗುಂಡ್ಲುಪೇಟೆ	ಗುಂಡ್ಲುಪೇಟೆಯಲ್ಲಿ ಕೋರ್ಟ್ ಕಟ್ಟಡ ನಿರ್ಮಾಣ
2	ಹನೂರು	ಮಲೈಮಹದೇಶ್ವರ ಬೆಟ್ಟದಲ್ಲಿ ಅತಿಗಣ್ಯ ವ್ಯಕ್ತಿಗಳ ಅತಿದಿಗೃಹ ನಿರ್ಮಾಣ
3	ಹನೂರು	ಹನೂರಿನಲ್ಲಿ 2 ಕೊಠಡಿಗಳ ಅತಿಗಣ್ಯ ವ್ಯಕ್ತಿಗಳ ಅತಿದಿಗೃಹ ನಿರ್ಮಾಣ
4	ಕೊಳ್ಳೇಗಾಲ	ಬಿಳಿಗಿರಿ ರಂಗನ ಬೆಟ್ಟದಲ್ಲಿ ಐಬಿ ಆವರಣದಲ್ಲಿ ಅತಿಗಣ್ಯ ವ್ಯಕ್ತಿಗಳ ಅತಿದಿಗೃಹ ನಿರ್ಮಾಣ
5	ಕೊಳ್ಳೇಗಾಲ	ಯಳಂದಿಂದೂರಿನ ಐಬಿ ಆವರಣದಲ್ಲಿ ಅತಿಗಣ್ಯ ವ್ಯಕ್ತಿಗಳ ಅತಿಧಿಗೃಹ ನಿರ್ಮಾಣ
6	ಕೊಳ್ಳೇಗಾಲ	ಕೊಳೇಗಾಲದ ಅತಿಗಣ್ಯ ವ್ಯಕ್ತಿಗಳ ಅತಿಧಿಗೃಹಕ್ಕೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ
ಜ	ಮಂಡ್ಯ	
1	ಶ್ರೀರಂಗಪಟ್ಟಣ	ಶ್ರೀರಂಗಪಟ್ಟದಲ್ಲಿ 3 ಮತ್ತು 4 ನೇ ಹಂತದ ಕೋರ್ಟ್ ಕಾಂಪ್ಲೆಕ್ಸ್ ಕಟ್ಟಡ ನಿರ್ಮಾಣ
2	ಶ್ರೀರಂಗಪಟ್ಟಣ	ಶ್ರೀರಂಗಪಟ್ಟಣದಲ್ಲಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ (ಮುಂಭಾಗ)
3	ಶ್ರೀರಂಗಪಟ್ಟಣ	ಶ್ರೀರಂಗಪಟ್ಟಣದ ಪ್ರಥಮ ದರ್ಜೆ ಕಾಲೇಜು ಕಟ್ಟಡಕ್ಕೆ ಕಾಂಪೌಂಡ್ ನಿರ್ಮಾಣ
4	ಪಾಂಡವಪುರ	ಪಾಡಂವಪುರದಲ್ಲಿ ಅತಿಗಣ್ಯ ವ್ಯಕ್ತಿಗಳ ಅತಿಧಿಗೃಹ ನಿರ್ಮಾಣ
5	ಮದ್ದೂರು	ಮದ್ದೂರು ತಾಲ್ಲೂಕಿನ ಕೊಪ್ಪದಲ್ಲಿ ಸಂಯುಕ್ತ ಪಿಯು ಕಾಲೇಜು ಕಟ್ಟಡ ನಿರ್ಮಾಣ
6	ನಾಗಮಂಗಲ	ನಾಗಮಂಗಲದಲ್ಲಿ ಲೋಇ ಉಪ ವಿಬಾಗ ಕಚೇರಿ ಕಟ್ಟಡ ನಿರ್ಮಾಣ
7	ನಾಗಮಂಗಲ	ನಾಗಮಂಗಲದಲ್ಲಿ ಲೋಇ ಅತಿಗಣ್ಯ ವ್ಯಕ್ತಿಗಳ ಅತಿದಿಗೃಹ ನಿರ್ಮಾಣ

1	2	3
8	ನಾಗಮಂಗಲ	ನಾಗಮಂಗಲದಲ್ಲಿ ಜ್ಯೂನಿಯರ್ ಕಾಲೇಜಿಗೆ ಮೊದಲನೇ ಮಹಡಿ ನಿರ್ಮಾಣ
9	ಕೆ ಆರ್ ಪೇಟೆ	ಕೆ ಆರ್ ಪೇಟೆಯಲ್ಲಿ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣ (ನೆಲ ಮತ್ತು ಮೊದಲನೇ ಮಹಡಿ)
10	ಕೆ ಆರ್ ಪೇಟೆ	ಕೆ ಆರ್ ಪೇಟೆಯಲ್ಲಿ ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣ (ಎರಡನೇ ಹಂತ)

2006–07ನೇ ಸಾಲಿನಲ್ಲಿ ಇಲ್ಲಿವರೆಗೆ ಪೂರ್ಣಗೊಳ್ಳದೆ ಪ್ರಗತಿಯಲ್ಲಿರುವ ಕಟ್ಟಡ ಕಾಮಗಾರಿಗಳ ವಿವರ

	ಹಾವೇರಿ	ಹಾವೇರಿಯಲ್ಲಿ ಸೆಂಟ್ರಲ್ ರಿಕಾರ್ಡ್ ರೂಂ ನಿರ್ಮಾಣ	ಮಾರ್ಚ್ 2007ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು
	ಹಾವೇರಿ	ರಾಣೆಬೆನ್ನೂರಿನಲ್ಲಿ ಐಬಿಗೆ ಗಣ್ಯ ವ್ಯಕ್ತಿಗಳ ಕೊಠಡಿ ನಿರ್ಮಾಣ	–ಸದರ–
	ಕೊಪ್ಪಳ	ಯಲಬುರ್ಗಾ ಪಟ್ಟಣದಲ್ಲಿ ಸರ್ಕ್ಯೂಟ್ ಹೌಸ್ ನಿರ್ಮಾಣ	–ಸದರ–
	ಧಾರವಾಡ	ಹುಬಳ್ಳಿಯಲ್ಲಿ ಪ್ರವಾಸಿ ಮಂದಿರಕ್ಕೆ 3 ಹೆಚ್ಚುವರಿ ಕೋಣೆ ನಿರ್ಮಾಣ	–ಸದರ–
	ಧಾರವಾಡ	ಕುಂದಗೋಲ ಲೋಇ ಉಪ ವಿಭಾಗ ಕಚೇರಿ ಕಟ್ಟಡ ನಿರ್ಮಾಣ	–ಸದರ–
	ಧಾರವಾಡ	ಹುಬ್ಬಳ್ಳಿ ಲೋಇ ಉಪ ವಿಭಾಗ ಕಚೇರಿ ಕಟ್ಟಡ ನಿರ್ಮಾಣ	–ಸದರ–
	ಕಾರವಾರ	ಸಿದ್ದಾಪೂರದಲ್ಲಿ ಸರ್ಕ್ಯೂಟ್ ಹೌಸ್ ನಿರ್ಮಾಣ	–ಸದರ–
	ಹಾವೇರಿ	ಹಾವೇರಿ ಲೋಇ ವಿಭಾಗ ಕಚೇರಿ ಕಟ್ಟಡ ನಿರ್ಮಾಣ	–ಸದರ–
	ಬೆಳಗಾವಿ	ರಾಮದುರ್ಗದಲ್ಲಿ ಸರ್ಕ್ಯೂಟ್ ಹೌಸ್ ನಿರ್ಮಾಣ	–ಸದರ–
	ಬಿಜಾಪೂರ	ಬಿಜಾಪೂರ ಹೊಸ ನಿರೀಕ್ಷಣಾ ಮಂದಿರದಲ್ಲಿ 2 ಹೊಸ ಕೋಣೆಗಳ ನಿರ್ಮಾಣ	–ಸದರ–

	ಬಿಜಾಪೂರ	ಸಿಂದಗಿಯಲ್ಲಿ ಲೋಇ ಉಪ ವಿಭಾಗ ಕಚೇರಿ ಕಟ್ಟಡ ನಿರ್ಮಾಣ	–ಸದರ–
	ಕೊಪ್ಪಳ	ಗಂಗಾವತಿ ಪಟ್ಟಣದಲ್ಲಿ ಸರ್ಕ್ಯೂಟ್ ಹೌಸ್ ನಿರ್ಮಾಣ	–ಸದರ–
	ಗುಲ್ಬರ್ಗಾ	ಗುಲ್ಬರ್ಗಾ ಐವಾನ್ ಶಾಹಿ ಕಟ್ಟಡ ನವೀಕರಿಸುವುದು	–ಸದರ–
	ಯಾದಗಿರಿ	ಜೇವರ್ಗಿಯಲ್ಲಿ ಶಾಶ್ವತವಾದ ಹೆಲಿಪ್ಯಾಡ್ ನಿರ್ಮಾಣ	–ಸದರ–
	ಹಾವೇರಿ	ಹಾವೇರಿಯಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಗಳ ಕಚೇರಿ ಕಟ್ಟಡ ನಿರ್ಮಾಣ	–ಸದರ–

2006–07ನೇ ಸಾಲಿನಲ್ಲಿ ಪೂರ್ಣಗೊಂಡ ಕಟ್ಟಡ ಕಾಮಗಾರಿಗಳ ವಿವರ

ಲೆಕ್ಕಶೀರ್ಷಿಕೆ 4059

ಕ್ರ.ಸಂ	ವಿಭಾಗದ ಹೆಸರು	ಪೂರ್ಣಗೊಂಡ ಕಟ್ಟಡ ಕಾಮಗಾರಿಯ ಹೆಸರು	ಷರಾ
1	2	3	4
1	ರಾಯಚೂರು	ಸಿಂಧೂನೂರಿನಲ್ಲಿ ಲೋಇ ಉಪ ವಿಭಾಗ ಕಾರ್ಯಾಲಯ ಕಟ್ಟಡ ನಿರ್ಮಾಣ	
2	ಯಾದಗೀರ	ಗುರುಮಿಟಕಲ್ ನಲ್ಲಿ ವಿ ಐ ಪಿ ಮಾದರಿಯ ಪ್ರವಾಸಿ ಮಂದಿರ ನಿರ್ಮಾಣ	
3	ಚಿಕ್ಕೋಡಿ	ಅದಣಿಯಲ್ಲಿ ಪ್ರವಾಸಿ ಮಂದಿರಕ್ಕೆ ಹೆಚ್ಚುವರಿ ಕೊರಡಿ ನಿರ್ಮಾಣ	
4	ಬೆಳಗಾವಿ	ಯರಗಟ್ಟಿ ಪ್ರವಾಸಿಮಂದಿರಕ್ಕೆ ಎರಡು ಹೊಸ ಕೋಣೆ ನಿರ್ಮಾಣ	
5	ಬೀದರ	ಕುಶನೂರ ಐ ಬಿ ಗೆ ಸರಬರಾಜು ಮಾಡುವುದು	
6	ಚಿಕ್ಕೋಡಿ	ಚಿಕ್ಕೋಡಿ ತಾಲ್ಲೂಕು ಯಡೂರು ಗ್ರಾಮದಲ್ಲಿ ಪರಿವೀಕ್ಷಣಾ ಮಂದಿರ ನಿರ್ಮಾಣ	
7	ಯಾದಗೀರ	ಯಾದಗಿರಿಯಲ್ಲಿ ಲೋಇ ಉಪ ವಿಬಾಗ ಕಚೇರಿ ಕಟ್ಟಡ ನಿರ್ಮಾಣ	
8	ಯಾದಗೀರ	ಜೇವರ್ಗಿಯಲ್ಲಿ ಲೋಇ ಉಪ ವಿಭಾಗ ಕಚೇರಿ ಕಟ್ಟಡ ನಿರ್ಮಾಣ	

9	ಬಾಗಲಕೋಟೆ	ಜಮಖಂಡಿಯಲ್ಲಿ ಎ ಆರ್ ಟಿ ಒ ಕಚೇರಿ ಕಟ್ಟಡ ನಿರ್ಮಾಣ	
10	ಕಾರವಾರ	ಅಂಕೋಲಾದಲ್ಲಿ ಉಪ ವಿಭಾಗ ಕಚೇರಿ ಕಟ್ಟಡ ನಿರ್ಮಾಣ	
11	ಕಾರವಾರ	ಯಲ್ಲಾಪೂರದಲ್ಲಿ ಉಪ ವಿಭಾಗ ಕಚೇರಿ ಕಟ್ಟಡ ನಿರ್ಮಾಣ	
12	ಕಾರವಾರ	ಸಿದ್ದಾಪೂರದಲ್ಲಿ ಸರ್ಕ್ಯೂಟ್ ಹೌಸ್ ನಿರ್ಮಾಣ	
13	ಧಾರವಾಡ	ರಾಯಾಪೂರ ಹೊಸ ಪರಿವೀಕ್ಷಣಾ ಮಂದಿರಕ್ಕೆ ಆವರಣ ಗೋಡೆ ನಿರ್ಮಾಣ	
14	ಕಾರವಾರ	ಅಂಕೋಲಾದಲ್ಲಿ ಉಪ ಖಜಾನೆ ಕಚೇರಿ ಕಟ್ಟಡ ನಿರ್ಮಾಣ	
15	ಧಾರವಾಡ	ಹುಬ್ಬಳ್ಳಿ-ಧಾರವಾಡ ಮಧ್ಯ ರಾಯಾಪೂರದಲ್ಲಿ ಇರುವ ಅಬಕಾರಿ ಇಲಾಖೆ ಕಟ್ಟಡಕ್ಕೆ ಮೊದಲನೇ ಮಹಡಿ ನಿರ್ಮಾಣ (ಉಗ್ರಾಣ ಹಾಗೂ ಬಂಧನಕ್ಕೊಳಗಾದ ವಾಹನಗಳಿಗಾಗಿ)	
16	ಧಾರವಾಡ	ಲೋಇ ಧಾರವಾಡ ವಿಭಾಗ ಧಾರವಾಡ ಪ್ರವಾಸಿ ಮಂದಿರಕ್ಕೆ ಹೆಚ್ಚುವರಿ 3 ಕೋಣೆ ನಿರ್ಮಾಣ	
17	ಕಾರವಾರ	ನ್ಯಾಯ ಪರಿಪಾಲನೆ (ರಾಜ್ಯ) ಕಾರವಾರ ವಿಬಾಗಃ ಭಟ್ಕಳದಲ್ಲಿ ಬಾರ್ ಅಸೋಸಿಯೇಷನ್ ಕಟ್ಟಡ ನಿರ್ಮಾಣ	
18	ಬಳ್ಳಾರಿ	ಲೋಇ ಬಳ್ಳಾರಿ ವಿಭಾಗ ಕುರಗೋಡದಲ್ಲಿ ನಿರೀಕ್ಷಣಾ ಮಂದಿರ ನಿರ್ಮಾಣ	
19	ಕೊಪ್ಪಳ	ಲೋಇ ಕೊಪ್ಪಳ ವಿಭಾಗ ಯಲಬುರ್ಗಾದಲ್ಲಿ ಲೋಇ ಉಪ ವಿಭಾಗ ಕಚೇರಿ ಕಟ್ಟಡ ನಿರ್ಮಾಣ	
20	ಕೊಪ್ಪಳ	ಲೋಇ ಕೊಪ್ಪಳ ಪಟ್ಟಣದಲ್ಲಿ ಲೋಇ ವಿಭಾಗ ಕಚೇರಿ ಕಟ್ಟಡ ನಿರ್ಮಾಣ	
21	ಗುಲ್ಬರ್ಗಾ	ವಾಹನ ನಿಯಂತ್ರಣ ಗುಲ್ಬರ್ಗಾ ವಿಭಾಗ ಗುಲ್ಬರ್ಗಾ ನಗರದಲ್ಲಿ ಆರ್ ಟಿ ಓ ಕಟೇರಿ ಕಟ್ಟಡ ದುರಸ್ತಿ	
22	ಹಾವೇರಿ	ಸವಣೂರಿನಲ್ಲಿ ಲೋಇ ಉಪ ವಿಭಾಗ ಕಟೇರಿ ಕಟ್ಟಡ ನಿರ್ಮಾಣ	

23	ಗದಗ	ರೋಣ ತಾಲ್ಲೂಕು ಗಜೇಂದ್ರಗಡದಲ್ಲಿ ಐ ಬಿ (ವಿ ಐ ಪಿ) ಕಟ್ಟಡ ನಿರ್ಮಾಣ	
24	ಹಾವೇರಿ	ಹಿರೇಕೆರೂರು ತಾ ಚಿಕ್ಕೇರೂರುನಲ್ಲಿ ಪ್ರವಾಸಿ ಮಂದಿರ ನಿರ್ಮಾಣ	
25	ಬೀದರ	ಹುಮನಾಬಾದನಲ್ಲಿ ಲೋಇ ಉಪ ವಿಭಾಗ ಕಚೇರಿ ಕಟ್ಟಡ ನಿರ್ಮಾಣ	
26	ಗದಗ	ಗದಗನಲ್ಲಿ ನ್ಯಾಯಾಲಯ ಸಂಕೀರ್ಣಕ್ಕಾಗಿ ಭೂಸ್ವಾಧೀನಪಡಿಸುವುದು	
27	ರಾಯಚೂರು	ದೇವದುರ್ಗದಲ್ಲಿ ಸಾಕ್ಷಿದಾರರ ಕಕ್ಷೆ ನಿರ್ಮಾಣ	
28	ರಾಯಚೂರು	ಲಿಂಗಸುಗೂರಿನಲ್ಲಿ ಸಾಕ್ಷಿದಾರರ ಕಕ್ಷೆ ನಿರ್ಮಾಣ	
29	ಯಾದಗಿರಿ	ಸೇಡಂನಲ್ಲಿ ನ್ಯಾಯಾಲಯ ಕಟ್ಟಡಕ್ಕೆ ಆವರಣ ಗೋಡೆ ನಿರ್ಮಾಣ	
30	ಯಾದಗಿರಿ	ಸುರಪುರದಲ್ಲಿ ಸಾಕ್ಷಿದಾರರ ಕಕ್ಷೆ ಹಾಗೂ ನಿರೀಕ್ಷಣಾ ಕೋಣೆ ನಿರ್ಮಿಸುವುದು	
31	ಧಾರವಾಡ	ರಾಯಪೂರದಲ್ಲಿರುವ ಆರ್ ಟಿ ಒ ಕಚೇರಿ ಕಟ್ಟಡ ನಿರ್ಮಾಣ ಹಾಗೂ ಆವರಣ ಗೋಡೆ ನಿರ್ಮಿಸುವುದು	

316 (341) ಶ್ರೀ ಬಸವರಾಜು ಎ ಎಸ್ (ಅರಸೀಕೆರೆ) ಮಾನ್ಯ ಪೌರಾಡಳಿತ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಸಂಖ್ಯೆ ಎಷ್ಟು (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು),

ಆ) ಈ ಪುರಸಭೆಗಳ ಪೈಕಿ ಯಾವುದಾದರೊಂದನ್ನು ನಗರಸಭೆಯನ್ನಾಗಿ ಪರಿವರ್ತಿಸಲು ಸರ್ಕಾರ ಯೋಚಿಸಿದೆಯೇ (ವಿವರ ನೀಡುವುದು),

ಇ) ಅರಸೀಕೆರೆ ಪುರಸಭೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಇದರಿಂದಾಗಿ ನಗರದ ಸ್ವಚ್ಚತೆ ಹಾಗೂ ನೈರ್ಮಲ್ಯ ಕಾರ್ಯ ಸ್ಥಗಿತಗೊಂಡಿರುವುದು ನಿಜವೇ,

ಉ) ಹಾಗಿದ್ದಲ್ಲಿ, ಸ್ವೀಪರ್ಸ್, ವಾಟರ್‌ಮೆನ್, ಬಿಲ್ ಕಲೆಕ್ಟರ್‌ಗಳ ಹುದ್ದೆಗಳು ಸೇರಿದಂತೆ ಬಾಕಿ ಇರುವ ಎಲ್ಲಾ ಹುದ್ದೆಗಳ ನೇಮಕಾತಿಗೆ ಯಾವ ಕ್ರಮವನ್ನು ಕೈಗೊಳ್ಳಲಾಗುತ್ತದೆ,

ಊ) ಅರಸೀಕೆರೆ ಪುರಸಭೆ ವ್ಯಾಪ್ತಿಯ ಹೊಸ ಬಡಾವಣೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಯಾವ ಯೋಜನೆ ರೂಪಿಸಲಾಗುವುದು?

ಶ್ರೀ ಆರ್ ಶ್ರೀನಿವಾಸ್ (ಪೌರಾಡಳಿತ ಸಚಿವರು)

ಅ) ಎಂಟು ವಿಧಾನ ಸಭಾ ಕ್ಷೇತ್ರವಾರು ವಿವರ

ಕ್ರ. ಸಂ	ವಿಧಾನಸಭಾ ಕ್ಷೇತ್ರಗಳು	ಸ್ಥಳೀಯ ಸಮಸ್ಥೆ ಹೆಸರು
1	ಹಾಸನ	ಹಾಸನ ನಗರಸಭೆ
2	ಅರಸೀಕೆರೆ	ಅರಸೀಕೆರೆ ಪುರಸಭೆ
3	ಶ್ರವಣಬೆಳಗೊಳ	ಚನ್ನರಾಯಪಟ್ಟಣ ಪುರಸಭೆ
4	ಹೊಳೆನರಸೀಪುರ	ಹೊಳೆನರಸೀಪುರ ಪುರಸಭೆ
5	ಬೇಲೂರು	ಬೇಲೂರು ಪುರಸಭೆ
6	ಸಕಲೇಶಪುರ	ಸಕಲೇಶಪುರ ಪುರಸಭೆ ಆಲೂರು ಪಟ್ಟಣ ಪಂಚಾಯಿತಿ
7	ಅರಕಲಗೂಡು	ಅರಕಲಗೂಡು ಪಟ್ಟಣ ಪಂಚಾಯಿತಿ
8	ಗಂಡಸಿ ಕ್ಷೇತ್ರ	ಯಾವುದೂ ಇಲ್ಲ

ಆ) ಕರ್ನಾಟಕ ಪುರಸಭೆ ಕಾಯ್ದೆ 1964 ರ ಕಲಂ 3,9 ಮತ್ತು 11 ರನ್ವಯ ಯಾವುದೇ ಪುರಸಭೆಯನ್ನು ನಗರಸಭೆಯನ್ನಾಗಿ ಪರಿವರ್ತಿಸುವ ಬಗ್ಗೆ ಲಕ್ಷಣಗಳು ಹೊಂದಿರುವುದಿಲ್ಲ

ಇ) –ಬಂದಿದೆ–

ಈ) ಇಲ್ಲ ಅರಸೀಕೆರೆ ನಗರದ ವಾರ್ಡ್ 1 ರಿಂದ 10ರ ಸ್ವಚ್ಚತಾ ಕೆಲಸವನ್ನು ಗುತ್ತಿಗೆದಾರರಿಗೆ ನೀಡಲಾಗಿದೆ ಉಳಿದ ವಾರ್ಡುಗಳ ಸ್ವಚ್ಚತೆಯನ್ನು 46 ಪೌರ ಕಾರ್ಮಿಕರು ಮಾಡುತ್ತಿದ್ದು, ಸ್ವಚ್ಚತಾ ಹಾಗೂ ನೈರ್ಮಲ್ಯ ಕಾರ್ಯ ಸ್ಥಗಿತಗೊಂಡಿರುವುದಿಲ್ಲ

ಉ) ವೃಂದ ಮತ್ತು ನೇಮಕಾತಿ ನಿಯಮಾವಳಿ ಪ್ರಕಾರ ಹುದ್ದೆಗಳ ಪ್ರಮಾಣ ನಿಗಧಿಯಾಗಿರುತ್ತದೆ ದಿನಗೂಲಿ ನೌಕರರ ಸೇವೆ ಸಕ್ರಮಗೊಂಡ

ನಂತರ ಖಾಲಿ ಇರುವ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುವುದು

ಊ) ಪುರಸಭೆಯ ಸಮಗ್ರ ಅಭಿವೃದ್ಧಿ ನೀಲಿ ನಕ್ಷೆಯನ್ನು ತಯಾರಿಸಲು ಸೂಚನೆ ನೀಡಲಾಗಿದೆ

317 (342) **ಶ್ರೀ ಬಸವರಾಜು ಎ ಎಸ್** (ಅರಸೀಕೆರೆ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆಎಸ್‌ಆರ್‌ಟಿಸಿ ಹಾಸನ ಹಾಗೂ ಚಿಕ್ಕ ಮಗಳುರು ವಿಭಾಗಗಳಲ್ಲಿರುವ ಹಾಲಿ ಡಿಪೋಗಳ ಸಂಖ್ಯೆ ಎಷ್ಟು ಹಾಗೂ ಸದರಿ ಡಿಪೋಗಳಲ್ಲಿರುವ ಬಸ್ಸುಗಳ ಹಾಗೂ ಚಾಲಕ ನಿರ್ವಾಹಕರ ಸಂಖ್ಯೆ ಎಷ್ಟು (ವಿವರ ನೀಡುವುದು),

ಆ) ಈ ವಿಭಾಗಗಳ ವ್ಯಾಪ್ತಿಯಲ್ಲಿ ಇನ್ನೂ ಹೊಸದಾಗಿ ಬಸ್ ಡಿಪೋ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ, ಹಾಗಿದ್ದಲ್ಲಿ ಎಲ್ಲೆಲ್ಲಿ ಸ್ಥಾಪಿಸಲಾಗುವುದು, (ವಿವರ ನೀಡುವುದು),

ಇ) ಈ ವೈಕಿ ಸದರಿ ಡಿಪೋಗಳಿಗೆ ಹೊಸದಾಗಿ ಎಷ್ಟು ಬಸ್ಸುಗಳನ್ನು ಒದಗಿಸಲಾಗುವುದು, (ಡಿಪೋಗಳವಾರು ವಿವರ ಒದಗಿಸುವುದು),

ಈ) ಇವುಗಳ ವ್ಯಾಪ್ತಿಯ ಬಸ್ ನಿಲ್ದಾಣದ ಸುಧಾರಣೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ, ಹಾಗೂ ಹೊಸ ಬಸ್ ನಿಲ್ದಾಣಗಳನ್ನು ಸ್ಥಾಪಿಸಲು ಉದ್ದೇಶಿಸಿದೆಯೇ,

ಉ) ಮೇಲಿನ ವಿಭಾಗಗಳ ಎಲ್ಲಾ ಡಿಪೋಗಳ ಮೂಲಕ ವಹಿವಾಟು ಆದಾಯ-ಖರ್ಚುಗಳೆಷ್ಟು, (ವಿವರ ನೀಡುವುದು),

ಊ) ಕಲೆಕ್ಷನ್ ಕಡಿಮೆಯಾದರೆ ಹಾಗೂ ಬಸ್ಸಿಗೆ ಹೆಚ್ಚು ಡೀಸಲ್ ಖರ್ಚಾದರೆ ಬಸ್ ನಿರ್ವಾಹಕರ ಹಾಗೂ ಚಾಲಕರ ಮೇಲೆ ದಂಡ ವಿಧಿಸುವ ಕ್ರಮ ಸರಿಯೇ,

ಋ) ಮಹಿಳಾ ನಿರ್ವಾಹಕಿಯರಿಗೆ ಹೆರಿಗೆ ರಜಾ ಸೌಲಭ್ಯ ಕಲ್ಪಿಸಲಾಗಿದೆಯೇ,

ೠ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಹಾಸನ ಮತ್ತು ಚಿಕ್ಕಮಗಳೂರು ವಿಭಾಗಗಳಲ್ಲಿ ತಲಾ 5 ಘಟಕಗಳಿವೆ

ಸದರಿ ಡಿಪೋಗಳಲ್ಲಿರುವ ಬಸ್ಸುಗಳು ಹಾಗೂ ಚಾಲಕ ಹಾಗೂ ನಿರ್ವಾಹಕ ವಿವರಗಳನ್ನು ಅನುಬಂಧ–ಎ ನಲ್ಲಿ ನೀಡಲಾಗಿದೆ

ಆ) ಹಾಸನ ವಿಭಾಗದ ಹಾಸನದಲ್ಲಿ 2ನೇ ಬಸ್ ಘಟಕ ಹಾಗೂ ಚಿಕ್ಕಮಗಳೂರು ವಿಭಾಗದಲ್ಲಿ ಬೇಲೂರು ಮತ್ತು ಕೊಪ್ಪದಲ್ಲಿ ಬಸ್ ಘಟಕಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ನಿವೇಶನಗಳನ್ನು ಸಂಸ್ಥೆಯ ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳಲಾಗಿದೆ

ಇ) ಪ್ರಾರಂಭದಲ್ಲಿ ತಲಾ 10 ಹೊಸ ಬಸ್ಸುಗಳನ್ನು ನೀಡಲಾಗುವುದು

ಈ) 1) ಹಾಸನ ವಿಭಾಗದಲ್ಲಿ ಚನ್ನರಾಯಪಟ್ಟಣ ಬಸ್ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ಕೆಲಸಗಳು ಪೂರ್ಣಗೊಳ್ಳುವ ಹಂತದಲ್ಲಿದೆ

2) ಹಾಸನ ವಿಭಾಗದ ಹಾಸನ ಪಟ್ಟಣದಲ್ಲಿ ನೂತನ ಬಸ್ ನಿಲ್ದಾಣವನ್ನು 20 15 ಕೋಟಿ ರೂ,ಗಳ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿದ್ದು, ಟೆಂಡರ್ ಪ್ರಕ್ರಿಯೆಗಳು ಪ್ರಗತಿಯಲ್ಲಿರುತ್ತವೆ

3) ದಿಡಗದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಉದ್ದೇಶಿಸಲಾಗಿದೆ ನಿವೇಶನಗಳನ್ನು ಸಂಸ್ಥೆಯ ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳಲಾಗಿದೆ

4) ಚಿಕ್ಕಮಗಳೂರು ವಿಭಾಗದಲ್ಲಿ ಮೂಡಿಗೆರೆ ಸಕಲೇಶಪುರ, ಅರಸೀಕರೆ ಮತ್ತು ಚಿಕ್ಕಮಗಳೂರು ಈ 5 ಕಡೆ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಿದ್ದು ಕಾಮಗಾರಿ ಕೆಲಸಗಳು ಪ್ರಸ್ತುತ ಪ್ರಗತಿಯಲ್ಲಿರುತ್ತವೆ

5) ಚಿಕ್ಕಮಗಳೂರು ವಿಭಾಗದಲ್ಲಿ ಸದ್ಯಕ್ಕೆ ಯಾವುದೇ ಹೊಸ ಬಸ್ ನಿಲ್ದಾಣ ನಿರ್ಮಾಣದ ಪ್ರಸ್ತಾವನೆ ಇರುವುದಿಲ್ಲ

ಉ) ಹಾಸನ ಮತ್ತು ಚಿಕ್ಕಮಗಳೂರು ವಿಭಾಗದ ಎಲ್ಲಾ ಘಟಕಗಳ 2005–06ನೇ ಸಾಲಿನ ವಾರ್ಷಿಕ ವಹಿವಾಟು ಆದಾಯ–ವೆಚ್ಚಗಳ ವಿವರವನ್ನು ಅನುಬಂಧ–ಬಿ ನಲ್ಲಿ ಒದಗಿಸಲಾಗಿದೆ

ಊ) ಸಂಸ್ಥೆಯ ಹಿತದೃಷ್ಟಿಯಿಂದ ಆದಾಯ ಕಡಿಮೆ ತರುವ ನಿರ್ವಾಹಕರಿಗೆ ದಂಡ ವಿಧಿಸಲಾಗುತ್ತದೆ ಅಂತೆಯೇ ಚಾಲಕರ ಕ್ರಮಬದ್ದವಲ್ಲದ ಚಾಲನಾ ಕ್ರಮದಿಂದ ನಿಗದಿತ ಗುರಿಗಿಂತ ಹೆಚ್ಚು ಡೀಸೆಲ್ ವ್ಯಯಮಾಡುವ ಚಾಲಕರ ಮೇಲೆ ಬಂಡ ವಿಧಿಸುವ ಕ್ರಮ ಜಾರಿಯಲ್ಲಿರುತ್ತದೆ

ಋ) ಕಲ್ಪಿಸಲಾಗಿದೆ

ಋ) ಉದ್ಭವಿಸುವುದಿಲ್ಲ

ANNEXURE-A

Statement showing the details of buses held and crew working in Hassan & Chikmagalur Divisionas on 27-1-2007

Number of Buses held in Hassan Division

Sl No	Depot	No of Buses held
1	Hassan	152
2	Channarayapatna	107
3	Holenarasipura	80
4	Ramanathapura	72
5	Arkalgud	67
	Total	478

Number of crew working in Hassan Division

Depot	Drivers			Conductors			Driver-Cum-Conductors		
	Regular	Trainee	Total	Regular	Trainee	Total	Regular	Trai-nee	Total
Hassan	214	42	256	112	60	172	38	28	66
Channaraya Patna	140	16	156	90	18	108	23	23	46
Ramanatha pura	74	25	99	50	03	53	19	26	45
Holenarasipura	90	23	113	38	16	54	24	33	57
Arakalgud	74	22	96	16	15	31	26	45	71
Total	592	128	720	307	112	418	130	155	285

Number of Buses held in Chickmagalur Division

	Depot	No of Buses held
1	Chickmagalur	129
2	Arasikere	111
3	Sakaleshpura	104
4	Kadur	57
5	Mudigere	43
	Total	444

Number of crew working in Chickmagalur Division

Depot	Drivers			Conductors			Driver-Cum-Conductors		
	Regular	Trai-nee	Total	Regular	Trai-nee	Total	Regular	Trai-nee	Total
Chickmagalur	147	28	175	131	18	14955	55	46	101
Arasikere	109	48	157	77	29	106	20	42	62
Sakaleshpura	80	61	141	691	35	104	27	38	65
Kadur	40	28	68	31	28	59	14	33	47
Mudigere	32	29	61	23	3053	53	08	30	38
Total	408	194	602	331	140	471	124	189	313

ANNEXURE "B"

Statement showing the details is of Division/Depotwise Revenue, Cost and Prof/Loss of Hassan and Chikkamagalore Division for the year 2005-06

(Rs in lakh)

Depot	Gross Revenue	Cost	Profit/Loss
Hassan Division			
a) Hassan	2948 46	2779 49	168 97
b) Channarayapatna	1848 03	1852 44	4 41
c) Ramanathapura	1233 22	1160 55	72 67
d) Holenarispura	1400 39	1338 22	62 17
e) Arkalgudu	1082 83	1032 82	50 01
Total	8512 93	8163 52	349 41
Chikkamagalore Division			
a) Chikkamagalore	2998 03	2842 98	155 05
b) Arasikere	2020 05	1955 34	64 71
c) Sakalespura	1946 06	1834 04	112 02
d) Kadur	918 22	873 03	45 19
e) Mudigere	136 32	128 83	7 49
Total	8018 68	7634 22	384 46

318 (342) ಶ್ರೀ ಬಸವರಾಜು ಎ ಎಸ್ (ಅರಸೀಕೆರೆ) · ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಸ್ವಯಂ ಉದ್ಯೋಗ ಯೋಜನೆಯಡಿ ಎಷ್ಟು ಫಲಾನುಭವಿಗಳನ್ನು ಗುರುತಿಸಿ ಆಯ್ಕೆ ಮಾಡಿ ಮಂಜೂರಾತಿ ನೀಡಲಾಗಿದೆ, (ತಾಲ್ಲೂಕುವಾರು ವಿವರ ನೀಡುವುದು),

ಆ) ಹಾಸನ ಜಿಲ್ಲೆಗೆ ಯಾವ ಯಾವ ಯೋಜನೆಯಡಿಯಲ್ಲಿ ನಬಾರ್ಡ್ ಮತ್ತು ಇತರೆ ಎಷ್ಟು ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲಾಗಿದೆ, (ತಾಲ್ಲೂಕುವಾರು ವಿವರ ನೀಡುವುದು),

ಇ) ಕೇಂದ್ರದಿಂದ ರಾಜ್ಯಕ್ಕೆ 11300 ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು ಆ ಕೇಂದ್ರಗಳಿಗೆ ಕಾರ್ಯಕರ್ತೆಯರ ನೇಮಕಾತಿ ಆಗಿದೆಯೇ? ಹಾಗೂ ಈ ಪ್ರಕ್ರಿಯೆ ಯಾವ ಹಂತದಲ್ಲಿದೆ,

ಈ) ಈ ಬಗ್ಗೆ ರಾಜ್ಯ ಸರ್ಕಾರದ ನಿಲುವೇನು,

ಉ) ಗ್ರಾಮೀಣ ಭಾಗದ ಬಡ ಮಹಿಳೆಗೆ (ಗರ್ಭಿಣಿ ಮತ್ತು ಬಾಣಂತಿ) ಹಾಗೂ 6 ವರ್ಷದೊಳಗಿನ ಮಕ್ಕಳಿಗೆ ಸಿಗುವ ಯೋಜನಾ ಸೌಲಭ್ಯಗಳೇನು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) 2006–07ನೇ ಸಾಲಿನಲ್ಲಿ ಹಾಸನ ಜಿಲ್ಲೆಗೆ ಎಲ್ಲಾ ತಾಲ್ಲೂಕುಗಳಿಗೆ ಸೇರಿ ಮುಖ್ಯ ಕ್ರಿಯಾ ಯೋಜನೆಯಲ್ಲಿ 43 ಫಲಾನುಭವಿಗಳನ್ನು ಗುರ್ತಿಸಿ ರೂ 3,12,500/– ಆರ್ಥಿಕ ನೆರವು ನೀಡಲು ಕ್ರಮ ಕೈಕೊಳ್ಳಲಾಗಿದೆ ಹಿಂದಿನ ವರ್ಷಗಳಲ್ಲಿ ಬಾಕಿ ಉಳಿದ ಬಡ್ಡಿ ಹಣ ನಿಗಮಕ್ಕೆ ಸೇರಿದ್ದರಲ್ಲಿ ಸ್ತ್ರೀಶಕ್ತಿ ಸಾಲ ಮೇಳಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ವಿತರಿಸಲು ರೂ 2,45,000/– ಗಳನ್ನು ಸಹಾಯಧನ ಬಿಡುಗಡೆಗೊಳಿಸಿ ಬ್ಯಾಂಕ್ ವತಿಯಿಂದ ಸಾಲದ ಭಾಗ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗಿದೆ

ಆ) ನಬಾರ್ಡ್ ಮತ್ತು ಇತರೆ ಯೋಜನೆಗಳಡಿಯಲ್ಲಿ ಒಟ್ಟು 1326 ಅಂಗನವಾಡಿ ಕಟ್ಟಡಗಳನ್ನು ಹಾಸನ ಜಿಲ್ಲೆಯಲ್ಲಿ ನಿರ್ಮಿಸಲಾಗಿದೆ ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ

ಇ) ಮಂಜೂರಾಗಿರುವ 11313 ಅಂಗನವಾಡಿ ಕೇಂದ್ರಗಳ ಪೈಕಿ 5462 ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ, ಕಾರ್ಯಕರ್ತೆಯರ ಆಯ್ಕೆಯಾಗಿದ್ದು, ದಿನಾಂಕ 29–9–2006ರ ರಾಜ್ಯ ಉಚ್ಚನ್ಯಾಯಾಲಯದ ತಡೆಯಾಜ್ಞೆ ಅನ್ವಯ ಉಳಿದ ಕೆಲವು ಕೇಂದ್ರಗಳಿಗೆ ಸಂದರ್ಶನ ನಡೆದಿದ್ದರೂ ನೇಮಕಾತಿ ಆದೇಶ ನೀಡಿರುವುದಿಲ್ಲ

ಈ) ರಾಜ್ಯ ಉಚ್ಚನ್ಯಾಯಾಲಯದ ತಡೆಯಾಜ್ಞೆ ತೆರವಾದ ನಂತರ ಉಳಿದ ಹುದ್ದೆಗಳಿಗೆ ಆಯ್ಕೆ ಮಾಡಲಾಗುವುದು

ಉ) ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿ ಮತ್ತು ಭಾಣಂತಿ ಸ್ತ್ರೀಯರಿಗೆ ಹಾಗೂ ಪ್ರಾಯಪೂರ್ವ ಬಾಲಕಿಯರಿಗೆ ರೂ 3/– ಮೌಲ್ಯದ ಪೂರಕ ಪೌಷ್ಟಿಕ ಆಹಾರವನ್ನು ಆರೋಗ್ಯ ತಪಾಸಣೆ ಹಾಗೂ ಆರೋಗ್ಯ ಮತ್ತು ಪೌಷ್ಟಿಕ ಶಿಕ್ಷಣವನ್ನು ನೀಡಲಾಗುತ್ತಿದೆ 6 ವರ್ಷದೊಳಗಿನ ಮಕ್ಕಳಿಗೆ ರೂ 2/–ರ ಮೌಲ್ಯದ ಪೂರಕ ಪೌಷ್ಟಿಕ ಆಹಾರವನ್ನು ಹಾಗೂ ಆರೋಗ್ಯ ತಪಾಸಣೆ ಚುಚ್ಚುಮದ್ದಿನ ಸೇವೆ ಹಾಗೂ ಮಾಹಿತಿ ಸೇವೆಯನ್ನು ಒದಗಿಸಲಾಗುತ್ತಿದೆ

ಅನುಬಂಧ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಬಸವರಾಜು ಎ ಎಸ್ (ಅರಸೀಕೆರೆ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 844ಕ್ಕೆ ಉತ್ತರ

ತಾಲ್ಲೂಕುವಾರು ವಿವರ	2006-07ರಲ್ಲಿ ಗುರಿ				ಜನವರಿ-07ರ ಅಂತ್ಯದವರೆಗೆ ಫಲಾನುಭವಿಗಳನ್ನು ಗುರುತಿಸಿದ ಸಹಾಯದನ ಮಂಜೂರಾತಿ ನೀಡಿದ ವಿವರ				ಒಟ್ಟು ಸಾಧನೆ		ಷರಾ
	ಮು ಕ್ರಿಯೋ		ಹೆ ಕ್ರಿಯೋ		ಮು ಕ್ರಿಯೋ		ಹೆ ಕ್ರಿಯೋ		ಭೌತಿಕ	ಆರ್ಥಿಕ	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ			
ಹಾಸನ	3	0 225	5	0 475	2	0 125	5	0 390	7	0 515	
ಅರಸೀಕೆರೆ	3	0 250	3	0 250	4	0 26	–	–	4	0 260	
ಚನ್ನರಾಯಪಟ್ಟಣ	3	0 225	3	0 225	2	0 165	2	0 125	4	0 290	
ಹೊಳೆನರಸೀಪುರ	3	0 225	6	0 400	–	–	2	0 135	2	0 135	
ಬೇಲೂರು	3	0 225	5	0 425	5	0 370	3	0 275	8	0 645	
ಆಲೂರು	1	0 075	3	0 225	–	–	4	0 300	4	0 300	
ಅರಕಲಗೂಡು	2	0 150	3	0 225	2	0 100	1	0 090	3	0 190	
ಸಕಲೇಶಪುರ	2	0 150	3	0 225	4	0 215	7	0 575	11	0 790	
ಒಟ್ಟು	20	1 525	30	2 450	19	1 235	24	1 890	43	3 125	

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:844ರ ಅನುಬಂಧ ಅನುಬಂಧ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕ್ರ ಸಂ	ಯೋಜನೆಯ ಹೆಸರು	ನಬಾರ್ಡ್ ಯೋಜನೆಯಡಿ ನಿರ್ಮಿಸಿರುವ ಕಟ್ಟಡಗಳ ಸಂಖ್ಯೆ (ವರ್ಷವಾರು)			ನಬಾರ್ಡ್ ಕಟ್ಟಡಗಳು	ಇತರೆ	ಒಟ್ಟು ಸ್ವಂತ	ಷರಾ
		2002–2003	2003–04	2004–05				
1	ಹಾಸನ	5	–	5	10	238	248	
2	ಚನ್ನರಾಯಪಟ್ಟಣ	4	–	–	4	216	220	
3	ಹೊಳೆನರಸೀಪುರ	3	–	5	8	112	120	
4	ಬೇಲೂರು	–	–	–	–	152	152	
5	ಸಕಲೇಶಪುರ	3	–	4	7	123	130	
6	ಆಲೂರು	3	–	4	7	77	84	
7	ಅರಸೀಕೆರೆ	6	3	6	15	222	237	
8	ಅರಕಲಗೂಡು	6	–	3	9	126	135	
	ಒಟ್ಟು	30	3	27	60	1266	1326	

319 (845) ಶ್ರೀ ಬಸವರಾಜು ಎ ಎಸ್ (ಅರಸೀಕೆರೆ) ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು),

ಆ) ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ನೂತನ ಕ್ರೀಡಾಂಗಣ ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ,

ಇ) ಹಾಗಿದ್ದಲ್ಲಿ ಯಾವ ಸ್ಥಳದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ,

ಈ) ಅರಸೀಕೆರೆ ತಾಲ್ಲೂಕು ಜಾವಗಲ್ ಗ್ರಾಮದಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆಯೇ ಯಾವಾಗ ಪ್ರಾರಂಬಿಸಲಾಯಿತು,

ಉ) ಇದರ ಕಾಮಗಾರಿ ಯಾವ ಹಂತದಲ್ಲಿದೆ ಪ್ರಗತಿಯಲ್ಲಿದೆಯೇ, ಯಾವಾಗ ಪೂರ್ಣಗೊಳಿಸಲಾಗುತ್ತದೆ

ಊ) ಈ ಕಾಮಗಾರಿಗೆ ಆದ ವೆಚ್ಚವೆಷ್ಟು ಬಾಕಿ ಇರುವ ಹಣವೆಷ್ಟು (ವಿವರ ಒದಗಿಸುವುದು)?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು)

ಅ) ಹಾಸನ ಜಿಲ್ಲೆಯಲ್ಲಿ ಈ ಕೆಳಗಿನಂತೆ ಕ್ರೀಡಾಂಗಣಗಳು ಇರುತ್ತವೆ

1) ಜಿಲ್ಲಾ ಕ್ರೀಡಾಂಗಣ, ಹಾಸನ
2) ಸಕಲೇಶಪುರ ತಾಲ್ಲೂಕು ಕ್ರೀಡಾಂಗಣ
3) ಹೊಳೇನರಸೀಪುರ ತಾಲ್ಲೂಕು ಕ್ರೀಡಾಂಗಣ
4) ಚನ್ನರಾಯಪಟ್ಟಣ ತಾಲ್ಲೂಕು ಕ್ರೀಡಾಂಗಣ
5) ಅರಸೀಕೆರೆ ತಾಲ್ಲೂಕು ಕ್ರೀಡಾಂಗಣ
6) ಬೇಲೂರು ತಾಲ್ಲೂಕು ಕ್ರೀಡಾಂಗಣ
7) ಜಾವಗಲ್ ಹೋಬಳಿ ಕ್ರೀಡಾಂಗಣ, ಅರಸೀಕೆರೆ ತಾಲ್ಲೂಕು

ಆ) ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ಕ್ರೀಡಾಂಗಣ ಕಾಮಗಾರಿಯು ಮುಕ್ತಾಯಗೊಂಡಿದ್ದು, ಯಾವುದೇ ಹೊಸ ಕ್ರೀಡಾಂಗಣ ನಿರ್ಮಾಣ ಮಾಡುವ ಉದ್ದೇಶವಿರುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಅರಸೀಕೆರೆ ತಾಲ್ಲೂಕಿನ ಜಾವಗಲ್‌ನಲ್ಲಿ ಸರ್ವೆ ನಂ 89,90 ಮತ್ತು 91ರ 4 20 ಎಕರೆ ನಿವೇಶನದಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲಾಗುತ್ತಿದೆ ಈ ಕ್ರೀಡಾಂಗಣದ ಕಾಮಗಾರಿಯನ್ನು 2000ನೇ ಇಸವಿಯಲ್ಲಿ ಪ್ರಾರಂಭಿಸಲಾಗಿದೆ

ಉ) ಈ ಕ್ರೀಡಾಂಗಣದ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು, ಇದನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು

ಊ) ಜಾವಗಲ್ ಕ್ರೀಡಾಂಗಣ ನಿರ್ಮಾಣಕ್ಕೆ ಅಂದಾಜಿಸಿದ ವೆಚ್ಚ 14 50 ಲಕ್ಷಗಳ ಪೈಕಿ ಈಗಾಗಲೇ ರೂ 12 50 ಲಕ್ಷ ಹಣವನ್ನು ವೆಚ್ಚ ಮಾಡಲಾಗಿದ್ದು, ಇನ್ನುಳಿಕೆ ರೂ 2 00 ಲಕ್ಷ ನಿರ್ಮಾಣ ಏಜೆನ್ಸಿಯವರಲ್ಲಿ ಉಳಿದಿದ್ದು, ಈ ಹಣವನ್ನು ವೆಚ್ಚ ಮಾಡಿ ಅಗತ್ಯ ಕಾಮಗಾರಿಯನ್ನು ಪೂರೈಸಲು ಉದ್ದೇಶಿಸಿದೆ ಇನ್ನೇನಾದರೂ ವೆಚ್ಚವನ್ನು ಭರಿಸಲು ಹಣ ಬೇಕಾದಲ್ಲಿ ಜಿಲ್ಲಾ ಪಂಚಾಯತ್ ಅನುದಾನವನ್ನು ಪಡೆದು ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಗುವುದು

320 (8) ಶ್ರೀ ಬಸವರಾಜು ಹೆಚ್ ಡಿ (ವಿರಾಜಪೇಟೆ) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವವಿಖ್ಯಾತ ನಾಗರಹೊಳೆ ಅರಣ್ಯಕ್ಕೆ ಸಂಪರ್ಕ ಕಲ್ಪಿಸುವ ಬಾಳಲೆ–ಮೂರ್ಕಲು ರಸ್ತೆ ಹಾಗೂ ಕುಟ್ಟಮೂರ್ಕಲ್ ರಸ್ತೆಗಳು ಹಾಳಾಗಿದ್ದರೂ ಈ ರಸ್ತೆ ದುರಸ್ಥಿಗೆ ಪ್ರವಾಸೋದ್ಯಮ ಇಲಾಖೆಯಿಂದ ಯಾವುದೇ ಹಣವನ್ನು ಬಿಡುಗಡೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಈ ರಸ್ತೆಗಳ ದುರಸ್ಥಿಗೆ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ,

ಇ) ಪ್ರಸಕ್ತ ಸಾಲಿನಲ್ಲಿ ಸರ್ಕಾರ ಮಂಜೂರು ಮಾಡಿರುವ ಹಣವೆಷ್ಟು (ವಿವರ ನೀಡುವುದು)?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು):

ಅ) ಹೌದು

ಆ) ಕೆಳಕಂಡ ಎರಡು ರಸ್ತೆಗಳು ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ವಲಯ ವ್ಯಾಪ್ತಿಯಲ್ಲಿದ್ದು, ಈ ವಲಯದ ವ್ಯಾಪ್ತಿಯಿಂದ ದುರಸ್ಥಿಗಾಗಿ ಕೈಗೊಂಡ ಕ್ರಮ ಇಂತಿದೆ

ಬಾಳೆಲೆ– ಮೂರ್ಕಲ್ ರಸ್ತೆಯು ಜಿಲ್ಲ ಮುಖ್ಯ ರಸ್ತೆಯ ವರ್ಗಕ್ಕೆ ಸೇರಿದ್ದು, ಈ ಜಿಲ್ಲಾ ಮುಖ್ಯ ರಸ್ತೆಯ ಒಟ್ಟು ಉದ್ದ 4 20 ಕಿ ಮೀ ಇರುತ್ತದೆ ಈ ರಸ್ತೆಯ ಕಿಮೀ 0 00 ರಿಂದ 4 20 ಕಿಮೀ ವರೆಗೆ ಗುಡಿ ಮುಚ್ಚುವ ಕಾಮಗಾರಿಗಾಗಿ ಲೆಕ್ಕ ಶೀರ್ಷಿಕೆ 3054–12ನೇ ಹಣಕಾಸು ಯೋಜನೆಯಡಿ ರೂ 1 65 ಲಕ್ಷ ಮೊತ್ತಕ್ಕೆ ಮಂಜೂರಾಗಿದ್ದು, ಕಾಮಗಾರಿ ಪ್ರಾರಂಭಿಸುವ ಹಂತದಲ್ಲಿದೆ ಕುಟ್ಟದಿಂದ ಮೂರ್ಕಲದ ವರೆಗೆ ರಸ್ತೆಯ ಒಟ್ಟು ಉದ್ದ 28 20 ಕಿಮೀ ಇದ್ದು ಕುಟ್ಟದಿಂದ ನಾಗರಹೊಳೆ ರಸ್ತೆ (ಒಟ್ಟು ಉದ್ದ 10 00ಕಿಮೀ) ಮತ್ತು ನಾಗರಹೊಳೆ ಮೂರ್ಕಲ್‌ರಸ್ತೆ (ಒಟ್ಟು ಉದ್ದಕಿಮೀ) ಎಂಬ ಎರಡು ಬೇರೆ ಬೇರೆ ಜಿಲ್ಲಾ ಮುಖ್ಯ ರಸ್ತೆಯಾಗಿದೆ

ಕುಟ್ಟ ನಾಗರಹೊಳೆ ರಸ್ತೆ 0 00 ಕಿಮೀ ರಿಂದ 2 00 ಕಿಮೀ ವರೆಗೆ ಅಭಿವೃದ್ಧಿ ಪಡಿಸಲು ಲೆಕ್ಕ ಶೀರ್ಷಿಕೆ 3054–ಯೋಜನೆಯಡಿ ರೂ 10 00 ಲಕ್ಷಗಳಷ್ಟು ಹಾಗೂ ಸರಪಳಿ 2 00 ಕಿಮೀ ರಿಂದ 8 00 ಕಿಮೀ ವರೆಗೆ ಅಭಿವೃದ್ಧಿಗಾಗಿ ಲೆಕ್ಕ ಶೀರ್ಷಿಕೆ 3054–ಯೋಜನೆಯಡಿಯಲ್ಲಿ ರೂ 75 00 ಲಕ್ಷಗಳಷ್ಟು ಮಂಜೂರಾಗಿರುತ್ತದೆ

ನಾಗರಹೊಳೆ ಮೂರ್ಕಲ್ ರಸ್ತೆಯ 0 00 ರಿಂದ 5 70 ಕಿಮೀ ವರೆಗೆ ರೂ 75 00 ಲಕ್ಷಗಳ ಅನುದಾನವು ಲೆಕ್ಕ ಶೀರ್ಷಿಕೆ 3054–ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿಯಡಿ ಬಿಡುಗಡೆಯಾಗಿದ್ದು, ಅಂದಾಜು ಪಟ್ಟಿ ತಯಾರಿ ಹಂತದಲ್ಲಿದೆ ಹಾಗೂ ಇದೇ ರಸ್ತೆ ಕಿಮೀ 5 80 ರಿಂದ 7 80 ರವರೆಗೆ ಅಭಿವೃದಿಗಾಗಿ ರೂ 15 00 ಲಕ್ಷ ಲೆಕ್ಕ ಶೀರ್ಷಿಕೆ 3054–ಯೋಜನೆಯಡಿ ಮಂಜೂರಾಗಿದ್ದು ಕಾಮಗಾರಿ ಪ್ರಾರಂಭಿಸಬೇಕಾಗಿದೆ ಮತ್ತು ಇದೇ ರಸ್ತೆ ಕಿಮೀ 8 00 ರಿಂದ 18 20 ಕಿಮೀ ವರೆಗೆ ಅಭಿವೃದ್ಧಿಗಾಗಿ ರೂ 75 00 ಲಕ್ಷ ಮಂಜೂರಾಗಿದ್ದು ಕಾಮಗಾರಿ ಪ್ರಾರಂಭಿಸಬೇಕಾಗಿದೆ

ಇ) ಬಾಳೆಲೆ–ಮೂರ್ಕಲ್ ರಸ್ತೆ	ರೂ 1 65 ಲಕ್ಷ
ಕುಟ್ಟ–ನಾಗರಹೊಳೆ ರಸ್ತೆ	ರೂ 85 00 ಲಕ್ಷ
ನಾಗರಹೊಳೆ–ಮೂರ್ಕಲ್ ರಸ್ತೆ	ರೂ 165 00 ಲಕ್ಷ
ಒಟ್ಟು	ರೂ 251 65 ಲಕ್ಷ

321 (30) ಶ್ರೀ ಬಸವರಾಜು ಹೆಚ್ ಡಿ (ವಿರಾಜಪೇಟೆ) ಮಾನ್ಯ ಗೃಹ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ಕ್ಷೇತ್ರದಲ್ಲಿ ಅಗ್ನಿಶಾಮಕ ಕೇಂದ್ರವನ್ನು ಪ್ರಾರಂಭಿಸಲು ಸರ್ಕಾರ ರೂ 147 ಕೋಟಿಯನ್ನು ಮಂಜೂರು ಮಾಡಿದ್ದರೂ ಸಹ ಹಣ ಬಿಡುಗಡೆ ಮಾಡದಿರಲು ಕಾರಣಗಳೇನು,

ಆ) ಹಣ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) .

ಅ) ವಿರಾಜಪೇಟೆ ಕ್ಷೇತ್ರದ ಗೋಣಿಕೊಪ್ಪದಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯಲು ಸರ್ಕಾರವು ಆದೇಶ ಸಂ ಒಇ 135 ಕಅಸೇ 2004, ದಿನಾಂಕ 14-7-2005ರಲ್ಲಿ ಮಂಜೂರಾತಿ ನೀಡಿದೆ ಈ ಆದೇಶದಲ್ಲಿ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳು ಸೇರಿದಂತೆ ಒಟ್ಟು 66,24,348 ರೂ ಗಳಿಗೆ ಸರ್ಕಾರ ಮಂಜೂರಾತಿ ನೀಡಿತ್ತು ಆದರೆ ಅಗ್ನಿಶಾಮಕ ಠಾಣೆಯನ್ನು ತೆರೆಯಲು ಬೇಕಾದ ಸೂಕ್ತವಾದ ಜಮೀನು ದೊರೆಯದ ಕಾರಣ ಠಾಣೆಯನ್ನು ಪ್ರಾರಂಭಿಸಿರುವುದಿಲ್ಲ ಸರ್ಕಾರ ರೂ 147 ಕೋಟಿಯನ್ನು ಮಂಜೂರು ಮಾಡಿರುವುದಿಲ್ಲ

ಆ) ನಿವೇಶನ ದೊರಕಿದ ನಂತರ ಹಣವನ್ನು ಒದಗಿಸಿಕೊಂಡು ಜಲವಾಹನ ಮತ್ತು ಇತರೆ ಉಪಕರಣಗಳನ್ನು ಪಡೆದು ಅಗ್ನಿಶಾಮಕ ಠಾಣೆಯನ್ನು ತೆರೆಯಲಾಗುವುದು

322 (31) ಶ್ರೀ ಬಸವರಾಜು ಹೆಚ್ ಡಿ (ವಿರಾಜಪೇಟೆ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಕೆಎಸ್‌ಆರ್‌ಟಿಸಿ ಮಿನಿಬಸ್ ಡಿಪೋ ಪ್ರಾರಂಭಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು,

ಇ) ಮಿನಿಬಸ್ ಡಿಪೋ ನಿರ್ಮಾಣಕ್ಕೆ ಸರ್ಕಾರ ವೆಚ್ಚ ಮಾಡಲಿರುವ ಹಣ ಎಷ್ಟು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಬಂದಿದೆ

ಆ) ಸೂಕ್ತವಾದ ನಿವೇಶನ ಪಡೆಯಲ ಪರಿಶೀಲಿಸಲಾಗುತ್ತಿದೆ

ಇ) ಸೂಕ್ತ ನಿವೇಶನವು ನಿಗಮಕ್ಕೆ ಲಭ್ಯವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು

323 (32) ಶ್ರೀ ಬಸವರಾಜು ಹೆಚ್ ಡಿ (ವಿರಾಜಪೇಟೆ) . ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ಆನೇಚಾಕುರ್–ಗೋಣಿಕೊಪ್ಪ–ವಿರಾಜಪೇಟೆ ಮೂಲಕ ಕೇರಳ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ಅಂತರ ರಾಜ್ಯ ಹೆದ್ದಾರಿಯನ್ನು ಸರ್ವಋತು ಹೆದ್ದಾರಿ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು (ವಿವರ ನೀಡುವುದು)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಇದೆ

ಆ) ಈ ರಸ್ತೆಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಹೆದ್ದಾರಿ ಪರಿಣಿತರುಗಳಿಂದ ಪರಿವೀಕ್ಷಿಸಿದ್ದು, ಅವರ ತಾಂತ್ರಿಕ ವರದಿಯಂತೆ ರಸ್ತೆಯನ್ನು ಸಂಪೂರ್ಣವಾಗಿ ನಿರ್ಮಿಸುವ ಅವಶ್ಯಕತೆ ಇರುತ್ತದೆ ಇದರಂತೆ ಹುಣಸೂರು–ಆನೆಚೌಕೂರು–ಗೋಣಿಕೊಪ್ಪ–ವಿರಾಜಪೇಟೆ–ಮಾಕುಟ್ಟ ವರೆಗಿನ ರಸ್ತೆಯನ್ನು ಸರ್ವಋತು ರಸ್ತೆಯನ್ನಾಗಿಸಲು ರೂ 100 ಕೋಟಿಗಳ ಅಂದಾಜನ್ನು ತಯಾರಿಸಲಾಗಿದ್ದು ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದೆ ಇದಲ್ಲದೆ ಈ ರಸ್ತೆಯ ಪೆರುಂಬಾಡಿಯಿಂದ ಕಿಮೀ 72 26 ರಿಂದ 76 26 ಕಿಮೀ ವರೆಗಿನ ಸರಪಳಿಯಲ್ಲಿ 3 5 ಕಿಮಿ ಉದ್ದ ರಸ್ತೆಗೆ ಮರುಡಾಂಬರೀಕರಣ ಕಾಮಗಾರಿಗೆ ಕೇಂದ್ರ ರಸ್ತೆ ನಿಧಿ ಯೋಜನೆಯಡಿಯಲ್ಲಿ ರೂ 70 00 ಲಕ್ಷಗಳಿಗೆ ಮಂಜೂರಾಗಿದ್ದು, ಸಧ್ಯದಲ್ಲಿಯೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಹಾಗೂ ಸದರಿ ರಸ್ತೆಯ ಕಿಮೀ 76 26 ರಿಂದ 92 76 ವರೆಗಿನ ಹಾಳಾಗಿರುವ ರಸ್ತೆಯನ್ನು ತಾತ್ಕಾಲಿಕವಾಗಿ ವಾಹನ ಸಂಚಾರಕ್ಕೆ ಯೋಗ್ಯವಾಗಿಸಲು ರೂ 100 ಲಕ್ಷಗಳಿಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಕಾಮಗಾರಿಗಳನ್ನು ಸಧ್ಯದಲ್ಲಿಯೇ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

324 (33) ಶ್ರೀ ಬಸವರಾಜು ಹೆಚ್ ಡಿ (ವಿರಾಜಪೇಟೆ) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕಿನಲ್ಲಿರುವ ತಿತಿಮತಿ ಬಳಿಯ ರಾಜ್ಯ ಹೆದ್ದಾರಿ ಸೇತುವೆ ಕುಟ್ಟಪೂಚಕಲ್ಲೂ ವಾಹನ ಬಳಿಯಿರುವ ಮತ್ತು ಶ್ರೀಮಂಗಲ

ತಾಕೂರು ಬಳಿಯಿರುವ ಸೇತುವೆಗಳು ಸುಗಮ ವಾಹನ ಸಂಚಾರಕ್ಕೆ ಯೋಗ್ಯವಾಗಿ ಇಲ್ಲದೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಈ ಸೇತುವೆಗಳ ಪುನರ್ ನಿರ್ಮಾಣಕ್ಕೆ ಸರ್ಕಾರ ಕೈಗೊಂಡ ಕ್ರಮವೇನು,

ಇ) ಸದರಿ ಯೋಜನೆಗೆ ಮಂಜೂರು ಮಾಡಿದ ಹಣ ಎಷ್ಟು (ವಿವರ ಒದಗಿಸುವುದು)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಬಂದಿದೆ

ಆ) ಈ ಸೇತುವೆಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಕೈಗೊಳ್ಳಲಾಗುವ 4ನೇ ಹಂತದ ಸೇತುವೆಗಳ ನಿರ್ಮಾಣದ ಯೋಜನೆ ಅಡಿಯಲ್ಲಿ ಸೇರಿಸಲು ಪರಿಶೀಲಿಸಲಾಗುತ್ತಿದ್ದು, ಸೇತುವೆಗಳ ನಿರ್ಮಾನ/ಪುನರ್ ನಿರ್ಮಾಣವನ್ನು ಅನುದಾನದ ಲಭ್ಯತೆಗನುಸಾರವಾಗಿ ಹಾಗೂ ಕಾಮಗಾರಿಯ ಆದ್ಯತೆ ಮೇರೆಗೆ ಹಂತ ಹಂತವಾಗಿ ಕೈಗೊಳ್ಳಲಾಗುವುದು

ಇ) ಸದರಿ ಪ್ರಸ್ತಾವನೆಗಳನು ಪರಿಶೀಲನೆಯ ಹಂತದಲ್ಲಿ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

325 (347) ಶ್ರೀಮತಿ ಭಾಗೀರಥಿ ಟಿ (ಕೊಟ್ಟೂರು) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಟ್ಟೂರು ಬಸ್ ನಿಲ್ದಾಣ, ಬಸ್ ಶೆಲ್ಟರ್ಸ್, ಸಾರ್ವಜನಿಕರಿಗೆ ಕುಳಿತುಕೊಳ್ಳಲು ಸ್ಥಳವಿಲ್ಲದಿರುವುದು ಇನ್ನೂ ಅನೇಕ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಈ ಎಲ್ಲಾ ಸುಧಾರಣೆಗಳಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಇ) ಈ ಸಮಸ್ಯೆಗಳನ್ನು ಪರಿಹರಿಸುವ ಕಾಮಗಾರಿಗಳಿಗಾಗಿ ಕಾಯ್ದಿರಿಸಿರುವ ಅನುದಾನ ಎಷ್ಟು?

ಶ್ರೀ ಎಸ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಬಂದಿದೆ

ಆ) ಪ್ರಯಾಣಿಕರಿಗೆ ಆಸನ ವ್ಯವಸ್ಥೆಯನ್ನು ಒದಗಿಸುವುದರ ಜೊತೆಗೆ ನೆಲಹಾಸನ್ನು ಉತ್ತಮಪಡಿಸಲು ಕಾಮಗಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ

ಇ) ರೂ 8 00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ

326 (656) ಶ್ರೀ ಬೋಪಯ್ಯ ಕೆ ಜಿ (ಮಡಿಕೇರಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಹೆಚ್ಚು ಮಳೆಯಾಗುವುದರಿಂದ ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕಾಗಿ ಪ್ರತ್ಯೇಕ ರಸ್ತೆ ನಿಧಿ ಸ್ಥಾಪಿಸಬೇಕೆಂಬ ನಂಜುಂಡಪ್ಪ ವರದಿಯಲ್ಲಿ ತಿಳಿಸಿರುವುದು ಸರ್ಕಾರಕ್ಕೆ ಗೊತ್ತಿದೆಯೇ,

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು ಮತ್ತು ಕೈಗೊಂಡ ಕ್ರಮವೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು

ಆ) ಕೊಡಗು ಜಿಲ್ಲೆಯ 410 24 ಕಿಮೀ ಉದ್ದದ ರಾಜ್ಯ ಹೆದ್ದಾರಿಯನ್ನು ರೂ 1592 66 ಲಕ್ಷ ಮೊತ್ತ ಅಂದಾಜಿನಲ್ಲಿ 3 ವರ್ಷಗಳ ನಿರ್ವಹಣೆಯನ್ನು (2005–2008) ಕೈಗೆತ್ತಿಕೊಳ್ಳಲಾಗಿದೆ 2006–07ನೇ ಸಾಲಿಗೆ ಕೊಡಗು ಜಿಲ್ಲೆಯ 807 00 ಕಿಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಯ ದುರಸ್ತಿ ನಿರ್ವಹಣೆ ಅಭಿವೃದ್ಧಿಗಾಗಿ ಲೆಕ್ಕ ಶೀರ್ಷಿಕೆ 3054–12ನೇ ಹಣಕಾಸು ಅಡಿಯಲ್ಲಿ ರೂ 307 20 ಲಕ್ಷ ಮತ್ತು ಅನುದಾನ ಬಿಡುಗಡೆ ಮಾಡಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ

327 (657) ಶ್ರೀ ಬೋಪಯ್ಯ ಕೆ ಜಿ (ಮಡಿಕೇರಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಮಡಿಕೇರಿ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಸಲ್ಲಿಸಲಾಗಿರುವ ಪ್ರಸ್ತಾವನೆಗಳೆಷ್ಟು,

ಆ) ಈ ಯೋಜನೆಯಡಿ ಬಿಡುಗಡೆಯಾಗಿರುವ ಹಣ ಎಷ್ಟು (ವಿವರಗಳನ್ನು ನೀಡುವುದು)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಮಡಿಕೇರಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಸಲ್ಲಿಸಲಾಗಿರುವ ಪ್ರಸ್ತಾವನೆಗಳ ವಿವರ ಈ ಕೆಳಕಂಡಂತಿದೆ

ಕ್ರ. ಸಂ	ವರ್ಷ	ಕಾಮಗಾರಿಗಳ ಹೆಸರು	ಷರಾ
1	2003–04	ಮಡಿಕೇರಿ ಜಿಲ್ಲೆಯ ಶನಿವಾರಸಂತೆ–ಗೋಪಾಲಪುರ–ಬಾನವಾರ ರಸ್ತೆ ಕಿಮೀ 0 00 ರಿಂದ ಕಿಮೀ 4 80 ವರೆಗೆ ರಸ್ತೆ ಅಭಿವೃದ್ಧಿ (ಆಯ್ದಭಾಗಗಳಲ್ಲಿ)	ಕಾಮಗಾರಿಯು ಪೂರ್ಣ ಗೊಂಡಿದೆ
2	2004–05	ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಭಾಗಮಂಡಲದಿಂದ ತಲಕಾವೇರಿ ರಸ್ತೆ (ಆಯ್ದಭಾಗಗಳಲ್ಲಿ) ಕಿಮೀ 0 00 ರಿಂದ 8 20 ವರೆಗೆ	ಪ್ರಗತಿಯಲ್ಲಿದೆ
3	2006–07	ಕೊಡಗು ಜಿಲ್ಲೆಯ ರಾಜ್ಯ ಹೆದ್ದಾರಿ ಮಡಿಕೇರಿ ದಿಂದ ಭಾಗಮಂಡಲ ರಸ್ತೆ ಸುಧಾರಣೆ–ಕಿಮೀ 15 00 ರಿಂದ ಕಿಮೀ 27 80 ರವರೆಗೆ (ಮಡಿಕೇರಿ ಕ್ಷೇತ್ರ)	ಹೊಸ ಕಾಮಗಾರಿ

ಆ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಬಿಡುಗಡೆಯಾಗಿರುವ ಹಣದ ವಿವರ ಈ ಕೆಳಕಂಡಂತಿದೆ,

ಕ್ರ. ಸಂ	ವರ್ಷ	ಕಾಮಗಾರಿಗಳ ಸಂಖ್ಯೆ	ಮಂಜೂರಾದ ಬಿಡುಗಡೆಯಾದ ಹಣ (ರೂ ಲಕ್ಷಗಳಲ್ಲಿ)
1	2003–04	1	60 00
2	2004–05	2	50 00
3	2006–07	1	70 00

328 (658) ಶ್ರೀ ಬೋಪಯ್ಯ ಕೆ ಜಿ (ಮಡಿಕೇರಿ). ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ 2005–06ನೇ ಸಾಲಿನಲ್ಲಿ ರಸ್ತೆಗಳ ಅಭಿವೃದ್ಧಿ ಮತ್ತು ಸೇತುವೆಗಳ ನಿರ್ಮಾಣಕ್ಕೆ ಬಂದಿರುವ ಪ್ರಸ್ತಾವನೆಗಳೆಷ್ಟು,

ಆ) ಆ ಪೈಕಿ ಮಂಜೂರಾತಿ ನೀಡಲಾಗಿರುವ ಪ್ರಸ್ತಾವನೆಗಳಾವುವು ನಿಗಧಿಪಡಿಸಿರುವ ಮೊತ್ತವೆಷ್ಟು (ಕ್ಷೇತ್ರವಾರು ವಿವರ ನೀಡುವುದು)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕೊಡಗು ಜಿಲ್ಲೆಯಲ್ಲಿ 2005–06ನೇ ಸಾಲಿನಲ್ಲಿ ರಸ್ತೆಗಳ ಅಭಿವೃದ್ಧಿ ಮತ್ತು ಸೇತುವೆಗಳ ನಿರ್ಮಾಣದ ಪ್ರಸ್ತಾವನೆ ವಿವರಗಳು ಈ ಕೆಳಕಂಡಂತಿದೆ

ಕ್ರ ಸಂ	ಯೋಜನೆ ಹೆಸರು	ಮಡಿಕೇರಿ		ಸೋಮವಾರಪೇಟೆ		ವಿರಾಜಪೇಟೆ	
		ರಸ್ತೆ	ಸೇತುವೆ	ರಸ್ತೆ	ಸೇತುವೆ	ರಸ್ತೆ	ಸೇತುವೆ
1	ಸಿಆರ್‌ಎಫ್	2	–	3	–	2	–
2	ನಬಾರ್ಡ್	5	6	4	12	3	2
3	ಕೆಆರ್‌ಡಿಸಿಎಲ್	3	4	5	13	3	8
	ಒಟ್ಟು	10	10	12	25	8	10

ಆ) ಮಂಜೂರಾಗಿರುವ ಕಾಮಗಾರಿಗಳ ವಿವರ

ಕ್ರ ಸಂ	ಯೋಜನೆ ಹೆಸರು	ಮಡಿಕೇರಿ				ಸೋಮವಾರಪೇಟೆ				ವಿರಾಜಪೇಟೆ			
		ರಸ್ತೆ	ಮೊತ್ತ	ಸೇತುವೆ	ಮೊತ್ತ	ರಸ್ತೆ	ಮೊತ್ತ	ಸೇತುವೆ	ಮೊತ್ತ	ರಸ್ತೆ	ಮೊತ್ತ	ಸೇತುವೆ	ಮೊತ್ತ
1	ಸಿಆರ್ ಎಫ್	2	120	–	–	2	130	–	–	1	7–	–	–
2	ನಬಾರ್ಡ್	2	163	1	30	3	160	–	–	–	–	2	150
3	ಕೆಆರ್‌ಡಿಸಿಎಲ್	3	394	1	85	5	639	2	370	3	563	1	70
	ಒಟ್ಟು	7	677	2	115	10	929	2	370	4	633	3	220

329 (326) ಶ್ರೀ ಧ್ರುವನಾರಾಯಣ್ ಆರ್ (ಸಂತೇಮರಳ್ಳಿ) ಸಹಕಾರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರ ಸಾಲವನ್ನು ಮನ್ನಾ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) .

ಅ) ಮತ್ತು ಆ) ಸಹಕಾರ ಸಂಸ್ಥೆಗಳು ರೈತರಿಗೆ ನೀಡಿರುವ ಕೃಷಿ ಸಾಲಗಳನ್ನು ಮನ್ನಾ ಮಾಡುವ ಪ್ರಸ್ತಾವವು ಸರ್ಕಾರದ ಪರಿಶೀಲನೆಯಲಲಿ ಬರುತ್ತದೆ

330 (327) ಶ್ರೀ ಧ್ರುವನಾರಾಯಣ್ ಆರ್ (ಸಂತೇಮರಳ್ಳಿ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾನೂನು ಬಾಹಿರವಾಗಿ ವಾಹನಗಳಲ್ಲಿ ಅಧಿಕ ಭಾರ ಹಾಕಿ ವಾಹನ ಸಂಚಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು,

ಇ) ಅಧಿಕ ಭಾರದ ವಾಹನ ಚಾಲನೆಯಿಂದ ರಸ್ತೆಗಳು ಹಾಳಾಗುತ್ತಿರುವುದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎನ್ ಚಲುವನಾರಾಯಣಸ್ವಾಮಿ (ಸಾರಿಗೆ ಸಚಿವರು)

ಅ) ಬಂದಿದೆ

ಆ) ಸಾರಿಗೆ ಇಲಾಖೆಯು ಅಧಿಕ ಭಾರದ ಸರಕು ಸಾಗಿಸುವ ವಾಹನಗಳನ್ನು ತಪಾಸಣೆ ನಡೆಸಿ, ತಪ್ಪಿತಸ್ಥ ಚಾಲಕರ ಮಾಲೀಕರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲು ರಾಜ್ಯದ ಎಲ್ಲ ಪ್ರಾದೇಶಿಕ /ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಕಾಲ ಕಾಲಕ್ಕೆ ಸುತ್ತೋಲೆಗಳನ್ನು ನೀಡಿ ಸೂಚಿಸಲಾಗಿರುತ್ತದೆ

ಇ) ಸಾರಿಗೆ ಇಲಾಖೆಯು ಅಧಿಕ ಭಾರದ ವಾಹನ ಚಾಲನೆಯಿಂದ ರಸ್ತೆಗಳು ಹಾಳಾಗುತ್ತಿರುವುದನ್ನು ತಡೆಗಟ್ಟಲು ನಿರಂತರವಾಗಿ ತನಿಖಾ ಕಾರ್ಯಗಳನ್ನು ಕೈಗೊಳ್ಳುವುದರ ಜೊತೆಗೆ ವಿಶೇಷ ತನಿಖಾ ತಂಡಗಳನ್ನು

ರಚಿಸಿ, ಆಯ್ದ ಸ್ಥಳಗಳಲ್ಲಿ ನಿಯೋಜಿಸಿ ತಪಾಸಣೆ ನಡೆಸಲಾಗುತ್ತಿದೆ ಹಾಗೂ ಸಾರಿಗೆ ಇಲಾಖೆಯು ಹೆದ್ದಾರಿ ಪ್ರಾಧಿಕಾರ ಮತ್ತು ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಅಧಿಕ ಭಾರದ ಅದಿರು ಸಾಗಾಣಿಕೆ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ 2006–07ನೇ ಸಾಲಿನಲ್ಲಿ ಡಿಸೆಂಬರ್ 2006ರ ಅಂತ್ಯದವರೆಗೆ ಒಟ್ಟು 4,80,236 ವಾಹನಗಳನ್ನು ತಪಾಸಣೆ ಮಾಡಿ, 18,545 ವಾಹನಗಳ ಚಾಲಕರ/ಮಾಲೀಕರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ ರೂ 8,92,12,601/ಗಳ ರಾಜೀದಂಡವನ್ನು ಈ ಅವಧಿಯಲ್ಲಿ ವಸೂಲಿ ಮಾಡಲಾಗಿದೆ

331 (328) ಶ್ರೀ ಧ್ರುವನಾರಾಯಣ್ ಆರ್ (ಸಂತೇಮರಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ನೇ ಮತ್ತು 2006–07ನೇ ಸಾಲಿನಲ್ಲಿ ಕೇಂದ್ರ ರಸ್ತೆ ನಿಧಿ ಹಾಗೂ ನಬಾರ್ಡ್ ಯೋಜನೆಯಡಿಯಲ್ಲಿ ರಾಜ್ಯಕ್ಕೆ ಮಂಜೂರಾದ ಹಣವೆಷ್ಟು,

ಆ)ಸದರಿ ಸಾಲುಗಳಲ್ಲಿ ಈ ಯೋಜನೆಯಡಿಯಲ್ಲಿ ಚಾಮರಾಜನಗರ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಯ 5 ವಿಧಾನ ಸಭಾ ಕ್ಷೇತ್ರಗಳಿಗೆ ಹಂಚಿಕೆಯಾಗಿರುವ ಹಣವೆಷ್ಟು (ಜಿಲ್ಲಾವಾರು ಮತ್ತು ಕ್ಷೇತ್ರವಾರು ವಿವರ ನೀಡುವುದು),

ಇ) ಕನಾಟಕ ರಾಜ್ಯ ಹೆದ್ದಾರಿ ವತಿಯಿಂದ ಚಾಮರಾಜನಗರ ಜಿಲ್ಲೆಗೆ 2005–06, 2006–07ನೇ ಸಾಲಿನಲ್ಲಿ ಮಂಜೂರಾದ ಹಣವೆಷ್ಟು ಹಾಗೂ ಸಂತೇಮರಳ್ಳಿ ವಿಧನ ಸಭಾ ಕ್ಷೇತ್ರಕ್ಕೆ 2005–06, 2006–07ನೇ ಸಾಲಿನಲ್ಲಿ ಮಂಜೂರಾದ ಹಣವೆಷ್ಟು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು).

ಅ) ಕೇಂದ್ರ ರಸ್ತೆ ನಿಧಿ ಯೋಜನೆಯಲ್ಲಿ 2005–06 ರಲ್ಲಿ 110 20 ಕೋಟಿ ರೂ ಹಾಗೂ 2006–07ನೇ ಸಾಲಿನಲ್ಲಿ 127 45 ಕೋಟಿ ರೂ ಗಳು ಮಂಜೂರಾಗಿದೆ ನಬಾರ್ಡ್ ಯೋಜನೆಯಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ 2005–06ರಲ್ಲಿ 258 90 ಕೋಟಿ ರೂ ಹಾಗೂ 2006–07ರ ಮೊದಲ ಹಂತದಲ್ಲಿ ಈವರೆಗೆ 228 18 ರೂ ಗಳ ಮೊತ್ತದ ಕಾಮಗಾರಿಗಳು ಮಂಜೂರಾಗಿದೆ

ಆ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಚಾಮರಾಜನಗರ ಜಿಲ್ಲೆಗೆ ಮಂಜೂರಾದ ಮೊತ್ತ

(ಲಕ್ಷ ರೂ ಗಳಲ್ಲಿ)

ವಿಧಾನ ಸಭಾ ಕ್ಷೇತ್ರ	2005–06		2006–07	
	ಕಾಮಗಾರಿ ಸಂಖ್ಯೆ	ಮಂಜೂರಾದ ಹಣ	ಕಾಮಗಾರಿ ಸಂಖ್ಯೆ	ಮಂಜೂರಾದ ಹಣ
ಚಾಮರಾಜ ನಗರ	–	–	1	100 00
ಗುಂಡ್ಲುಪೇಟೆ	1	60 00	1	50 00
ಹನೂರು	1	150 00	1	100 00
ಕೊಳ್ಳೇಗಾಲ	–	–	1	50 00
ಸಂತೇಮರಳ್ಳಿ	–	–	1	50 00
ಒಟ್ಟು	2	210	5	250 00

ನಬಾರ್ಡ್ ಯೋಜನೆಯಡಿ ಚಾಮರಾಜನಗರ ಜಿಲ್ಲೆಗೆ ಮಂಜೂರಾದ ಕಾಮಗಾರಿಗಳು ಈ ಕೆಳಗಿನಂತಿದೆ

(ಲಕ್ಷ ರೂ ಗಳಲ್ಲಿ)

ವಿಧಾನ ಸಭಾ ಕ್ಷೇತ್ರ	2005–06		2006–07	
	ಕಾಮಗಾರಿ ಸಂಖ್ಯೆ	ಮಂಜೂರಾದ ಹಣ	ಕಾಮಗಾರಿ ಸಂಖ್ಯೆ	ಮಂಜೂರಾದ ಹಣ
ಚಾಮರಾಜ ನಗರ	3	202	1	44
ಗುಂಡ್ಲುಪೇಟೆ	4	171	3	149
ಹನೂರು	1	190	2	85
ಕೊಳ್ಳೇಗಾಲ	2	84	1	57
ಸಂತೇಮರಳ್ಳಿ	3	103	1	98
ಒಟ್ಟು	13	750	8	433

ಇ) ಚಾಮರಾಜನಗರ ಜಿಲ್ಲೆಗೆ 2005–06 ಮತ್ತು 2006–07ನೇ ಸಾಲಿನಲ್ಲಿ ರಾಜ್ಯ ಹೆದ್ದಾರಿ ವತಿಯಿಂದ ವಿವಿಧ ಯೋಜನೆಗಳಿಗೆ ನೀಡಿದ ಅನುದಾನ ಕೆಳಗಿನಂತಿದೆ

ಕ್ರಸಂ	ಯೋಜನೆ	2005–06	2006–07
1	ರಾಜ್ಯ ಹೆದ್ದಾರಿ ನಿರ್ವಹಣೆ	1147 00	–
2	ಸೇತುವೆ ನಿರ್ಮಾಣ	107 00	–
3	ರಸ್ತೆ ಅಭಿವೃದ್ಧಿ	340 00	–
	ಒಟ್ಟು	1594 00	–

ಸಂತೇಮರಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಮಂಜೂರಾದ ಹಣ ವಿವಿಧ ಯೋಜನೆಗಾಗಿ ನೀಡಿದ ಅನುದಾನ,

ಕ್ರಸಂ	ಯೋಜನೆ	2005–06	2006–07
1	ಸೇತುವೆ	45 00	–
2	ರಸ್ತೆ ಅಭಿವೃದ್ಧಿ	110 00	–
	ಒಟ್ಟು	155 00	–

332 (329) ಶ್ರೀ ಧ್ರುವನಾರಾಯಣ್ ಆರ್ (ಸಂತೇಮರಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಕ್ರಮ ಮರಳು ದಂಧೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು,

ಆ) ಈ ಮರಳು ದಂಧೆಯಿಂದ ಅಂತರ್ಜಲದ ಮಟ್ಟ ಕುಸಿಯುತ್ತಿರುವುದರ ಬಗೆಗಿನ ವೈಜ್ಞಾನಿಕ ವರದಿ ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಪರವಾನಿಗೆ ಇಲ್ಲದೆ ಅಕ್ರಮವಾಗಿ ಮರಳನ್ನು ಕಳ್ಳಸಾಗಾಣಿಕೆ ಮಾಡುತ್ತಿರುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ನಿಯಂತ್ರಣವೇನು,

ಈ) ಚಾಮರಾಜನಗರ ಜಿಲ್ಲೆಯಲ್ಲಿ ಪರವಾನಿಗೆ ಹೊಂದಿ ಮತ್ತು ಪರವಾನಿಗೆ ಹೊಂದಿಲ್ಲದೆ ಮರಳು ಸಾಗಾಣಿಕೆ ಮಾಡುತ್ತಿರುವವರ ಸಂಖ್ಯೆ ಎಷ್ಟು,

ಉ) ಪರವಾನಿಗೆ ಇಲ್ಲದೆ ಸಾಗಾಣಿಕೆ ಮಾಡುವವರ ವಿರುದ್ಧ ಸರ್ಕಾರ ಎಷ್ಟು ಪ್ರಮಾಣದಲ್ಲಿ ಕೇಸು ದಾಖಲಿಸಿದೆ,

ಊ) ದಂಡದ ರೂಪದಲ್ಲಿ ಸರ್ಕಾರಕ್ಕೆ ಬಂದಿರುವ ಹಣವೆಷ್ಟು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು).

ಅ) ಸರ್ಕಾರದ ಗಮನಕ್ಕೆ ಬಂದಿದೆ ಅನಧಿಕೃತ ಮರಳು ಗಣಿಗಾರಿಕೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ರಾಜ್ಯಸರ್ಕಾರವು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ CI 05 MMN 2005, ದಿ 6 8 2005ರಲ್ಲಿ ಜಿಲ್ಲಾಮಟ್ಟದ ಉಸ್ತುವಾರಿ ಸಮಿತಿಯನ್ನು ರಚಿಸಿದೆ ಈ ಸಮಿತಿಯಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪೋಲೀಸ್ ಅಧಿಕಾರಿಗಳು, ಪ್ರಾದೇಶಿಕ ಸಾರಿಗೆ ಅಧಿಕಾರಿ, ಸಂಬಂಧಪಟ್ಟ ತಹಸೀಲ್ದಾರ್ ಮತ್ತು ಜಿಲ್ಲೆಯ ಹಿರಿಯ ಭೂವಿಜ್ಞಾನಿ/ಉಪ ನಿರ್ದೇಶಕರು ಸದಸ್ಯರಾಗಿರುತ್ತಾರೆ ಈ ಸಮಿತಿಯು ಜಿಲ್ಲೆಯಲ್ಲಿ ಅಧಿಕೃತ ಮರಳು ಗಣಿಗಾರಿಕೆ ಮಾಡುವ ಸಲುವಾಗಿ ಸ್ಥಳಗಳನ್ನು ಗುರ್ತಿಸಿ ಸದರಿ ಸ್ಥಳಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಮರಳು ಹರಾಜು ಸಮಿತಿ ಮೂಲಕ ಬಹಿರಂಗ ಹರಾಜು ಮಾಡಿ ವಿಲೇವಾರಿ ಮಾಡುವುದು ಮರಳು ಗಣಿಗಾರಿಕೆಯಿಂದ ಪರಿಸರಕ್ಕೆ ಅಥವಾ ಬೇರೆ ರೀತಿಯ ತೊಂದರೆಗಳು ಕಂಡುಬಂದಲ್ಲಿ ಅಂತಹ ಪ್ರದೇಶದಲ್ಲಿ ಗಣಿಗಾರಿಕೆ ನಡೆಯದಂತೆ ಕ್ರಮಕೈಗೊಳ್ಳಲು ಸದರಿ ಸಮಿತಿಯು ಸಕ್ಷಮ ಪ್ರಾಧಿಕಾರವಾಗಿರುತ್ತದೆ ಅಕ್ರಮ ಗಣಿಗಾರಿಕೆ/ಅನಧಿಕೃತ ಸಾಗಾಣಿಕೆ ತಡೆಗಟ್ಟಲು ರಾಜ್ಯ ಮಟ್ಟದಲ್ಲಿ, ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾಮಟ್ಟದಲ್ಲಿ ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಟಾಸ್ಕ್‌ಪೋರ್ಸ್ ಸಮಿತಿಗಳನ್ನು ರಚಿಸಲಾಗಿದೆ

ಆ) ಸರ್ಕಾರದ ಗಮನಕ್ಕೆ ಬಂದಿದೆ

ಇ) ಅಕ್ರಮ ಮರಳು ಗಣಿಗಾರಿಕೆಯನ್ನು ತಡೆಯಲು ಜಿಲ್ಲಾಮಟ್ಟದ ಉಸ್ತುವಾರಿ ಸಮಿತಿಯನ್ನು ರಚಿಸಲಾಗಿದೆ ಇದಲ್ಲದೆ ರಾಜ್ಯದಾದ್ಯಂತ 20 ತನಿಖಾ ಠಾಣೆಗಳನ್ನು ಸ್ಥಾಪಿಸಲಾಗಿದೆ

ಈ) ಚಾಮರಾಜನಗರ ಜಿಲ್ಲೆಯಲ್ಲಿ ಪರವಾನಗಿ ಹೊಂದಿ ಮರಳು ಸಾಗಾಣಿಕೆ ಮಾಡುತ್ತಿರುವವರ ಸಂಖ್ಯೆ-4 ಪರವಾನಿಗೆ ಹೊಂದಿಲ್ಲದ ನಾಲ್ಕು ಪ್ರಕರಣಗಳಲ್ಲಿ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಿಸಲಾಗಿದೆ

ಉ) 2005-06ನೇ ಸಾಲಿನಲ್ಲಿ ಪರವಾನಗಿ ಇಲ್ಲದೆ ಸಾಗಾಣೆ ಮಾಡುತ್ತಿದ್ದವರ ವಿರುದ್ಧ 147 ದೂರುಗಳನ್ನು ದಾಖಲಿಸಲಾಗಿದೆ

ಊ) 2005-06ರಲ್ಲಿ ರೂ 1,06,33,957/- ಗಳ ದಂಡವನ್ನು ವಸೂಲಿ ಮಾಡಲಾಗಿದೆ

333 (330) ಶ್ರೀ ಧ್ರುವನಾರಾಯಣ್ ಆರ್ (ಸಂತೇಮರಳ್ಳಿ) ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಕ್ಸಲ್‌ರ ಹಾವಳಿ ಇರುವ ಜಿಲ್ಲೆಗಳಾವುವು,

ಆ) ನಕ್ಷಲರ ಹಾವಳಿಯನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು,

ಇ) ನಕ್ಸಲರ ಹಾವಳಿ ಇರುವ ಜಿಲ್ಲೆಗಳಲ್ಲಿ ಇದಕ್ಕಾಗಿ ನಿಗಧಿಪಡಿಸಿರುವ ಅನುದಾನವೆಷ್ಟು, ಈ ಅನುದಾನವನ್ನು ಯಾವ ಕಾರ್ಯಕ್ರಮಕ್ಕಾಗಿ ನಿಗಧಿಪಡಿಸಿದೆ,

ಈ) ನಕ್ಸಲ್ ಸಂಘಟನೆಯಲ್ಲಿ ವಿದ್ಯಾವಂತ ನಿರುದ್ಯೋಗಿಗಳು ತೊಡಗಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಉ) ಹಾಗಿದ್ದಲ್ಲಿ, ಇನ್ನು ಮುಂದೆ ವಿದ್ಯಾವಂತ ನಿರುದ್ಯೋಗಿಗಳು ಈ ಸಂಘಟನೆಗೆ ಸೇರದಂತೆ ಮಾಡಲು ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ಹಿಂದುಳಿದ ಜಿಲ್ಲೆಗಳಲ್ಲಿ ನಿರುದ್ಯೋಗಿ ಯುವಕ/ಯುವತಿಯರಿಗೆ ಉದ್ಯೋಗದ ಅವಕಾಶ ಕಲ್ಪಿಸಲು ಸರ್ಕಾರ ಮುಂದೆ ಬರುವುದೆ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ತುಮಕೂರು, ಕೋಲಾರ, ಚಿಕ್ಕಮಗಳೂರು, ಉಡುಪಿ ದಕ್ಷಿಣ ಕನ್ನಡ, ಬಳ್ಳಾರಿ, ಬೀದರ್, ಚಿತ್ರದುರ್ಗ, ಶಿವಮೊಗ್ಗ, ಗುಲ್ಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು ನಕ್ಸಲ್ ಪೀಡಿತ ಜಿಲ್ಲೆಗಳಾಗಿವೆ

ಆ) ರಾಜ್ಯದಲ್ಲಿ ನಕ್ಸಲ್ ಹಾವಳಿಯನ್ನು ತಡೆಗಟ್ಟಲು ಸರ್ಕಾರವು ಎ ಎನ್ ಎಫ್ ದಳವನ್ನು ರಚಿಸಿರುತ್ತದೆ ಪ್ರಸ್ತುತ ಪ್ರಮುಖ ನಕ್ಸಲ್ ಪೀಡಿತ ಜಿಲ್ಲೆಗಳಲ್ಲಿ ಪೋಲೀಸ್ ಅಧೀಕ್ಷಕರ ಅಧೀನದಲ್ಲಿ ಎ ಎಸ್ ಎಫ್ ತುಕಡಿಗಳನ್ನು ರಚಿಸಿ ಕಾರ್ಯಾಚರಣೆಗೆ ಕೊಡಲಾಗಿದೆ

ಇ) ನಕ್ಸಲ್ ಭಾದಿತ ಜಿಲ್ಲೆಗಳಿಗೆ 2005–06ನೇ ಸಾಲಿನಲ್ಲಿ ಹಾಗೂ 2006–07ನೇ ಸಾಲಿನಲ್ಲಿ ನಿಗಧಿಪಡಿಸಲಾದ ಅನುದಾನದ ವಿವರವನ್ನು ಈ ಕೆಳಕಂಡಂತಿದೆ

(ರೂ ಕೋಟಿಗಳಲ್ಲಿ)

ಕ್ರ.ಸಂ	ವರ್ಷ	ನಿಗದಿಪಡಿಸಲಾದ ಅನುದಾನ
1	2005–06	8 00
2	2006–07	15 20

ಈ ಅನುದಾನವನ್ನು ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳುವ ಸಲುವಾಗಿ ನಿಗದಿ ಪಡಿಸಿದೆ

ಈ) ಹೌದು

ಉ) ವಿದ್ಯಾವಂತ ನಿರುದ್ಯೋಗಿಗಳು ಈ ಸಂಘಟನೆಗೆ ಸೇರದಂತೆ ಮಾಡಲು ಕರ್ನಾಟಕ ರಾಜ್ಯ ಪೊಲೀಸ್ ಹೌಸಿಂಗ್ ಕಾರ್ಪೊರೇಷನ್ ವತಿಯಿಂದ ಮಲೆನಾಡು ಪ್ರದೇಶದ ಬುಡಕಟ್ಟು ಯುವಕರಿಗೆ ವೃತ್ತಿಪರ ತರಬೇತಿಯನ್ನು ಆಗುಂಬೆಯಲ್ಲಿ ಕೊಡಲಾಗುತ್ತಿದೆ 2004 ರಿಂದ '2007 (ಜನವರಿ) ರವರೆಗೆ 240 ನಿರುದ್ಯೋಗಿ ಯುವಕರಿಗೆ ವೃತ್ತಿಪರ ತರಬೇತಿ ಕೊಡಲಾಗಿದೆ

ಈ ಸಂಬಂಧ ವಿವರಗಳುಳ್ಳ ಟಿಪ್ಪಣಿಯನ್ನು ಲಗತ್ತಿಸಿದೆ

364 (648) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಮೆಟ್ರೋ ರೈಲು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದು ನಿಜವಲ್ಲವೇ,

ಆ) ಹಾಗಿದ್ದಲ್ಲಿ, ಈ ಯೋಜನೆಯ ಕಾಮಗಾರಿಯನ್ನು ಯಾವಾಗ ಆರಂಭಿಸಲಾಗುವುದು,

ಇ) ಈ ಯೋಜನೆಯಿಂದ ನಿರ್ವಸಿತರಾಗುವವರಿಗೆ ಯಾವ ಆಧಾರದ ಮೇಲೆ ಪರಿಹಾರ ಧನ ನಿರ್ಧರಿಸಲಾಗುವುದು ಹಾಗೂ ಇದಕ್ಕಾಗಿ ನಿಗದಿಪಡಿಸಲಾಗಿರುವ ಅನುದಾನ ಎಷ್ಟು,

ಈ) ಈ ಯೋಜನೆ ಅನುಷ್ಠಾನಕ್ಕಾಗಿ ಇಲ್ಲಿಯವರೆಗೆ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಹಾಗೂ ವಿತರಿಸಲಾಗಿರುವ ಪರಿಹಾರದ ಮೊತ್ತ ಎಷ್ಟು,

ಉ) ಈ ಯೋಜನೆಯ ಭೂಸ್ವಾಧೀನದ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗಿವೆಯೇ,

ಊ) ಹಾಗಿದ್ದಲ್ಲಿ, ಯೋಜನೆಯ ಶೀಘ್ರ ಅನುಷ್ಠಾನಕ್ಕಾಗಿ ನಿಗಮ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು).

ಅ) ಹೌದು

ಆ) ದಿನಾಂಕ 2–10–2006 ರಂದು ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ

ಇ) ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಕಾಯಿದೆ, 1966ರ ಪ್ರಕಾರ ಯುಕ್ತ ಭೂ ಪರಿಹಾರವನ್ನು ಕೆ ಐ ಎ ಡಿ ಬಿ ವಿಶೇಷ ಭೂಸ್ವಾಧೀನಾಧಿಕಾರಿ, ಯವರಿಂದ ಸೆಕ್ಷನ್ 29(2) ಪ್ರಕಾರ ಪರಸ್ಪರ ವಿಚಾರಣೆ ಮೂಲಕ ಹಾಗೂ ಅವಾರ್ಡ್ ಮೂಲಕ ನಿಗದಿಪಡಿಸಲಾಗುವುದು ಭೂ ಮಾಲೀಕರಿಗೆ ವಿಶೇಷ ಭೂಸ್ವಾಧೀನ ಪರಿಹಾರವನ್ನು ಮಾರುಕಟ್ಟೆ ಮೌಲ್ಯ ನಿರ್ಧಾರಣೆಯ ಮೂಲಕ ಹಾಗೂ ಲೋಕೋಪಯೋಗಿ ಇಲಾಖೆ ಸೂತ್ರದ ಪ್ರಕಾರ ಕಟ್ಟಡ ಕಳೆದುಕೊಂಡವರಿಗೆ ಸ್ಥಳಾಂತರ ವೆಚ್ಚವನ್ನು ನೀಡಲಾಗುವುದು ವಸತಿ ಮತ್ತು ವ್ಯಾಪಾರ ಸಂತ್ರಸ್ಥರಿಗೆ ಭತ್ಯೆ ನಿಡುವ ಮೂಲಕ ಅವರ ತೊಂದರೆ ಪರಿಹರಿಸಲಾಗುವುದು ಈ ಬಾಬ್ತು ರೂ 600/– (ಆರು ನೂರು) ಕೋಟಿ ಅನುದಾನ ಕಾದಿರಿಸಲಾಗಿದೆ

ಈ) ಯೋಜನೆ ಅನುಷ್ಠಾನಕ್ಕಾಗಿ ಒಟ್ಟು 227 978 ಎಕರೆ ಜಮೀನು ಬೇಕಾಗಿದೆ ಈ ಪೈಕಿ 201 078 ಸರ್ಕಾರಿ ಮತ್ತು ಸರ್ಕಾರಿ ಒಡೆತನ ಹೊಂದಿರುವ ಸಂಸ್ಥೆಗಳ ಜಮೀನು ಹಾಗೂ 26 90 ಎಕರೆ ಖಾಸಗಿ ಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತಿದ್ದು ಈವರೆಗೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ 127 538 ಎಕರೆ ಜಮೀನುಗಳನ್ನು ವಶಪಡಿಸಿಕೊಂಡಿದ್ದು, ಈ ಬಾಬ್ತು 125 36 ಕೋಟಿ ಪರಿಹಾರವನ್ನು ಪಾವತಿಸಲಾಗಿದೆ ಖಾಸಗಿಯವರಿಗೆ ಇದುವರೆವಿಗೆ ಭೂಸ್ವಾಧೀನ ಪರಿಹಾರ ನೀಡಿರುವುದಿಲ್ಲ

ಉ) ಹೌದು

ಊ) 1 ಪ್ರಕರಣಗಳನ್ನು ಇತ್ಯರ್ಥ ಮಾಡಲು ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿದೆ

2 ಸದರಿ ಪ್ರಕರಣಗಳಲ್ಲಿ ತಡೆಯಾಜ್ಞೆಗಳಿರುವುದಿಲ್ಲ

3 ಕೆಳಕಂಡ ಷೆಡ್ಯೂಲ್ ಪ್ರಕಾರ ಪ್ರಾಜೆಕ್ಟ್ ಆಯುಕ್ತಗೊಳಿಸಲಾಗಿದೆ

ಎ) ಪ್ರಾಜೆಕ್ಟ್ ಜನರಲ್ ಕನ್ಸಲ್ಟೆಂಟ್ ನೇಮಕಾತಿ	1–5–06 ರಿಂದ 15–5–07
ಬಿ) ಭೂಸ್ವಾಧೀನ ಕ್ರಮ	27–4–06 ರಿಂದ 2–3–07
ಸಿ) ಪೂರ್ವ ಪಶ್ಚಿಮ ಮಾರ್ಗ 1(7 ಕಿ ಮೀ) ಎತ್ತರಿಸಿದ ಮಾರ್ಗ ರೀಚ್–1	27–4–06 ರಿಂದ 31–3–10
ಡಿ) ಪೂರ್ವ ಪಶ್ಚಿಮ, ಉತ್ತರ ದಕ್ಷಿಣ ಮಾರ್ಗ ಸುರಂಗ ಮಾರ್ಗ (6 8 ಕಿಮೀ) ರೀಚ್–5	16–5–07 ರಿಂದ 15–9–11
ಇ) ಉತ್ತರ ದಕ್ಷಿಣ ಉತ್ತರ ಭಾಗದ ಎತ್ತರಿಸಿದ ಮಾರ್ಗ (6 7 ಕಿಮೀ) ರೀಚ್–3	16–5–07 ರಿಂದ 30–11–10
ಈ) ಪೂರ್ವ ಪಶ್ಚಿಮ ಪಶ್ಚಿಮ ಭಾಗದ ಎತ್ತರಿಸಿದ ಮಾರ್ಗ (7 45 ಕಿ ಮೀ) ರೀಚ್–2	16–5–07 ರಿಂದ 31–10–11
ಉ) ಉತ್ತರ ದಕ್ಷಿಣ ಮಾರ್ಗ, ದಕ್ಷಿಣ ಭಾಗದ ಎತ್ತರಿಸಿದ ಮಾರ್ಗ (5 15 ಕಿ ಮೀ) ರೀಚ್–4	16–5–07 ರಿಂದ 31–12–11

335 (649) Sri Dinesh Gundurao (Gandhinagara) Sri H D Revanna Public Works and Energy Minister

1) How many KM of Road Construction being taken up in Bangalore Mysore Nice Road works,

2) Provide information about already completed roads,

3) Is it true that in this project construction of peripheral ring roads are being done to connect the main road,

4) How many roads are being constructed like this,

5) For this project, how much of lands that have being acquired by the Government have being taken back,

6) When will this project be completed?

Sri H D Revanna (Public Works and Energy Minister)

1) In Bangalore Mysore Infrastructure Corridor Project the following road construction works are being taken up by NICEL

Express Way	111 00 K M
Peripheral Road	41 00 K M
Link Road	9 80 K M

2) The project road works are under progress

3) Yes

4) 41 00 KM of peripheral road and 9 90 KM of Link Road are being constructed

5) So far the Government has not taken back any lands

6) It is being taken up in phases

336 (650) ಶ್ರೀ ದಿನೇಶ್ ಗುಂಡೂರಾವ್, ಎಂ ಎಲ್ಎ (ಗಾಂಧಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2004–05, 2005–06 ಹಾಗೂ 2006–07ರಲ್ಲಿ ವರದಿಯಾಗಿರುವ ಬೀದಿನಾಯಿ ಕಚ್ಚಿರುವ ಪ್ರಕರಣಗಳೆಷ್ಟು,

ಆ) ಇವುಗಳಲ್ಲಿ ರೇಬೀಸ್ ಕಾಯಿಲೆ ತಗುಲಿರುವ ಪ್ರಕರಣಗಳೆಷ್ಟು ಹಾಗೂ ಈ ಕಾಯಿಲೆಯಿಂದ ಮರಣ ಹೊಂದಿರುವವರ ಸಂಖ್ಯೆ ಎಷ್ಟು,

ಇ) ಬೀದಿ ನಾಯಿಗಳ ಹಾವಳಿಯನ್ನು ಮಹಾನಗರ ಪಾಲಿಕೆ ನಿಯಂತ್ರಿಸದಿರಲು ಕಾರಣಗಳೇನು,

ಈ) ಈ ಬೀದಿ ನಾಯಿಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು,

ಉ) ಬೆಂಗಳೂರು ನಗರದಲ್ಲಿ ರೇಬೀಸ್ ಕಾಯಿಲೆ ಹರಡದಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು).

ಅ)

ವರ್ಷ	ಬೀದಿ ನಾಯಿ
2004–05	16747
2005–06	15363
2006–07 ಡಿಸೆಂಬರ್ ತನಕ (9ತಿಂಗಳಿಗೆ)	7875

ಆ) ಇದರಲ್ಲಿ 2004–05ನೇ ಸಾಲಿನಲ್ಲಿ 2 ರೇಬೀಸ್ ತಗುಲಿದ ಪ್ರಕರಣಗಳು ವರದಿಯಾಗಿದ್ದು ಇಬ್ಬರು ಮೃತಪಟ್ಟಿರುತ್ತಾರೆ 2005–06 ಮತ್ತು 2006–07ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಯಾವುದೇ ರೇಬೀಸ್ ಪ್ರಕರಣ ವರದಿಯಾಗಿರುವುದಿಲ್ಲ

ಇ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬೀದಿ ನಾಯಿಗಳನ್ನು Prevention of Cruelty to Animal Act, 1960 ಮತ್ತು ಅದರದೇ ಆದ Animal Birth Control Rule (Dogs) 2001ರ ಅಡಿಯಲ್ಲಿ ಸತತವಾಗಿ ನಿಯಂತ್ರಿಸಲಾಗುತ್ತಿದೆ

ಈ) ಬೆಂಗಳೂರು ಮಹಾನಗರ ಪಾಲಿಕೆ 2001 ರಿಂದ Animal Birth Control Rule (Dogs) 2001ರ ಅಡಿಯಲ್ಲಿ ಬೀದಿ ನಾಯಿಗಳ ನಿಯಂತ್ರಣಕ್ಕಾಗಿ ಬೀದಿ ನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಇದನ್ನು ಇನ್ನೂ ತೀವ್ರಗೊಳಿಸುವುದು ಮತ್ತು ನಿಯಮಾನುಸಾರ ಕಾನೂನಿನ ಅಡಿಯಲ್ಲಿ ಎಲ್ಲಾ ಸಮಸ್ಯಾತ್ಮಕ ನಾಯಿಗಳಿಗೆ ದಯಾಮರಣ ನೀಡಲಾಗುವುದು

ಉ) ಬೆಂಗಳೂರು ನಗರದಲ್ಲಿ ರೇಬೀಸ್ ಕಾಯಿಲೆ ತಡೆಗಟ್ಟಲು ನಗರ ಪಾಲಿಕೆಯಿಂದ ಬೀದಿ ನಾಯಿಗಳಿಗೆ ವರ್ಷಕ್ಕೊಮ್ಮೆ ರೇಬೀಸ್ ಲಸಿಕೆ ಹಾಕಲಾಗುತ್ತಿದೆ ಸಾಕು ನಾಯಿಗಳನ್ನು ಪರವಾನಗಿಗೊಳಪಡಿಸಲಾಗುತ್ತಿದೆ ಮತ್ತು ನಾಯಿ ಕಡಿತಕ್ಕೊಳಗಾದವರಿಗೆ ಉಚಿತವಾಗಿ ರೇಬೀಸ್ ಲಸಿಕೆ ನೀಡಲಾಗುತ್ತಿದೆ

337 (651) ಶ್ರೀ ದಿನೇಶ್ ಗುಂಡೂರಾವ್, (ಗಾಂಧಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಮೂಲ ಆಸರೆಯಾಗಿರುವ ಅಂತರ್ಜಲ ಮಟ್ಟ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ರೀತಿ ಅಂತರ್ಜಲ ಮಟ್ಟ ಕುಸಿತದಿಂದ ಕುಡಿಯುವ ನೀರಿಗೆ ತೊಂದರೆಯಾಗಿರುವುದು ನಿಜವಲ್ಲವೆ,

ಇ) ಅಂತರ್ಜಲ ಮಟ್ಟ ಸುಧಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಈ) ಈ ಕ್ರಮಗಳಿಂದ ಯಾವ ಯಾವ ಪ್ರದೇಶದಲ್ಲಿ ಅಂತರ್ಜಲ ಮಟ್ಟ ಏರಿಕೆಯಾಗಿದೆ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಬಂದಿದೆ

ಆ) ಹೌದು

ಇ) ನಗರ ಪ್ರದೇಶಗಳು ಕಟ್ಟಡ ಮತ್ತು ರಸ್ತೆಗಳಿಂದ ಕೂಡಿದ್ದು ಈ ಪ್ರದೇಶಗಳಲ್ಲಿ ಮಳೆ ನೀರಿನ ಅಂತರ್ಜಲಕ್ಕೆ ಇರುವ ಪ್ರಮಾಣ ಕಡಿಮೆಯಿದ್ದು ಹಾಗೂ ಬಳಕೆ ಜಾಸ್ತಿ ಇರುವುದರಿಂದ ಅಂತರ್ಜಲ ಮಟ್ಟವನ್ನು ಸುಧಾರಿಸಲು ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ಉಳಿಸಿಕೊಳ್ಳಲು ಕ್ರಮ ಕೈಗೊಂಡಿರುತ್ತದೆ ಹಾಗೂ ಕಟ್ಟಡಗಳ ಚಾವಣಿಗಳ ಮೇಲೆ ಬೀಳುವ ನೀರನ್ನು ಸಂಗ್ರಹಿಸಿ ಉಪಯೋಗಿಸಲು ಮತ್ತು ಕೊಳಚೆ ನೀರನ್ನು ಶುದ್ದೀಕರಿಸಿ ತೋಟಗಾರಿಕೆ ಹಾಗೂ ಇನ್ನಿತರೆ ಉಪಯೋಗಕ್ಕೆ ಬಳಸಲು ಕ್ರಮ ಕೈಗೊಂಡಿರುತ್ತದೆ

ಈ ನಗರ ಪ್ರದೇಶಗಳಲ್ಲಿ ಅಂತರ್ಜಲ ಮರುಪೂರೈಕೆ ರಚನೆಗಳ ವಿವಿಧ ಕಾರ್ಯಕ್ರಮಗಳನ್ನು ಕೆಲವು ವರ್ಷಗಳಿಂದ ಪ್ರಾರಂಭಿಸಿದ್ದು ಇದರಿಂದ ಅಂತರ್ಜಲ ಮಟ್ಟವು ಈ ಕೆಳಕಂಡ ಸ್ಥಳಗಳಲ್ಲಿ ಹೆಚ್ಚಳವಾಗಿರುತ್ತದೆ,

1) ಗುರ್ಮಿಟ್‌ಕಲ್ 2) ಶ್ರೀನಿವಾಸಪುರ 3) ಎನ್ ಆರ್ ಪುರ 4) ಕೊಟ್ಟೂರು 5) ಆನೇಕಲ್ 6) ಶಿಡ್ಲಘಟ್ಟ 7) ಚಳ್ಳಕೆರೆ 8) ಮಾಲೂರು 9)ಮುಳಬಾಗಿಲು 10) ಹುಮ್ನಾಬಾದ್

338 (652) ಶ್ರೀ ದಿನೇಶ್ ಗುಂಡೂರಾವ್, (ಗಾಂಧಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿ ಯೋಜನೆ (ಸಿ ಡಿ ಪಿ) ಕರಡನ್ನು ಸಿದ್ದಪಡಿಸಲಾಗಿರುವುದು ನಿಜವೆ,

ಆ) ಹಾಗಿದ್ದಲ್ಲಿ ಯಾವಾಗ ಸಿದ್ದಪಡಿಸಲಾಗಿದೆ,

ಇ) ಇಲ್ಲಿಯವರೆಗೂ ಈ ಸಿ ಡಿ ಪಿ, ಯನ್ನು ಅಧಿಕೃತವಾಗಿ ಬಿಡುಗಡೆಗೊಳಿಸದಿರಲು ಕಾರಣಗಳೇನು,

ಈ) ಸಿ ಡಿ ಪಿ ಯನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಹೌದು

ಆ) ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಕರಡು ಮಾಸ್ಟರ್ ಪ್ಲಾನ್ 2015ಕ್ಕೆ ಸರ್ಕಾರ ದಿನಾಂಕ 10–6–2005 ರಂದು ಅನುಮೋದನೆ ನೀಡಿದ್ದು, ದಿನಾಂಕ 17–6–2006ರ ರಾಜ್ಯ ಪತ್ರದಲ್ಲಿ ಪ್ರಕಟಿಸಿದೆ

ಇಈ) ಈ ಕರಡು ಮಾಸ್ಟರ್ ಪ್ಲಾನ್ ಕುರಿತಂತೆ ಸ್ವೀಕರಿಸಲಾದ ಆಕ್ಷೇಪಣೆ ಮತ್ತು ಸಲಹೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಪರಿಶೀಲಿಸಿದ್ದು ಅಂತಿಮ ಮಾಸ್ಟರ್ ಪ್ಲಾನ್ 2015ಕ್ಕೆ ಪ್ರಾಧಿಕಾರ ದಿನಾಂಕ 22–12–2006 ರಂದು ಅನುಮೋದನೆ ನೀಡಿ ತನ್ನ ಶಿಫಾರಸ್ಸುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ, ಸೆಕ್ಷನ್ 81(ಸಿ) ರನ್ವಯ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ದಿ ಪ್ರಾಧಿಕಾರದ ಮೂಲಕ ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ಮಾಸ್ಟರ್ ಪ್ಲಾನ್‌ನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ನಿರೀಕ್ಷಿಸಲಾಗುತ್ತಿದೆ ಅದನ್ನು ಸ್ವೀಕರಿಸಿದ ನಂತರ ಸರ್ಕಾರ ಅಂತಿಮ ನಿರ್ಣಯ ತೆಗೆದುಕೊಳ್ಳುವುದು

339 (142) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಕಾರವಾರ–ಅಂಕೋಲಾ ತಾಲ್ಲೂಕಿನ ನಡುವೆ 4 ಲೈನ್ ಹೆದ್ದಾರಿ ನಿರ್ಮಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದೇ,

ಆ) ಈ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೆ,

ಇ) ಹಾಗಿದ್ದಲ್ಲಿ ಪ್ರಸ್ತಾವನೆ ಯಾವ ಹಂತದಲ್ಲಿದೆ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಸಧ್ಯಕ್ಕೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ

ಆ) ಇಲ್ಲ

ಇ) ಅನ್ವಯಿಸುವುದಿಲ್ಲ

340 (143) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರ–ಕೈಗಾ–ಇಳಕಲ್ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯ ಗುಣಮಟ್ಟಕ್ಕೆ ಏರಿಸುವ ಪ್ರಸ್ತಾವನೆ ಸರ್ಕಾರದಲ್ಲಿ ಇದೆಯೇ,

ಆ) ಹಾಗಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಯಾವುದೇ ಪ್ರಸ್ತಾವನೆಯು ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ

341 (144) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನಲ್ಲಿ – ಬಸ್ ಡಿಪೋ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ತೀರಾ ಹಿಂದುಳಿದ ಈ ತಾಲ್ಲೂಕಿನಲ್ಲಿ ಬಸ್ ಡಿಪೋವನ್ನು ಯಾವಾಗ ಪ್ರಾರಂಭಿಸಲಾಗುವುದು,

ಇ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಬಂದಿದೆ

ಆ) ದಾಂಡೇಲಿ ಮತ್ತು ಹಳಿಯಾಳ ಎರಡು ಘಟಕಗಳು ಜೋಯಿಡಾದಿಂದ ಕ್ರಮವಾಗಿ 26 ಮತ್ತು 52 ಕಿ ಮೀಗಳ ಅಂತರದಲ್ಲಿದ್ದು, ಜೋಯೀಡಾ ಬಸ್ ನಿಲ್ದಾಣದ ಮುಖಾಂತರ 86 ಆಗಮನ ಮತ್ತು ನಿರ್ಗಮನಗಳು ಇದ್ದು ಪ್ರಯಾಣಿಕರಿಗೆ ಅನುಕೂಲವಾಗಿದೆ ಆದ್ದರಿಂದ, ಸದ್ಯದ ಪರಿಸ್ಥಿತಿಯಲ್ಲಿ ಜೋಯಿಡಾದಲ್ಲಿ ನೂತನ ಬಸ್ ಘಟಕವನ್ನು ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ

ಇ) ಉದ್ಭವಿಸುವುದಿಲ್ಲ

342 (145) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರ ಬಂದರಿನ 2ನೇ ಹಂತದ ನಿರ್ಮಾಣಕ್ಕೆ ಅನುಮತಿ ನೀಡುವ ಪ್ರಸ್ತಾವನೆ ಸರ್ಕಾರದಲ್ಲಿ ಇದೆಯೇ,

ಆ) ಇಲ್ಲಿನ ಅಡೆತಡೆ ಗೋಡೆಯನ್ನು ಇನ್ನೂ 250 ಮೀಟರ್ ವರೆಗೆ ವಿಸ್ತರಿಸುವ ಹಾಗೂ 13 ಮೀಟರ್ ನಷ್ಟು ಹೂಳೆತ್ತುವ ಪ್ರಸ್ತಾವನೆ ಸರ್ಕಾರದಲ್ಲಿ ಇದೆಯೇ,

ಇ) ಈ ಪ್ರಸ್ತಾವನೆಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು

ರೂ 34 00 ಕೋಟಿ ಅಂದಾಜು ವೆಚ್ಚದಲ್ಲಿ ಕಾರವಾರ ಬಂದರಿನ 2ನೇ ಹಂತದ ಅಭಿವೃದ್ಧಿ ಯೋಜನೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ

ಆ) ಹೌದು

ಪ್ರಸ್ತುತ ಇರುವ ಅಲೆ ತಡೆಗೋಡೆಯನ್ನು ಇನ್ನೂ 240 ಮೀ ಉದ್ದಕ್ಕೆ ರೂ 48 50 ಕೋಟಿ ಅಂದಾಜು ವೆಚ್ಚದಲ್ಲಿ ವಿಸ್ತರಿಸುವ ಹಾಗೂ ಬಂದರಿನಲ್ಲಿ ರೂ 20 00 ಕೋಟಿ ಅಂದಾಜು ವೆಚ್ಚದಲ್ಲಿ ಹೂಳೆತ್ತುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ

ಇ) ಕಾರವಾರ ಬಂದರಿನ 2ನೇ ಹಂತದ ಅಭಿವೃದ್ಧಿ ಯೋಜನೆಯನ್ನು ರೂ 304 00 ಕೋಟಿ ಅಂದಾಜು ವೆಚ್ಚದಲ್ಲಿ National Maritime Development Project (N M D P) ಯೋಜನೆಯಡಿಯಲ್ಲಿ ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಇದು ಕೇಂದ್ರ ಸರ್ಕಾರ ಪರಿಶೀಲನೆಯಲ್ಲಿದೆ

ಕಾರವಾರ ಬಂದರಿನ ಹೂಳೆತ್ತುವಿಕೆಯ ಗಂಭೀರ ಸಮಸ್ಯೆಯ ತುರ್ತು ಪರಿಹಾರವಾಗಿ ಸುಮಾರು (–) 8 50 ಮೀ ಆಳದವರೆಗೆ ಹೂಳೆತ್ತುವಿಕೆಯ ಕಾಮಗಾರಿಯನ್ನು ASIDE ಯೋಜನೆಯಡಿಯಲ್ಲಿ ಕೈಗೊಳ್ಳಲಾಗುವುದು ಮತ್ತು ಇನ್ನೂ (–) 10 ಮೀ ಆಳದವರೆಗೆ ಹೂಳೆತ್ತುವ ಹಾಗೂ ಇನ್ನೂ 240 ಮೀಟರ್ ಉದ್ದಕ್ಕೆ ಅಲೆತಡೆಗೋಡೆ ವಿಸ್ತರಿಸುವ ಪ್ರಸ್ತಾವನೆಗಳೂ ಸರ್ಕಾರದ ಪರಿಶೀಲನೆಯಲ್ಲಿದೆ

343 (343) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಕೇಂದ್ರಸ್ಥಳವಾದ ಕಾರವಾರದಿಂದ ಬೆಂಗಳೂರಿಗೆ ಹಾಗೂ ಮುಂಬಯಿ, ವಿಜಾಪುರ ಗುಲ್ಬರ್ಗಾ ಕೊಲ್ಲಾಪುರ, ಪುಣೆ, ಬೆಳಗಾವಿ ಮತ್ತು ಶಿವಮೊಗ್ಗ ಈ ಸ್ಥಳಕ್ಕೆ ಬಿಡುವ ಬಸ್ಸುಗಳು ತೀರಾ ಹಳೆಯದಾಗಿದ್ದು, ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಸರ್ಕಾರವು ಈ ಸ್ಥಳಗಳಿಗೆ ಹೊಸ ಬಸ್ಸುಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಬಂದಿದೆ

ಆ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಾರವಾರ ಘಟಕಕ್ಕೆ ಈಗಾಗಲೇ 8 ಹೊಸ ಬಸ್ಸುಗಳನ್ನು ಒದಗಿಸಲಾಗಿದೆ ಸದರಿ ಮಾರ್ಗ ---- ಹೊಸ ಬಸ್ಸುಗಳನ್ನು ಒದಗಿಸಲು ಕ್ರಮ ಜರುಗಿಸಲಾಗುವುದು

344 (316) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) . ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಮರವಂತೆ ಗ್ರಾಮದಲ್ಲಿ ಮಾರಸ್ವಾಮಿ ದೇವಸ್ಥಾನದ ಸಮೀಪ ಸೌಪರ್ಣಿಕಾ ನದಿಗೆ ಸೇತುವೆ ನಿರ್ಮಾಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ,

ಆ) ಬಂದಿರುವ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಹೌದು, ಬಂದಿದೆ

ಆ) ನಬಾರ್ಡ್ ಸಾಲ ಸಹಾಯದ ಆರ್ ಐ ಡಿ ಎಫ್ 12ರ ಯೋಜನೆಯಡಿ ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಪ್ರಸ್ತುತ ಇದನ್ನು ಪರಿಗಣಿಸಲಾಗಿರುವುದಿಲ್ಲ

346 (318) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ ಪಿ ಸಿ ಎಲ್ ಕಾರ್ಮಿಕರು ವೇತನವನ್ನು ಹೆಚ್ಚಿಸಲು ಪ್ರತಿಭಟನೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಈ ಕಾರ್ಮಿಕರ ಸಮಸ್ಯೆಗೆ ಸರ್ಕಾರ ಸ್ಪಂದಿಸದಿರಲು ಕಾರಣವೇನು,

ಇ) ಕೆ ಪಿ ಸಿ ಎಲ್ ಕಾರ್ಮಿಕರಿಗೆ ವೇತನವನ್ನು ಪುನರ್ ನಿಗದಿಪಡಿಸುವಾಗ ಗ್ರಾಮೀಣ ಪ್ರದೇಶದಲ್ಲಿರುವ ನೌಕರರಿಗೆ ಯಾವುದೇ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇರುವುದರಿಂದ ಇತರೆ ಕಾರ್ಮಿಕರಿಗೆ ನೀಡುತ್ತಿರುವ ವೇತನದಲ್ಲಿ ತಾರತಮ್ಯವಿರುವುದಿಲ್ಲವೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಬಂದಿದೆ

ಆ) ಕೆ ಪಿ ಸಿ ಎಲ್ ನಲ್ಲಿನ ವೇತನ ಪರಿಷ್ಕರಣ ಹಾಗೂ ಇತರ ಸೇವಾ ಸವಲತ್ತುಗಳ ವಿಷಯಕ್ಕೆ ಸಂಬಂಧಪಟ್ಟಂತೆ ನೀತಿಯನ್ನು ಯೂನಿಯನ್ ಗಳೊಂದಿಗೆ ಮಾಡಿಕೊಳ್ಳಲಾಗುವ ಒಪ್ಪಂದಗಳನ್ವಯ ರಚಿಸಲಾಗುತ್ತದೆ ಈ ಹಿಂದಿನ ಒಪ್ಪಂದವು 31 12 2003 ರಂದು ಕೊನೆಗೊಂಡಿರುತ್ತದೆ ಯೂನಿಯನ್ ಗಳು ಹೊಸ ಬೇಡಿಕೆ ಪಟ್ಟಿಗಳನ್ನು ಸಲ್ಲಿಸಿ ವೇತನದಲ್ಲಿ ಶೇಕಡ 40% ರಷ್ಟು ಹೆಚ್ಚಳವನ್ನು ಹಾಗೂ ಸೇವೆಯನ್ನಾಧರಿಸಿ 1 ರಿಂದ 4 ರಷ್ಟು ವೇತನ ಬಡ್ತಿಗಳನ್ನು ಇತರ ಅಂಶಗಳೊಂದಿಗೆ ಕೋರಿದ್ದವು ಬೇಡಿಕೆಗಳ ಕುರಿತು ಚರ್ಚಿಸಲಾಗಿರುತ್ತದೆ 15 ದ್ವಿ ಪಕ್ಷೀಯ ಸಭೆಗಳು ನಡೆದವು ಆಡಳಿತ ವರ್ಗವು ವೇತನದಲ್ಲಿ ಶೇಕಡ 9 5 ರಷ್ಟು ಹೆಚ್ಚಳ + ಒಂದು ಹೆಚ್ಚುವರಿ ವಾರ್ಷಿಕ ವೇತನ ಬಡ್ತಿ ಹಾಗೂ ವಿವಿಧ ಭತ್ಯೆಗಳಲ್ಲಿ ಹೆಚ್ಚಳವನ್ನು ನೀಡಲು ಒಪ್ಪಿರುತ್ತದೆ ಸಂಘಗಳು ಈ ನೀಡಿಕೆಯನ್ನು ಒಪ್ಪದೆ ಮುಷ್ಕರದ ನೋಟಿಸನ್ನು ನೀಡಿರುವ ಕಾರ್ಮಿಕ ಆಯುಕ್ತರು ಮಧ್ಯ ಪ್ರವೇಶಿಸಿ ಈವರೆಗೆ 5 ಸಂಧಾನ ಸಭೆಗಳನ್ನು ನಡೆಸಿರುವರು ಅವರ ಸಲಹೆಗನುಗುಣವಾಗಿ ಇನ್ನು ಎರಡು ದ್ವಿ ಪಕ್ಷೀಯ ಸಭೆಗಳು ನಡೆದಿರುತ್ತವೆ ಮುಂದಿನ ಸಂಧಾನ ಸಭೆಯು ದಿ 6 2 2007 ರಂದು ನಿಗಧಿಯಾಗಿರುತ್ತದೆ

ವೇತನ ಪರಿಷ್ಕರಣಕ್ಕೆ ಸಂಬಂಧಪಟ್ಟಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹಾಕಿಕೊಟ್ಟ "ವಲಯ-ಉದ್ಯಮ" ಸೂತ್ರವನ್ನು ಕೆಪಿಸಿಎಲ್ ಅನುಸರಿಸುತ್ತಿದೆ ಈಗಿನ ಉದ್ದೇಶಿತ ನೀಡಿಕೆಯು ಈ ಸೂತ್ರಕ್ಕೆ ಅನುಗುಣವಾಗಿದ್ದು ಕೆಪಿಸಿಎಲ್ ನ ಉದ್ಯೋಗಿಗಳು ರಾಜ್ಯದಲ್ಲಿರುವ ವಿದ್ಯುತ್ ಉದ್ಯಮದಲ್ಲಿನ ಇತರ ಸಂಸ್ಥೆಗಳಲ್ಲಿನ ಕಾರ್ಮಿಕರಿಗಿಂತ ಹೆಚ್ಚಿನ ಲಾಭವನ್ನು ಇದರಿಂದ ಪಡೆಯಲಿರುವರು ಆದುದರಿಂದ ಉದ್ದೇಶಿತ ಕೊಡುಗೆಯು ನ್ಯಾಯಯುತವೂ ಹಾಗೂ ಸಮರ್ಥನೀಯವೂ ಆಗಿರುತ್ತದೆ

ಇ) ಸೌಲಭ್ಯಗಳು ಇಲ್ಲದಿರುವಲ್ಲಿ ಹಣಕಾಸಿನ ಪರಿಹಾರ ನೀಡಲಾಗುತ್ತಿದ್ದು ಯಾವುದೇ ತಾರತಮ್ಯವಿರುವುದಿಲ್ಲ

342 (319) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) . ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಿಂದ ಶಿವಮೊಗ್ಗ ಜಿಲ್ಲೆಗೆ ನೇರ ಸಂಪರ್ಕ ಕಲ್ಪಿಸುವ ಬೈಂದೂರು-ಕಾರ್ನಿ-ಸಾಗರ ರಸ್ತೆಯನ್ನು ನಿರ್ಮಿಸಲು ತುಂಬಾ ವರ್ಷದಿಂದ ಆ ಭಾಗದ ಜನರು ಸರ್ಕಾರಕ್ಕೆ ಹಲವಾರು ಮನವಿಗಳನ್ನು ಸಲ್ಲಿಸಲಾಗಿರುವುದು ನಿಜವೇ,

ಆ) ಹಾಗಿದ್ದಲ್ಲಿ ಈ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಹೌದು

ಆ) ಬೈಂದೂರು-ಗಂಗನಾಡು-ಕಾರ್ನಿ-ಸಾಗರ ರಸ್ತೆಯು ಒಟ್ಟಾರೆ 85 ಕಿಮೀ ಉದ್ದವಿರುತ್ತದೆ ಇದರಲ್ಲಿ ಉಡುಪಿ ಜಿಲ್ಲೆಯಲ್ಲಿನ ಕುಂದಾಪುರ ತಾಲ್ಲೂಕಿನಲ್ಲಿ ಬೈಂದೂರಿನಿಂದ ಗಂಗನಾಡು ವರೆಗೆ 9 ಕಿ ಮೀ ಉದ್ದವಿದ್ದು ಇದು ಗ್ರಾಮೀಣ ರಸ್ತೆಯಾಗಿರುತ್ತದೆ ಗಂಗನಾಡುನಿಂದ ಕಾರ್ನಿವರೆಗೆ ಒಟ್ಟಾರೆ 12 ಚಕಿಮೀ ಇದ್ದು ಇದು ವನ್ಯ ಜೀವಿ ರಕ್ಷಿತ ಅರಣ್ಯಪ್ರದೇಶದಲ್ಲಿ ಹಾದುಹೋಗುತ್ತಿದೆ (ಕಾಲುದಾರಿ) ಸದರಿ ಪ್ರದೇಶವು ಅರಣ್ಯ ಪ್ರದೇಶದಲ್ಲಿ ಹಾದು ಹೋಗುತ್ತಿರುವುದರಿಂದ ರಸ್ತೆ ನಿರ್ಮಾಣಕ್ಕೆ ಅರಣ್ಯ ಇಲಾಖೆಯಿಂದ ಹಾಗೂ ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿರುವುದಿಲ್ಲ ಕಾರ್ನಿಯಿಂದ ಸಾಗರಕ್ಕೆ 66 00 ಕಿಮೀ ಉದ್ದವಿದ್ದು ಇದರಲ್ಲಿ ಪ್ರಾರಂಭಿಕ 3

ಕಿಮೀ ಉದ್ದ ಗ್ರಾಮೀಣ ರಸ್ತೆಯಾಗಿದ್ದು ಉಳಿದ 63 00 ಕಿಮೀ ಉದ್ದ ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ

345 (317) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) ಮಾನ್ಯ ಕೃಷಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ (ಜಿಲ್ಲಾವಾರು ಮಾಹಿತಿ ನೀಡುವುದು),

ಆ) ಇಂತಹ ಆತ್ಮಹತ್ಯೆಗಳನ್ನು ನಿಲ್ಲಿಸಲು ಸರ್ಕಾರದಿಂದ ಏನಾದರೂ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೇ,

ಇ) ಹಾಗಿದ್ದಲ್ಲಿ ಆ ಕ್ರಮಗಳು ಯಾವುದು?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ರಾಜ್ಯದಲ್ಲಿ ಕಳೆದ 3 ವರ್ಷದ ಅವಧಿಯಲ್ಲಿ ಒಟ್ಟು 1301 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದ್ದು ಇವುಗಳ ಪೈಕಿ ಉಡುಪಿ ಜಿಲ್ಲೆಯಲ್ಲಿ 4 ಪ್ರಕರಣಗಳು ವರದಿಯಾಗಿದೆ ಜಿಲ್ಲಾವಾರು ರೈತರ ಆತ್ಮಹತ್ಯೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ರೈತರ ಆತ್ಮಹತ್ಯೆ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರವು ಸಾಧ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿರುತ್ತದೆ

ಇ) ರೈತರ ಆತ್ಮಹತ್ಯೆ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳು ಇಂತಿವೆ

ಅ) ಶೇ 4ರ ಬಡ್ಡಿ ದರದಲ್ಲಿ ಸಹಕಾರಿ ಸಂಸ್ಥೆಗಳ ಮೂಲಕ ರೈತರಿಗೆ ಸಾಲ ನೀಡುವುದು

ಆ) ಶೇ 75ರ ರಿಯಾಯಿತಿ ದರದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬಿತ್ತನೆ ಬೀಜ ವಿತರಿಸುವುದು

ಇ) ಬೆಂಬಲ ಬೆಲೆಗಿಂತ ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳ ದರವು ಕುಸಿದಲ್ಲಿ ಮಾರುಕಟ್ಟೆ ಮಧ್ಯಪ್ರದೇಶದ ಮೂಲಕ ರೈತರ ಕೃಷಿ ಉತ್ಪನ್ನಗಳ ಖರೀದಿ

ಈ) ಟ್ರಾಕ್ಟರ್, ಪವರ್ ಟಿಲ್ಲರ್‌ಗಳಿಗೆ ಶೇ 50 ರ ರಿಯಾಯಿತಿ ದರದಲ್ಲಿ ವಿತರಣೆ

ಉ) ಎತ್ತು ಮತ್ತು ಬಂಡಿಯನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇ 50 ರ ರಿಯಾಯಿತಿಯಲ್ಲಿ ವಿತರಣೆ

ಊ) ಕೃಷಿ ತಾಂತ್ರಿಕತೆಯ ಬಗ್ಗೆ ರೈತರಿಗೆ ತರಬೇತಿ

ಎ) ರಿಯಾಯಿತಿಯಲ್ಲಿ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಉಪಕರಣಗಳ ವಿತರಣೆ

ಏ) ಸಾಗುವಳಿ ವೆಚ್ಚ ಕಡಿಮೆ ಮಾಡಲು ಸಾವಯವ ಕೃಷಿ ಮತ್ತು ಜೀವಾಣು ಗೊಬ್ಬರ ಪ್ರೋತ್ಸಾಹ

ಐ) ಮಣ್ಣು ಪರೀಕ್ಷೆಯ ಆಧಾರದ ಮೇಲೆ ಮಣ್ಣಿನ ಫಲವತ್ತತೆ ಹೆಚ್ಚಿಸಲು ಕ್ರಮ

ಒ) ರೈತರ ಆತ್ಮಹತ್ಯೆ ಪ್ರಕರಣಗಳು ಒಳಗೊಂಡಿರುವ 6 ಜಿಲ್ಲೆಗಳಾದ ಶಿವಮೊಗ್ಗ, ಚಿತ್ರದುರ್ಗ ಬೆಳಗಾಂ, ಹಾಸನ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಿಗೆ ಭಾರತ ಸರ್ಕಾರದ ವಿಶೇಷ ಪ್ಯಾಕೇಜ್ ಇತ್ಯಾದಿ

Districtwise & year wise farmer's suicide cases

Sl No	Name of the Districts	2003-04	2004-05	2005-06	2006-07 [up-Dec 06]	Total
1	Bagalkote	24	6	3	4	37
2	Bangalore Rural	30	6	7	1	44
3	Bangalore Urban	2	0	0	0	2
4	Bidar	32	7	9	11	59
5	Hassan	69	37	26	7	139
6	Chamarajanagar	10	2	2	0	14
7	Haveri	38	9	2	3	52
8	Uttara Kannada	7	0	7	4	18
9	Dharwad	31	9	2	0	42
10	Koppal	20	15	11	14	60
11	Mandya	46	11	0	0	57
12	Chickmagalore	24	22	4	16	66
13	Raichur	5	3	2	2	12

14	Tumkur	41	11	6	11	69
15	Shimoga	50	12	8	11	81
16	Kolar	18	10	3	2	33
17	Mysore	18	1	0	0	19
18	Udupi	3	1	0	0	4
19	Kodagu	12	12	13	10	47
20	Belgaum	41	33	13	20	107
21	Davangere	39	12	5	9	65
22	Bellary	31	11	5	3	50
23	Chitradurga	55	19	12	7	93
24	Gulbarga	18	6	7	3	34
25	Bijapur	22	9	9	10	50
26	D Kannada	9	5	4	3	21
27	Gadag	13	2	3	8	26
	Total	708	271	163	159	1301

369 (314) ಶ್ರೀ ದಯಪ್ರಕಾಶ್ ಹೆಗ್ಗಡೆ ಕೆ (ಬ್ರಹ್ಮಾವರ) : ಮಾನ್ಯ ಸಹಕಾರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶೇಕಡಾ 4ರ ಬಡ್ಡಿ ದರದಲ್ಲಿ ಕೃಷಿ ಸಾಲ ನೀಡಲು ತೆಗೆದುಕೊಂಡ ಮಾನದಂಡವೇನು,

ಆ) ರಾಜ್ಯದಲ್ಲಿ ಇದುವರೆಗೂ ಶೇಕಡಾ 4ರ ಬಡ್ಡಿ ದರದಲ್ಲಿ ಎಷ್ಟು ಜನರಿಗೆ ಹಾಗೂ ಎಷ್ಟು ಮೊಬಲಗನ್ನು ಕೃಷಿ ಸಾಲವಾಗಿ ನೀಡಲಾಗಿದೆ,(ಜಿಲ್ಲಾವಾರು ಮಾಹಿತಿ ನೀಡುವುದು),

ಇ) ಈ ಪೈಕಿ ವಸೂಲಾದ ಮೊಬಲಗು ಎಷ್ಟು?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ) ರೈತರು ಸಹಕಾರಿ ಸಂಸ್ಥೆಗಳಿಂದ ಪಡೆಯುವ ಕೃಷಿ ಸಾಲದ ಮೇಲಿನ ಬಡ್ಡಿಯ ಭಾರವನ್ನು ಕಡಿಮೆ ಮಾಡಿ, ರೈತರಿಗೆ ಸಹಾಯ ಮಾಡಬೇಕೆಂಬ ಉದ್ದೇಶವೇ ಶೇಕಡ 4 ರ ಬಡ್ಡಿ ದರದಲ್ಲಿ ಕೃಷಿ ಸಾಲ ನೀಡುವ ಮಾನದಂಡವಾಗಿರುತ್ತದೆ

ಆ) ರಾಜ್ಯದಲ್ಲಿ ದಿನಾಂಕ 1–4–2006ರಿಂದ 31–12–2006ರವರೆಗೆ ಶೇ 4ರ ಬಡ್ಡಿ ದರದಲ್ಲಿ (ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ

ಸಾಲ) 847854 ರೈತರಿಗೆ ರೂ 2224 25 ಕೋಟಿ ಕೃಷಿ ಸಾಲವನ್ನು ಸಹಕಾರ ಬ್ಯಾಂಕುಗಳು ನೀಡಿರುತ್ತವೆ ಅಲ್ಪಾವಧಿ ಮಧ್ಯಮಾವಧಿ ಕೃಷಿ ಸಾಲದ ವಿವರಗಳನ್ನು ಜಿಲ್ಲಾ ಬ್ಯಾಂಕುಗಳವಾರು ಅನುಬಂಧ-1ರಲ್ಲಿ ಹಾಗೂ ದೀರ್ಘಾವಧಿ ಕೃಷಿ ಸಾಲದ ವಿವರಗಳನ್ನು ಜಿಲ್ಲಾವಾರು ಅನುಬಂಧ-2ರಲ್ಲಿ ಒದಗಿಸಲಾಗಿದೆ

ಇ) ಈ ಪೈಕಿ ವಸೂಲಾದ ಮೊಬಲಗು ಸುಮಾರು ರೂ 4 33 ಕೋಟಿಗಳಾಗಿದೆ

ಅನುಬಂಧ-1

ದಿನಾಂಕ.31-12-2006ರವರೆಗೆ ಶೇ 4ರ ಬಡ್ಡಿದರದಲ್ಲಿ ವಿತರಿಸಿರುವ (ಅಲ್ಪಾವಧಿ ಮತ್ತು ಮಧ್ಯಮಾವಧಿ) ಕೃಷಿ ಸಾಲದ ವಿವರ

(ರೂ ಕೋಟಿಗಳಲ್ಲಿ)

ಕ್ರ ಸಂ	ಜಿಲ್ಲಾ ಬ್ಯಾಂಕ್‌ವಾರು	ಸಂಖ್ಯೆ	ಮೊಬಲಗು
1	ಬೆಂಗಳೂರು (ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ)	22104	59 36
2	ಕೋಲಾರ	0	0 00
3	ಚಿತ್ರದುರ್ಗ	14189	24 30
4	ಶಿವಮೊಗ್ಗ	47157	101 75
5	ದಾವಣಗೆರೆ	41227	90 64
6	ತುಮಕೂರು	20540	43 90
7	ಮೈಸೂರು (ಮೈಸೂರು ಮತ್ತು ಚಾಮರಾಜನಗರ ಜಿಲ್ಲೆ	30797	92 62
8	ಮಂಡ್ಯ	47870	115 69
9	ಹಾಸನ	33651	119 80
10	ದಕ್ಷಿಣ ಕನ್ನಡ (ದಕ್ಷಿಣ ಕನ್ನಡ ಮತ್ತು ಉಡುಪಿ)	9098	248 69
11	ಕೊಡಗು	37796	144 45
12	ಚಿಕ್ಕಮಗಳೂರು	9285	57 04

1	2	3	4
13	ಬೆಳಗಾಂ	140069	211 43
14	ಬಿಜಾಪುರ	83494	177 30
15	ಬಾಗಲಕೋಟೆ	86090	212 84
16	ಧಾರವಾದ (ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳು)	34444	72 56
17	ಕೆನರಾ ಶರ್ಸಿ	55592	105 10
18	ಗುಲ್ಬರ್ಗಾ	36884	39 40
19	ಬೀದರ್	21718	54 56
20	ರಾಯಚೂರು (ರಾಯಚೂರು ಮತ್ತು ಕೊಪ್ಪಳ ಜಿಲ್ಲೆ)	29330	75 92
21	ಬಳ್ಳಾರಿ	22534	61 90
	ಒಟ್ಟು	824169	2109 25

ಅನುಬಂಧ

ದಿನಾಂಕ 1-4-2006 ರಿಂದ 31-12-2006ರ ವರೆಗೆ ಜಿಲ್ಲಾವಾರು ದೀರ್ಘಾವಧಿ ಕೃಷಿ ಸಾಲ ವಿತರಣೆ

ಕ್ರ ಸಂ	ಜಿಲ್ಲೆಗಳು	ಮಂಜೂರು ಸಂಖ್ಯೆ	ವಿತರಣೆ ಮೊತ್ತ
1	ಬೆಂಗಳೂರು	550	612 95
2	ಕೋಲಾರ	435	452 85
3	ತುಮಕೂರು	2029	842 48
4	ಚಿತ್ರದುರ್ಗ	1128	336 18
5	ಶಿವಮೊಗ್ಗ	2293	832 27
6	ದಾವಣಗೆರೆ	1080	654 35
7	ಮೈಸೂರು	1023	303 57
8	ಚಾಮರಾಜನಗರ	884	252 79
9	ಕೊಡಗು	553	288 70
10	ಮಂಡ್ಯ	832	427 76
11	ಹಾಸನ	1866	599 86

1	2	3	4
12	ಚಿಕ್ಕಮಗಳೂರು	2286	1047 11
13	ಮಂಗಳೂರು	135	520 38
14	ಉಡುಪಿ	809	354 88
15	ಬೆಳಗಾಂ	749	466 40
16	ಬಿಜಾಪುರ	596	369 38
17	ಬಾಗಲಕೋಟೆ	737	407 87
18	ಧಾರವಾಡ	620	385 91
19	ಗದಗ	326	225 13
20	ಹಾವೇರಿ	302	263 82
21	ಉತ್ತರ ಕನ್ನಡ	2247	1205 10
22	ಗುಲ್ಬಗಾ	153	162 62
23	ರಾಮಚೂರು	190	168 07
24	ಕೊಪ್ಪಳ	39	68 30
25	ಬೀದರ್	151	73 01
26	ಬಳ್ಳಾರಿ	255	178 36
	ಒಟ್ಟು	23685	11500 00

370 (315) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಪಂಪುಸೆಟ್ಟಿನ ವಿದ್ಯುತ್ ಬಿಲ್ಲಿನ ಮೊಬಲಗನ್ನು ಮನ್ನಾ ಮಾಡಿರುವುದರಿಂದ ಎಷ್ಟು ಜನ ರೈತರಿಗೆ ಮತ್ತು ಒಟ್ಟು ಎಷ್ಟು ಮೊಬಲಗನ್ನು ಮನ್ನಾ ಮಾಡಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು),

ಆ) ದಕ್ಷಿಣ ಕನ್ನಡ ಜಿಲ್ಲೆಯ ರೈತರು ಪ್ರಾಮಾಣಿಕವಾಗಿ ತಮ್ಮ ಪಂಪುಸೆಟ್ಟಿನ ಬಿಲ್ಲಿನ ಮೊಬಲಗನ್ನು ಮನ್ನಾ ಮಾಡುವ ಮೊದಲೇ ಪಾವತಿಸಿರುವುದಿಂದ ಇಂತಹವರಿಗೆ ಸದರಿ ಮೊಬಲಗನ್ನು ಹಿಂದಿರುಗಿಸುವ ಅಥವಾ ಮುಂದಿನ ಬಿಲ್ಲಿಗೆ ಹೊಂದಾಣಿಕೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) 31–3–2003ರ ಅಂತ್ಯದವರೆಗಿನ ಕೃಷಿ ಪಂಪುಸೆಟ್ಟಿನ ವಿದ್ಯುತ್ ಬಿಲ್ಲನ್ನು ಮನ್ನಾ ಮಾಡಿರುವುದರಿಂದ ಪ್ರಯೋಜನ ಪಡೆದಿರುವ ರೈತರ ಒಟ್ಟು ಸಂಖ್ಯೆ 13 09 ಲಕ್ಷಗಳು ಮತ್ತು ಮನ್ನಾ ಮಾಡಲಾದ ಮೊಬಲಗಿನ ಒಟ್ಟು ಮೊತ್ತ ರೂ 83,045 30 ಲಕ್ಷಗಳು ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ

ಆ) 2003ರ ಮಾರ್ಚ್ 31 ರವರೆಗೆ ಕೃಷಿ ಪಂಪ್ ಸೆಟ್ ಬಿಲ್‌ನ್ನು ಪ್ರಾಮಾಣಿಕವಾಗಿ ಪಾವತಿಸಿದ ರೈತರಿಗೆ ಹಣವನ್ನು ಹಿಂತಿರುಗಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಜಯಪ್ರಕಾಶ್ ಹೆಗಡೆ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 315 ಕ್ಕೆ ಅನುಬಂಧ 31–3–2003 ರವರೆಗಿನ ರೈತರ ಕೃಷಿ ಪಂಪುಸೆಟ್ಟುಗಳ ವಿದ್ಯುತ್ ಬಿಲ್ ಬಾಕಿ ಮನ್ನಾದಿಂದ ಪ್ರಯೋಜನ ಪಡೆದಿರುವ ರೈತರ ಸಂಖ್ಯೆಗಳ ಹಾಗೂ ಮನ್ನಾ ಮಾಡಲಾದ ಮೊಬಲಗಿನ ಜಿಲ್ಲಾವಾರು ವಿವರಗಳು

ಕ್ರ ಸಂ	ಜಿಲ್ಲೆ	ವಿದ್ಯುತ್ ಬಿಲ್ ಬಾಕಿ ಮನ್ನಾದಿಂದ ಪ್ರಯೋಜನ ಪಡೆದಿರುವ ರೈತರ ಸಂಖ್ಯೆ	ಮನ್ನಾ ಮಾಡಲಾದ ಮೊಬಲಗು (ಲಕ್ಷ ರೂಗಳಲ್ಲಿ)
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ			
1	ಬೆಂಗಳೂರು ನಗರ	23747	2709 00
2	ಬೆಮಗಳೂರು (ಗ್ರಾಮೀಣ)	65769	9988 00
3	ಚಿತ್ರದುರ್ಗ	54095	5693 00
4	ದಾವಣಗೆರೆ	46427	3309 00
5	ಕೋಲಾರ	115294	10267 00
6	ತುಮಕೂರು	129725	10419 00
	ಒಟ್ಟು	435057	42385 00

ಮಂಗಳೂರು ವಿದ್ಯುತ್ ಸರಬರಾಜು ಕಂಪನಿ			
7	ಉಡುಪಿ	38987	482 75
8	ದಕ್ಷಿಣ ಕನ್ನಡ	36970	908 90
9	ಶಿವಮೊಗ್ಗ	23767	1055 61
10	ಚಿಕ್ಕಮಗಳೂರು	27929	1897 82
	ಒಟ್ಟು	127653	4345 08
ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ			
11	ಮಂಡ್ಯ	47600	2333 00
12	ಮೈಸೂರು	32003	1246 00
13	ಚಾಮರಾಜನಗರ	37296	1917 00
14	ಹಾಸನ	43851	2524 00
15	ಕೊಡಗು	3249	79 00
	ಒಟ್ಟು	163999	8099 00
ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ			
16	ಗುಲ್ಬರ್ಗಾ	417601	1852 54
17	ಬೀದರ್	46280	1967 17
18	ರಾಯಚೂರು	27138	159 50
19	ಕೊಪ್ಪಳ	33903	2484 15
20	ಬಳ್ಳಾರಿ	43715	1384 24
	ಒಟ್ಟು	192796	7847 60
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ			
21	ಧಾರವಾಡ	12363	885 10
22	ಗದಗ	16262	938 60
23	ಹಾವೇರಿ	34359	2112 14
24	ಬಿಜಾಪುರ	124215	5843 35
25	ಬಾಗಲಕೋಟೆ	19318	4845 47
26	ಬೆಳಗಾಂ	152145	5377 67
27	ಉತ್ತರ ಕನ್ನಡ	30715	366 29
	ಒಟ್ಟು	389377	20368 62
	ರಾಜ್ಯದ ಒಟ್ಟು ಮೊತ್ತ	1308882	83045 30

371 (673) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನ ಯಾವ ಯಾವ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ (ಕ್ಷೇತ್ರವಾರು ವಿವರ ನೀಡುವುದು),

ಆ) ಇವುಗಳನ್ನು ಯಾವಾಗ ಮೇಲ್ದರ್ಜೆಗೇರಿಸಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕ್ಷೇತ್ರವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ

ಆ) ಈ ಕೆಳಕಂಡ 4 ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ

ಕ್ರ ಸಂ	ರಸ್ತೆಯ ಹೆಸರು	ಉದ್ದ ಕಿಮೀನಲ್ಲಿ
	ಉಡುಪಿ ವಿಧಾನಸಭಾ ಕ್ಷೇತ್ರ	
1	ಉಳಿಯಾರಗೊಳಿ ಪಡುಕೆರೆ ಮಲ್ಪೆ ರಸ್ತೆ	13 40
2	ಅತ್ರಾಡಿ ಪರೀಕ ಬೆಳ್ಳಂಪಳ್ಳಿ ರಸ್ತೆ	4 50
	ಬ್ರಹ್ಮಾವರ ವಿಧಾನಸಭಾ ಕ್ಷೇತ್ರ.	
1	ಸಾಸ್ತಾನ ಪಾಂಡೇಶ್ವರ ಬೆಣ್ಣೆಕುದ್ರು ಬಾರ್ಕೂರು ರಸ್ತೆ	5 50
2	ಪೇತ್ರಿ ಕುಕ್ಕೆಹಳ್ಳಿ ಹಬಜೆ ಹಿರಿಯಡ್ಕ ರಸ್ತೆ	10 50
	ಒಟ್ಟು	33 90

ಉಳಿದ ರಸ್ತೆಗಳ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲಿಸಲಾಗುವುದು

ಅನುಬಂಧ-1 673ಕ್ಕೆ ಉತ್ತರಗಳು

ಗ್ರಾಮೀಣ ರಸ್ತೆ ಹಾಗೂ ಇತರ ಜಿಲ್ಲಾ ಮುಖ್ಯ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸುವ ರಸ್ತೆಗಳ ವಿವರ

ಕ್ರ ಸಂ	ತಾಲ್ಲೂಕು	ವಿಧಾನ ಸಭಾ ಕ್ಷೇತ್ರದ ಹೆಸರು	ಮೇಲ್ದರ್ಜೆಗೇರಿಸುವ ರಸ್ತೆಯ ಹೆಸರು	ರಸ್ತೆಯ ವರ್ಗ	ರಸ್ತೆಯ ಉದ್ದ (ಕಿಮೀಗಳಲ್ಲಿ)			ಮೇಲ್ಮೈವಾರು ರಸ್ತೆಯ ಉದ್ದ (ಕಿಮೀಗಳಲ್ಲಿ) ಮೇಲ್ದರ್ಜೆಗೇರಿಸುವ ಹೆಸರು ರಸ್ತೆಯ ಹೆಸರು				ರಸ್ತೆಯ ಮೇಲ್ಮೈ ಅಗಲ ಕಿಮೀ ರಸ್ತೆಯ ರಹದಾರಿ ಅಗಲ ಕಿಮೀ		ಸರಾಸರಿ ವಾಹನಗಳು ಸಂಚರಿಸುವ ಸಂಖ್ಯೆ ದಿನಕ್ಕೆ ಹಾಗೂ ತೀವ್ರತೆ		ಈ ರಸ್ತೆಯು ಹಾದು ಹೋಗುವ ತಾಲ್ಲೂಕು ಸಂಪರ್ಕಿಸುವ ಜ ಮು ರ/ ರಾಜ್ಯ ಹೆದ್ದಾರಿ/ ರಾಷ್ಟ್ರೀಯ ಹೆದ್ದಾರಿ ವಿವರ	ರಸ್ತೆಯ ಸಂಪರ್ಕಿಸುವ ಹಳ್ಳಿಗಳ ವಿವರ ಜನಗಣತಿ		ಯಾವ ಯೋಜನೆಯಲ್ಲಿ ಅಭಿವೃದ್ಧಿಪಡಿಸಲಾಗಿದೆ	ಪ್ರಸ್ತಾವನೆ ಮಾನ್ಯ ಮಾಡಿದವರ ವಿವರ
					ಪ್ರಾರಂಭ	ಅಂತ್ಯ	ಒಟ್ಟು	ಗ್ರಾವೆಲ್	ಜಲ್ಲಿ	ಡಾಂಬಾರು	ಒಟ್ಟು			ಸಂಖ್ಯೆ	ತೀವ್ರತೆ		ಹೆಸರು	ಜನಗಣತಿ		
1	2	3	4	5	6	7	8	9	10	11	12	13	14	15	16	17	18	19	20	21
1																				
1	ಉಡುಪಿ ತಾಲ್ಲೂಕು/ ಉಡುಪಿ ಜಿಲ್ಲೆ	ಬ್ರಹ್ಮಾವರ ಕ್ಷೇತ್ರ	ಹರಿಖಂಡಿಗೆ ಹಿರಿಯಡ್ಕ ಬಡೆ ಕುಕ್ಕೆಹಳ್ಳಿ ಪೇತ್ರಿ ರಸ್ತೆ	ಗ್ರಾಮೀಣ ರಸ್ತೆ	0 00	15 00	15 00	–	8 00	7 00	15 00	3 00 ರಿಂದ 3 75	3 00 ರಿಂದ 12 00	ಎಲ್ಲ ರಸ್ತೆಗಳು ಜಿಲ್ಲಾ ಪಂಚಾಯತ್ ಸಂಬಂಧಿಸಿರುವುದರಿಂದ ವಾಹನ ಗಣತಿ ಮಾಹಿತಿಯು ಲಭ್ಯವಿರುವುದಿಲ್ಲ ಮತ್ತೆ ಮೊಳಕಾಲ್ಮೂರು ರಸ್ತೆ (ರಾ ಹೆ) ಕಲ್ಯಾಣಮರ ಕುಕ್ಕೆಹಳ್ಳಿ-ಪೆರ್ಡೂರು (ಜ ಮು ರ) ಸೀತಾನದಿ ಬ್ರಹ್ಮಾವರ ರಸ್ತೆ (ಜ ಮು ರ) ಈ ರಸ್ತೆಯಲ್ಲಿಅರ್ಧವಾಗಿ ಸ್ವರ್ಣ ನದಿಯಲ್ಲಿ ಹರಿತ್ತಿದ್ದು ಸೇತುವೆ ನಿರ್ಮಾಣ ಆಗಬೇಕಾಗಿದೆ		ಉಡುಪಿ ತಾಲ್ಲೂಕು ಪೆರ್ಡೂರು ಹರಿಖಂಡಿಗೆ ದೊಂಡರಂಗಡಿ ರಸ್ತೆ (ಜ ಮು ರ)	ಬೈರಂಪಳ್ಳಿ ಬೆಳ್ಳರ್ಪಾಡಿ ಬೊಮ್ಮರಬೆಟ್ಟು, ಕುಕ್ಕೆಹಳ್ಳಿ ಬೇರ್ಕಾಡಿ	3332 834 7853 7968 0132	–	ಶ್ರೀ ಜಯಪ್ರಕಾಶ್ ಹೆಗ್ಡೆ ಶಾಸಕರು ಬ್ರಹ್ಮಾವರ ಕ್ಷೇತ್ರ

1	2	3	4	5	6	7	8	9	10	11	12	13	14	15	16	17	18	19	20
2	–	ಬ್ರಹ್ಮಾವರ ಕ್ಷೇತ್ರ	ಮುಂಡ್ಕಿನ ಜಡ್ಡು ಕೊಕ್ಕರ್ಣೆ ರಸ್ತೆ	ಗ್ರಾಮೀಣ ರಸ್ತೆ	0.00	7.20	7.20	–	0.50	6.70	7.20	3.25 ರಿಂದ 3.75	4.00 ರಿಂದ 12.00	–ಅದೇ–	ಉಡುಪಿ ತಾಲ್ಲೂಕು ಸೀತಾನದಿ ಬ್ರಹ್ಮಾವರ ರಸ್ತೆ ಮತ್ತು ಶೀರೂರು ಕೊಕ್ಕರ್ಣೆ ಸಂತೆಕಟ್ಟೆ ರಸ್ತೆ (ಜಿ ಮು ರ) ಈ ರಸ್ತೆ ತುಂಬಾ ನಾದುರಸ್ತಿಯಲ್ಲಿದ್ದು ಮರು ಡಾಂಬರೀಕರಣ ಆಗಬೇಕಾಗಿದೆ	ಚೇರ್ಕಾಡಿ ಪಡುಮುಂಗೂರ	6132 4223	–	ಶ್ರೀ ಜಯಪ್ರಕಾಶ್ ಹೆಗ್ಡೆ ಶಾಸಕರು ಬ್ರಹ್ಮಾವರ ಕ್ಷೇತ್ರ
3	–	ಬ್ರಹ್ಮಾವರ ಕ್ಷೇತ್ರ	ಬಾರ್ಕೂರು ಕುರಾಡಿ ಕಾಡೂರು ರಸ್ತೆ	ಗ್ರಾಮೀಣ ರಸ್ತೆ	0.00	8.80	8.80	–	–	8.80	8.80	3.50	3.50 ರಿಂದ 12.00	–ಅದೇ–	ಉಡುಪಿ ತಾಲ್ಲೂಕು ಶೀರೂರು ಕೊಕ್ಕರ್ಣೆ ಸಂತೆಕಟ್ಟೆ ಮತ್ತು ಬಾರ್ಕೂರು ಹೆದ್ದಾಡಿ ರಸ್ತೆ (ಜಿ ಮು ರ) ಈ ರಸ್ತೆ ತುಂಬಾ ನಾದುರಸ್ತಿಯಲ್ಲಿದ್ದು ಮರು ಡಾಂಬರೀಕರಣ ಆಗಬೇಕಾಗಿದೆ	ಹನೇಹಳ್ಳಿ ನಡೂರು ಕಾಡೂರು	4236 1816 2565	–	ಶ್ರೀ ಜಯಪ್ರಕಾಶ್ ಹೆಗ್ಡೆ ಶಾಸಕರು ಬ್ರಹ್ಮಾವರ ಕ್ಷೇತ್ರ

1	2	3	4	5	6	7	8	9	10	11	12	13	14	15	16	17	18	19	20
4	-	ಬ್ರಹ್ಮಾವರ ಕ್ಷೇತ್ರ	ಯಡ್ಡಾಡಿ ಮಂದಾರ್ತಿ ರಸ್ತೆ	ಗ್ರಾಮೀನ ರಸ್ತೆ	0 00	3 20	3 70	-	-	3 20	3 20	3 50	3 50 ರಿಂದ 12 00	ಎಲ್ಲಾ ರಸ್ತೆಗಳು ಜಿಲ್ಲಾ ಪಂಚಾಯತ್‌ಗೆ ಸಂಬಂಧಿಸಿರುವುದರಿಂದ ವಾಹನ ಗಣತಿ ಮಾಹಿತಿಯು ಲಭ್ಯವಿರುವುದಿಲ್ಲ	ಉಡುಪಿ ತಾಲ್ಲೂಕು ಬ್ರಹ್ಮಾವರ ಜನ್ನಾಡಿ ರಸ್ತೆ ಮತ್ತು ಬಾರ್ಕೂರು ಹೆಬ್ಬಾಡಿ ರಸ್ತೆ (ಜ ಮು ರ) ಈ ರಸ್ತೆ ತುಂಬಾ ನಾದುರಸ್ತಿಯಲ್ಲಿದ್ದು ಮರು ಡಾಂಬರೀಕರಣ ಆಗದೇಕಾಗಿದೆ	ಯಡ್ಡಾಡಿ ನೆಡೂರು	3647 1816	-	ಶ್ರೀ ಜಯಪ್ರಕಾಶ್ ಹೆಗ್ಡೆ ಶಾಸಕರು ಬ್ರಹ್ಮಾವರ ಕ್ಷೇತ್ರ
5	-	ಬ್ರಹ್ಮಾವರ ಕ್ಷೇತ್ರ	ದೂಪದಕಟ್ಟೆ ಹೂನ್ನಾಳ ರಸ್ತೆ	ಗ್ರಾಮೀಣ ರಸ್ತೆ	0 00	5 00	5 00	-	-	5 00	5 00	3 00	3 ರಿಂದ 8 00	-ಅದೇ-	ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 17 ಈ ರಸ್ತೆ ತುಂಬಾ ನಾದುರಸ್ತಿಯಲ್ಲಿದ್ದು ಮರು ಡಾಂಬರಿಕರಣ ಆಗದೇಕಾಗಿದೆ	ಹರಾಡಿ ವಾರಂಬಳ್ಳಿ	3942 6178	-	ಶ್ರೀ ಜಯಪ್ರಕಾಶ್ ಹೆಗ್ಡೆ ಶಾಸಕರು ಬ್ರಹ್ಮಾವರ ಕ್ಷೇತ್ರ
6	-	ಬ್ರಹಾವರ ಕ್ಷೇತ್ರ	ವರ್ಡೂರು ಕುಂಟಾಲ ಕಟ್ಟೆ ವಡ್ಡೆ ರಸ್ತೆ	ಗ್ರಾಮೀಣ	0 00	5 00	5 00	5 00	-	-	5 00	-	3 ರಿಂದ 8 00	-ಅದೇ-	ಉಡುಪಿ ತಾಲ್ಲೂಕು ವರ್ಡೂರು ಹರಿಖಂಡಿಗೆ ದೊಂಡರಂಗಡಿ ರಸ್ತೆ (ಜ ಮು ರ) ಜಲ್ಲಿ ಹಾಕಿ ಡಾಂಮರೀಕರಣ ಮಾಡಬೇಕಾಗಿದೆ	ವರ್ಡೂರು ಬೈರಂಪಳ್ಳಿ	10565 3332	-	ಶ್ರೀ ಜಯಪ್ರಕಾಶ್ ಹೆಗ್ಡೆ ಶಾಸಕರು ಬ್ರಹ್ಮಾವರ ಕ್ಷೇತ್ರ

	–	ಬ್ರಹ್ಮಾವರ ಕ್ಷೇತ್ರ	ಕುರ್ಪಾಡಿ ಪೆರ್ಡೂರು ರಸ್ತೆ	ಗ್ರಾಮೀಣ ರಸ್ತೆ	0 00	5 25	5 25	–	5 25	–	5 25	3 75	7 50 ರಿಂದ 12 00	–ಅದೇ–	ಉಡುಪಿ ತಾಲ್ಲೂಕು ಮಲ್ಪೆ ಮೊಳಕಾಲೂರು (ರಾ ಹೆ) ಹಾಗೂ ಸೀತಾನದಿ ಬ್ರಹ್ಮಾವರ ರಸ್ತೆ (ಜಿ ಮು ರ)	ಹೊಸೂರು ಪೆರ್ಡೂರು ಕೆಂಜೂರು	2593 10565 3073	ಆರ್ ಐ ಡಿ ಎಫ್ ರ ಯೋಜನೆಯಡಿಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತದೆ	ಶ್ರೀ ಜಯಪ್ರಕಾಶ್ ಹೆಗ್ಡೆ ಶಾಸಕರು ಬ್ರಹ್ಮಾವರ ಕ್ಷೇತ್ರ
8	–	ಬ್ರಹ್ಮಾವರ ಕ್ಷೇತ್ರ	ಅತಿಯ ತಂತ್ರಾಡಿ ಹೆಗ್ಗುಂಜೆ ರಸ್ತೆ	ಗ್ರಾಮೀಣ ರಸ್ತೆ	0 00	4 5	4 50	4 5	–	–	4 5	–	–	–ಅದೇ–	ಉಡುಪಿ ತಾಲ್ಲೂಕು ಬಾರ್ಕೂರು ಹೆಬ್ಬಾಡಿ ರಸ್ತೆ (ಜಿ ಮು ರ)	ಕಾಡೂರು ಹೆಗ್ಗುಂಜೆ	2565 3748	–	ಶ್ರೀ ಜಯಪ್ರಕಾಶ್ ಹೆಗ್ಡೆ ಶಾಸಕರು ಬ್ರಹ್ಮಾವರ ಕ್ಷೇತ್ರ
9	–	–ಅದ –	ಸಾಸ್ತಾನ–ಪಾಡೇಶ್ವರ ದೆಣ್ಣಕುದ್ರು – ಬಾರ್ಕೂರು ರಸ್ತೆ	ಗ್ರಾಮೀಣ ರಸ್ತೆ	0 00	5 50	5 00												
10	–	–ಅದೇ–	ಪೇತ್ರಿ–ಕುಕ್ಕೆಹಳ್ಳಿ ಬಡ–ಹಿರಿಯಡ್ಕ ರಸ್ತೆ	ಗ್ರಾಮೀಣ ರಸ್ತೆ	0 00	10 50	10 50												
		ಬ್ರಹ್ಮಾವರ ಕ್ಷೇತ್ರ				69 95 ಕಿ ಮೀ													

ಕಾಪು ಕ್ಷೇತ್ರ

1	–	ಕಾಪು ಕ್ಷೇತ್ರ	ಶಿವ ಎಡ್ಮೇರು ಕಡಂಬು ನಡಿಬೆಟ್ಟು ಕಾಡಿಕಂಬಳ ರಸ್ತೆ	ಗ್ರಾಮೀಣ ರಸ್ತೆ	0 00	8 00	8 00	–	8 00	–	8 00	3 50	3 50 ರಿಂದ 7 50	ಎಲ್ಲಾ ರಸ್ತೆಗಳು ಜಿಲ್ಲಾ ಪಂಚಾಯತ್ ಗೆ ಸಂಬಂಧಿಸಿರುವುದರಿಂದ ವಾಹನ ಗಣತಿ ಮಾಹಿತಿಯು ಲಭ್ಯವಿರುವುದಿಲ್ಲ	ಉಡುಪಿ ತಾಲ್ಲೂಕು ಮಂಗಳೂರು ಆತ್ರಾಡಿ ರಾಜ್ಯ ಹೆದ್ದಾರಿ 67	ಶಿರ್ವ ಎಲಾರು	13281 3391	–	ಶ್ರೀ ಲಾಲಾಜಿ ಆರ್ ಮೆಂಡನ್ ಶಾಸಕರು ಕಾಪು ಕ್ಷೇತ್ರ
	–	ಕಾಪು ಕಷೇತ್ರ	ಮುದರಂಗಡಿಕೇಂ ? ಇರಂದಾಡಿ ರಸ್ತೆ	ಗ್ರಾಮೀಣ ರಸ್ತೆ	0 00	6 00	6 00	–	6 00	–	6 00	3 00	3 00 ರಿಂದ 8 00	–ಅದೇ–	ಉಡುಪಿ ತಾಲ್ಲೂಕು ನಂದಿಕೂರು ಶಿರ್ವ ರಸ್ತೆ (ಜಿ ಮು ರ) ಮತ್ತು ಮಂಗಳೂರು ಆತ್ರಾಡಿ ರಾಜ್ಯ ಹೆದ್ದಾರಿ 67	ಎಲ್ಲೂರು ಪಿಲಾರು	5844 3391	–	ಶ್ರೀ ಲಾಲಾಜಿ ಆರ್ ಮೆಂಡನ್ ಶಾಸಕರು ಕಾಪು ಕ್ಷೇತ್ರ
3	–	ಕಾಪು ಕ್ಷೇತ್ರ	ಕಟ್ಟಿಂಗೇರಿ ಅಕ್ಷರ ಕರವಾಳ ಕಟ್ಟಿಂಗೇರಿ ದೇವಸ್ಥಾನ ನಾಲ್ಕು ಬೀದಿ ರಸ್ತೆ	ಗ್ರಾಮೀಣ ರಸ್ತೆ	0 00	5 00	5 00	–	3 00	2 00	5 00	3 00	3 00 ರಿಂದ 7 50	–ಅದೇ–	ಉಡುಪಿ ತಾಲ್ಲೂಕು ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಾಜ್ಯ ಹೆದ್ದಾರಿಯ 37	ಬೆಳಗಳ ಕಟ್ಟಿಂಗೇರಿ	5324 2337	–	ಶ್ರೀ ಲಾಲಾಜಿ ಆರ್ ಮೆಂಡನ್ ಶಾಸಕರು ಕಾಪು ಕ್ಷೇತ್ರ

4	–	ಕಾಪು ಕ್ಷೇತ್ರ	ಮುದರಂಗಡಿ ಎಲಾಡು ರಸ್ತೆ	ಗ್ರಾಮೀಣ ರಸ್ತೆ	0 00	6 00	6 00	–	6 00	–	6 00	3 00	3 00 ರಿಂದ 8 00	–ಅದೇ–	ಉಡುಪಿ ತಾಲ್ಲೂಕು ನಂದಿಕೂರು ಶಿರ್ವ ರಸ್ತೆ (ಜಿ ಮು ರ) ಮತ್ತು ಮಂಗಳೂರು ಅತ್ರಾಡಿ ರಾಜ್ಯ ಹೆದ್ದಾರಿ 67	ಎಲ್ಲೂರು ಪಿಲಾರು	5844 3391	–	ಶ್ರೀ ಲಾಲಾಜಿ ಆರ್ ಮೆಂಡನ್ ಶಾಸಕರು ಕಾಪು ಕ್ಷೇತ್ರ
5	–	ಕಾಪು ಕ್ಷೇತ್ರ	ಪಾಂಗಲ ಇನ್ನಂಜೆ ಶಂಕರಪುರ ರಸ್ತೆ	ಗ್ರಾಮೀಣ ರಸ್ತೆ	0 00	4 00	4 00	–	–	4 00	4 00	3 00	3 ರಿಂದ 7 50	–ಅದೇ–	ಉಡುಪಿ ತಾಲ್ಲೂಕು ರಾಷ್ಟ್ರೀಯ ಹೆದ್ದಾರಿ 17 ಹಾಗೂ ಕಾಪು ಬಂಟಕಲ್ ರಸ್ತೆ (ಜಿ ಮು ರ) ಮತ್ತು ಕಟಪಾಡಿ ಶಿರ್ವ ರಸ್ತೆ (ಜಿ ಮು ರ)	ಪಾಂಗಳ ಇನ್ನಂಜೆ	1948 2898	–	ಶ್ರೀ ಲಾಲಾಜಿ ಆರ್ ಮೆಂಡನ್ ಶಾಸಕರು ಕಾಪು ಕ್ಷೇತ್ರ
6	–	ಕಾಪು ಕ್ಷೇತ್ರ	ಮುದರಂಗಡಿ ಹಲಸಿನ ಕಟ್ಟೆ ಬೆಳ್ಳಣ್ಣು ರಸ್ತೆ	ಗ್ರಾಮೀಣ ರಸ್ತೆ	0 00	6.50	6 50	–	–	6.50	6 50	3 00	3 00 ರಿಂದ 3 00	–ಅದೇ–	ಉಡುಪಿ ತಾಲ್ಲೂಕು ನಂದಿಕೂರು ಶಿರ್ವ ರಸ್ತೆ (ಜಿ ಮು ರ) ಮತ್ತು ಮಂಗಳೂರು ಅತ್ರಾಡಿ ರಾಜ್ಯ ಹೆದ್ದಾರಿ	ಎಲ್ಲೂರು ಸಾಂತೂರು ಪಿಲಾರು	5844 2906 3391	–	ಶ್ರೀ ಲಾಲಾಜಿ ಆರ್ ಮೆಂಡನ್ ಶಾಸಕರು ಕಾಪು ಕ್ಷೇತ್ರ

	-	ಕಾಪು ಕ್ಷೇತ್ರ	ಕುತ್ಯಾರು ಅರಬೀಕಟ್ಟೆ ಇರಂದಾಡಿ ರಸ್ತೆ	ಗ್ರಾಮೀಣ ರಸ್ತೆ	0 00	6 00	6 00	-	3 00	3 00	6 00	3 00	3 ರಿಇಂದ 8 00	-ಅದೇ-	ಉಡುಪಿ ತಾಲ್ಲೂಕು ಎರ್ಮಾಳು ಮುದರಂಗಡಿ ರಸ್ತೆ (ಜಿ ಮು ರ) ಮತ್ತು ಕಾಪು ಶಿರ್ವ ರಸ್ತೆ (ಜಿ ಮು ರ)	ಕುತ್ಯಾರು ಶಿರ್ವ ಎಲ್ಲೂರು	2656 13281 5844	-	ಶ್ರೀ ಲಾಲಾಜಿ ಆರ್ ಮೆಂಡನ್ ಶಾಸಕರು ಕಾಪು ಕ್ಷೇತ್ರ
8	ಕಾರ್ಕಳ	ಕಾಪು	ಪಿಲಾರ್ ಖಾನ್ ಸೂಡ ನಿಂಜೂರು ರಸ್ತೆ	ಹಳ್ಳಿ ರಸ್ತೆ	0 00	7 40	7 40	-	-	7 40	7 40	3 00	7 50	-ಅದೇ-	ಈ ರಸ್ತೆಯು ಮಂಗಳೂರು ಅತ್ರಾಡಿ ರಾ ಹೆ (ಎಸ್ ಹೆಚ್ 67) ಕಿಮೀ 45 00ರಿಂದ ಪ್ರಾರಂಭಗೊಂಡು ಸೂಡ ನಿಂಜೂರು ಗ್ರಾಮದಲ್ಲಿ ಹಾದು ಸುಬ್ರಹ್ಮಣ್ಯ ಉಡುಪಿ ರಾಜ್ಯ ಹೆದ್ದಾರಿ ರಸ್ತೆಯನ್ನು ಸಂಪರ್ಕಿಸುತ್ತದೆ	ಬೆಳ್ಮಣ್ಣು ಸೂಡ ನಿಂಜೂರು	4275	-	ಶ್ರೀ ಲಾಲಾಜಿ ಆರ್ ಮೆಂಡನ್ ಶಾಸಕರು ಕಾಪು ಕ್ಷೇತ್ರ
9	ಕಾರ್ಕಳ	ಕಾಪು	ಮಂಜರಪಲ್ಕೆ ಬೋಳ ಜಾರಿಗೆಕಟ್ಟೆ ರಸ್ತೆ	ಹಳ್ಳಿ ರಸ್ತೆ	0 00	6 20	6 20	-	-	6 20	6 20	3 00	7 50	-ಅದೇ-	ಈ ರಸ್ತೆಯು ಪಡುಬಿದ್ರಿ ಚಿಕ್ಕಲ್ ಗೂಡ್ ರಾಜ್ಯ ಹೆದ್ದಾರಿ ರಸ್ತೆ ಸಂ 1 ರಿಂದ ಪ್ರಾರಂಭಗೊಂಡು ಕಲ್ಯಾ ಬೋಳ ಮುಂಡ್ಕೂರು ಗ್ರಾಮದಲ್ಲಿ ಹಾದುಹೋಗಿ ಮಂಗಳೂರು ಅತ್ರಾಡಿ ರಾಜ್ಯ ಹೆದ್ದಾರಿಯನ್ನು ಸೇರುತ್ತದೆ	ಕಲ್ಯಾ ಬೋಳ ಮುಂಡ್ಕೂರು	3220	-	ಶ್ರೀ ಲಾಲಾಜಿ ಆರ್ ಮೆಂಡನ್ ಶಾಸಕರು ಕಾಪು ಕ್ಷೇತ್ರ
			ಕಾಪು ಕ್ಷೇತ್ರ ಒಟ್ಟು 55 10 ಕಿಮೀ																
			ಒಟ್ಟು 41 50 ಕಿಮೀ																

ಉಡುಪಿ ಕ್ಷೇತ್ರ																			
1	–	ಉಡುಪಿ ಕ್ಷೇತ್ರ	80 ಬಡಗುಬೆಟ್ಟು ಹಿರೇಬೆಟ್ಟು ಕಾಜರಗುತ್ತು ವರ್ವಾಡಿ ರಸ್ತೆ	ಗ್ರಾಮೀಣ ರಸ್ತೆ	0 00	9 32	9 32	–	–	9 32	9 32	3 5	3 50 ರಿಂದ 5 00	ಎಲ್ಲಾ ರಸ್ತೆಗಳು ಜಿಲ್ಲಾ ಪರಿಷತ್ ಗೆ ಸಂಬಂಧಿಸಿರುವುದರಿಂದ ವಾಹನ ಗಣತಿ ಮಾಹಿತಿಯು ಲಭ್ಯವಿರುವುದಿಲ್ಲ	ಉಡುಪಿ ತಾಲ್ಲೂಕು ಈ ರಸ್ತೆಯು ಅಂದಾಗಿಲು ಮಣಿಪಾಲ ಉದ್ಯವರ ಮಲ್ಪೆ ರಸ್ತೆ (ಜಿ ಮು ರ) ಹಾಗೂ ಮಲ್ಪೆ ಉಡುಪಿ ಕಾರ್ಕಳ ರಸ್ತೆ (ಜಿ ಮು ರ) ರಸ್ತೆಗೆ ಸಂಧೀಸುವುದು	80 ಬಡಗಬೆಟ್ಟು ಹಿರೇಬೆಟ್ಟು ಪರ್ಣಂಕಿಲ ಬೊಮ್ಮರಬೆಟ್ಟು	6985 2523 1867 7853	ನಬಾರ್ಡ್ ಯೋಜನೆಯಲ್ಲಿ	ಶ್ರೀ ರಘುಪತಿ ಭಟ್ ಶಾಸಕರು ಉಡುಪಿ ಕ್ಷೇತ್ರ
2	–	ಉಡುಪಿ ಕ್ಷೇತ್ರ	ಇಂದ್ರಾಳಿ ಮಂಚಿ ರಸ್ತೆ	ಗ್ರಾಮೀಣ ರಸ್ತೆ	0 00	5 00	5 00	–	–	5 00	5 00	5 00	5 00 ರಿಂದ 7 00	–ಅದೇ–	ಉಡುಪಿ ತಾಲ್ಲೂಕು ಈ ರಸ್ತೆಯು ಮಲ್ಪೆ ಮೊಳಕಾಲ್ಮೂರು (ರಾ ಹೆ) ಹಾಗೂ ಅಂದಾಗಿಲು ಮಣಿಪಾಲ ಉದ್ಯಾವರ ಮಲ್ಪೆ ರಸ್ತೆ (ಜಿ ಮು ರ) ರಸ್ತೆಯನ್ನು ಸಂಧಿಸುತ್ತದೆ	80 ಬಡಗಬೆಟ್ಟು ಅಲೆವೂರು	6985 4733	ನಬಾರ್ಡ್ ಯೋಜನೆಯಲ್ಲಿ	ಶ್ರೀ ರಘುಪತಿ ಭಟ್ ಶಾಸಕರು ಉಡುಪಿ ಕ್ಷೇತ್ರ
3	–	ಉಡುಪಿ ಕ್ಷೇತ್ರ	ಡಾ ಸುಬ್ರಾಯನ ರಸ್ತೆ	ಇತರೆ ಜಿಲ್ಲಾ ಮುಖ್ಯ ರಸ್ತೆ	0 00	5 80	5 80	–	–	5 80	5 80	3 50	3 50 ರಿಂದ 5 00	–ಅದೇ–	ಉಡುಪಿ ತಾಲ್ಲೂಕು ಈ ರಸ್ತೆಯು ರಾಷ್ಟ್ರೀಯ ಹೆದ್ದಾರಿ 17ನ್ನು ಸಂಪರ್ಕಿಸುತ್ತದೆ	ಮಲ್ಪೆ ಮತ್ತೂರು ಕೆಂಕನಿಡಿಯೂರು	19063 10071 5332	–	ಶ್ರೀ ರಘುಪತಿ ಭಟ್ ಶಾಸಕರು ಉಡುಪಿ ಕ್ಷೇತ್ರ

4		ಉಡುಪಿ ಕ್ಷೇತ್ರ	ಅಲೆವೂರ, ಮಣಿಪಾಲ ರಸ್ತೆ	ಗ್ರಾಮೀಣ ರಸ್ತೆ	0 00	6 80	6 809	–	–	6 80	6 80	3 50	3 50 ರಿಂದ 5 00	-ಅದೇ-	ಉಡುಪಿ ತಾಲ್ಲೂಕು ಈ ರಸ್ತೆಯ ಅಂಬಾಗಿಲು ಮಣಿಪಾಲ ಉದ್ಯಾನವ ಮಲ್ಪೆ ರಸ್ತೆ (ಜಿ ಮು ರ) ಹಾಗೂ ಮಂಗಳೂರು ಅತ್ರಾಡಿ ರಾಜ್ಯ ಹೆದ್ದಾರಿ ರಸ್ತೆಯನ್ನು ಸಂಧಿಸುತ್ತದೆ	ಅಲೆವೂರ, ಬೆಳ್ಳೇ ಅತ್ರಾಡಿ ಮಣಿಪಾಲ	4733 5324 [illegible]406 1168	–	ಶ್ರೀ ರಘುಪತಿ ಭಟ್ ಶಾಸಕರ, ಉಡುಪಿ ಕ್ಷೇತ್ರ
5	–	ಉಡುಪಿ ಕ್ಷೇತ್ರ	[illegible] ಪಡುಕೆರೆ– ಮಲ್ಪೆ ರಸ್ತೆ	ಗ್ರಾಮೀಣ ರಸ್ತೆ	0 00	13 40	13 40												
6	–	ಉಡುಪಿ ಕ್ಷೇತ್ರ	ಅತ್ರಾಡಿ- ಪರೀಕ ಬೆಳ್ಳಂಪಳ್ಳಿ ರಸ್ತೆ	ಗ್ರಾಮೀಣ ರಸ್ತೆ	0 00	4 50	4 50												

	-	ಉಡುಪಿ ಕ್ಷೇತ್ರ	ಬಡ್ತಿ ಪಂಚನಪಟ್ಟು ಎರ್ಲಪಾಡಿ	ಗ್ರಾಮೀಣ ರಸ್ತೆ	0 00	5 60	5 60	-	3 60	2 00	5 60	3 50	3 50 ರಿಂದ 5 00	ಎಲ್ಲಾ ರಸ್ತೆಗಳು ಜಿಲ್ಲಾ ಪಂಚಾಯತ್ ಗೆ ಸಂಬಂಧಿಸಿರುವುದರಿಂದ ವಾಹನ ಗಣತಿ ಮಾಹಿತಿಯು ಲಭ್ಯವಿರುವುದಿಲ್ಲ	ಉಡುಪಿ ತಾಲ್ಲೂಕು ಈ ರಸ್ತೆಯು ಮಲ್ಪೆ ಉಡುಪಿ ಕಾರ್ಕಳ (ಜಿ ಮು ರ) ರಸ್ತೆಯನ್ನು ಸೇರುತ್ತದೆ	ಬೊಮ್ಮರಬೆಟ್ಟು ಹಿರೇಬೆಟ್ಟು	7853 2523	-	ಶ್ರೀ ರಘುಪತಿ ಭಟ್ ಶಾಸಕರು ಉಡುಪಿ ಕ್ಷೇತ್ರ
8	-	ಉಡುಪಿ ಕ್ಷೇತ್ರ	ಬೊಮ್ಮರಬೆಟ್ಟುಕುದಿ ರಸ್ತೆ	ಗ್ರಾಮೀಣ ರಸ್ತೆ	0 00	4 00	4 00	-	2 00	2 00	4 00	3 50	3 50 ರಿಂದ5 00	-ಅದೇ-	ಉಡುಪಿತಾಲ್ಲೂಕು ಈರಸ್ತೆಯು ಮಲ್ಪೆಉಡುಪಿಕಾರ್ಕಳ(ಜಿ ಮು ರ)ರಸ್ತೆಯನ್ನು ಸೇರುತ್ತದೆ	ಬೊಮ್ಮರಬೆಟ್ಟುಕುದಿ	7853 1550	-	ಶ್ರೀ ರಘುಪತಿ ಭಟ್ ಶಾಸಕರು ಉಡುಪಿ ಕ್ಷೇತ್ರ
9	-	ಉಡುಪಿ ಕ್ಷೇತ್ರ	ಅಂಜಾರು ರಿಂಗ್ರಸ್ತೆ	ಗ್ರಾಮೀಣ ರಸ್ತೆ	0 00	6 60	6 60	-	-	6 60	6 60	5 50	5 50 ರಿಂದ 7 50	-ಅದೇ-	ಉಡುಪಿತಾಲ್ಲೂಕು ಈರಸ್ತೆಯು ಮಲ್ಪೆ ಮೊಳಕಾಲ್ಮೂರು ರಾಜ್ಯ ಹೆದ್ದಾರಿಯನ್ನು ಸೇರುತ್ತದೆ	ಬೊಮ್ಮರಬೆಟ್ಟು	7853	ನಬಾರ್ಡ್ ೯ ಯೋಜನೆಯಲ್ಲಿ	ಶ್ರೀ ರಘುಪತಿ ಭಟ್ ಶಾಸಕರು ಉಡುಪಿ ಕ್ಷೇತ್ರ
10	-	ಉಡುಪಿ ಕ್ಷೇತ್ರ	ದೆಂದೂರು ಕಟ್ಟೆ ಮಣಿಪುರ ರಸ್ತೆ	ಗ್ರಾಮೀಣ ರಸ್ತೆ	0 00	3 20	3 20	-	-	3 20	3 20	3 50	3.50 ರಿಂದ 5 50	-ಅದೇ-	ಉಡುಪಿ ತಾಲ್ಲೂಕು ಈ ರಸ್ತೆಯು ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಾಜ್ಯ ಹೆದ್ದಾರಿಯನ್ನು ಸೇರುತ್ತದೆ	ಮಣಿಪುರ ಮರ್ಣೆ	4924 1169	ಮಲೆನಾಡು ನಬಾರ್ಡ್ ೯ ಯೋಜನೆಯಲ್ಲಿ	ಶ್ರೀ ರಘುಪತಿ ಭಟ್ ಶಾಸಕರು ಉಡುಪಿ ಕ್ಷೇತ್ರ
		ಉಡುಪಿ ಕ್ಷೇತ್ರ	ಒಟ್ಟು	64 22	ಕಿಮೀ														

372 (824) ಶ್ರೀ ಜೀವಿಜಯ ಬಿ ಎ (ಸೋಮವಾರಪೇಟೆ) ಮಾನ್ಯ ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ಪಟ್ಟಣಕ್ಕೆ ಹಾರಂಗಿಯಿಂದ ನೀರು ಸರಬರಾಜು ಮಾಡುವ ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ದೊರೆತಿರುವುದು ನಿಜವಲ್ಲವೇ,

ಆ) ಹಾಗಿದ್ದಲ್ಲಿ, ಟೆಂಡರ್ ಆಗಿ ಕಾಮಗಾರಿ ಪ್ರಾರಂಭಿಸಿದ್ದರೂ ಸಹ ರಾಜ್ಯ ಸರ್ಕಾರ ತನ್ನ ಪಾಲಿನ ಹಣವನ್ನು ಬಿಡುಗಡೆ ಮಾಡದಿರಲು ಕಾರಣವೇನು ,

ಇ) ಈ ಯೋಜನೆಯನ್ನು ಕಾರ್ಯಗತಗೊಳಿಸಲು ಯಾವಾಗ ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು).

ಅ) ಹೌದು

ಆ) ರಾಜ್ಯ ಸರ್ಕಾರವು ಈ ಯೋಜನೆಗೆ 406,08 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿದ್ದು, ಇದರಲ್ಲಿ ರೂ 45 96 ಲಕ್ಷ ರೂ ಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ ಈ ಯೋಜನೆಗೆ ಈಗಾಗಲೇ ಬಿಡುಗಡೆಯಾಗಿರುವ ಮೊತ್ತದ ವಿವರಗಳು ಈ ಕೆಳಕಂಡಂತಿರುತ್ತದೆ

ರಾಜ್ಯ ಸರ್ಕಾರದ ಅನುದಾನ – ರೂ 45 96
ಕೇಂದ್ರ ಸರ್ಕಾರದ ಅನುದಾನ– ರೂ 45 96
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಇಲಾಖೆಯ ಅನುದಾನ ರೂ 112 00
ಒಟ್ಟು ರೂ 203 92
ಲಕ್ಷಗಳು

ಇ) ಈ ಯೋಜನೆಯನ್ನು ಕಾರ್ಯಗತಗೊಳಿಸಲು ಮೇಲೆ ನಮೂದಿಸಿದಂತೆ ರೂ 203 92 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ ಬಾಕಿ ಮೊತ್ತವನ್ನು ಅವಶ್ಯಕತೆಯ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು

373 (825) ಶ್ರೀ ಜೀವಿಜಯ ಬಿ ಎ (ಸೋಮವಾರಪೇಟೆ) . ಮಾನ್ಯ ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಮಾಹಿತಿ ತಂತ್ರಜ್ಞಾನ ಕೇಂದ್ರ ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ,

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು,

ಇ) ಎಲ್ಲಿ ಪ್ರಾರಂಭಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು)

ಅ) ಕೊಡಗು ಜಿಲ್ಲೆಯಲ್ಲಿ ಮಾಹಿತಿ ತಂತ್ರಜ್ಞಾನ ಉದ್ಯಾನವನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಯು ಸಧ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

374 (826) ಶ್ರೀ ಜೀವಿಜಯ ಬಿ ಎ (ಸೋಮವಾರಪೇಟೆ) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಸೋಮವಾರವೇಟೆ ತಾಲ್ಲೂಕಿನ ಶಿರಂಗಾಲದಿಂದ ವೀರಾಜಪೇಟೆ ತಾಲ್ಲೂಕಿನ ಮಾಕುಟ್ಟದ ರಸ್ತೆಯು ಸಂಚಾರಕ್ಕೆ ಯೋಗ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಸರ್ಕಾರ ಈ ಅಂತರ್ ರಾಜ್ಯ ರಸ್ತೆಯನ್ನು ದುರಸ್ಥಿಗೊಳಿಸಲು ಪ್ರಸ್ತಾವನೆಯನ್ನು ಇಲಾಖೆಯಿಂದ ಕಳುಹಿಸಿದ್ದರೂ ಯಾವ ಕಾರಣದಿಮದ ಇದುವರೆಗೆ ಮಂಜೂರಾತಿ ನೀಡಿರುವುದಿಲ್ಲ ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಬಂದಿದೆ

ಆ) ಸದರಿ ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಪರಿಶೀಲಿಸಲಾಗಿದ್ದು, ಅನುದಾನದ ಲಭ್ಯತೆಗನುಸಾರವಾಗಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು

375 (827) ಶ್ರೀ ಜೀವಿಜಯ ಬಿ ಎ (ಸೋಮವಾರಪೇಟೆ) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಶನಿವಾರಸಂತೆಯಿಂದ ಹಾಸನ ಜಿಲ್ಲೆ ಸಕಲೇಶಮರ ತಾಲ್ಲೂಕಿನ ಹೊಸೂರು ರಸ್ತೆ ಮತ್ತು ಸಕಲೇಶಮರ ತಾಲ್ಲೂಕಿನ ಕೌಕೋಡಿಯಿಂದ ಸೋಮವಾರಪೇಟೆ ಚೀಟಿಕಟ್ಟೆವರೆಗೆ ರಾಜ್ಯ ಹೆದ್ದಾರಿಯಾಗಿ ಉನ್ನತೀಕರಿಸಲು ಮುಖ್ಯಮಂತ್ರಿ ಮತ್ತು

ಲೋಕೋಪಯೋಗಿ ಇಲಾಖೆ ಸಚಿವರ ಆದೇಶವಿದ್ಧರು ಕೂಡ ಯಾವ ಕಾರಣದಿಂದ ಲೋಕೋಪಯೋಗಿ ಇಲಾಖೆ ಕ್ರಮವನ್ನು ಕೈಗೊಂಡಿರುವುದಿಲ್ಲ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಸೋಮವಾರಪೇಟೆ ತಾಲ್ಲೂಕಿನ ರಸ್ತೆಯಾದ ಬಸವನಕೊಪ್ಪ ಬೀಟಿಕಟ್ಟೆ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಹಾಗೂ ಸೋಮವಾರಪೇಟೆ ತಾಲ್ಲೂಕಿನ ಶನಿವಾರ ಸಂತೆಯಿಂದ ಸಕಲೇಶಪುರ ತಾಲ್ಲೂಕಿನ ಹೊಸೂರು ವರೆಗಿನ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಮೆಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ

376 (644) ಶ್ರೀ ಕೃಷ್ಣಾಪಾಲೇಮಾರ್ ಜೆ (ಸುರತ್ಕಲ್). ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಾರ್ಜುನ ಶಾಖೋತ್ಪನ್ನ ವಿದ್ಯುತ್ ಯೋಜನೆಯ ಅನುಷ್ಠಾನದ ಬಗ್ಗೆ ಸರ್ಕಾರದ ನಿಲುವುಗಳೇನು,

ಆ) ಪರಿಸರಕ್ಕೆ ಮತ್ತು ಜನರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಸರ್ಕಾರ ಅನುಸರಿಸಿದ ಕ್ರಮಗಳೇನು,

ಇ) ಪರಿಸರ ತಜ್ಞರು ಈ ಕುರಿತು ನೀಡಿದ ಅಭಿಪ್ರಾಯಗಳೇನು ಹಾಗು ಅವುಗಳನ್ನು ಸರ್ಕಾರ ಪರಿಗಣಿಸಿದೆಯೇ,

ಈ) ಇಲ್ಲವಾದಲ್ಲಿ ಕಾರಣಗಳೇನು,

ಉ) ಸ್ಥಳೀಯ ಜನರ ಸಮ್ಮತಿಯನ್ನು ಪಡೆಯುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು,

ಊ) ಸ್ಥಾವರಕ್ಕೆ ಬಳಸಿದ ನೀರು ಸಮುದ್ರಕ್ಕೆ ಸೇರದಂತೆ ಹಾಗೂ ಮೀನುಗಾರಿಕೆಯ ಕುರಿತಾಗಿ ಸರ್ಕಾರ ವಿಧಿಸಿರುವ ಮಾನದಂಡಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ರಾಜ್ಯವು ವಿದ್ಯುತ್ ಕೊರತೆಯಿಂದ ಬಳಲುತ್ತಿರುವುದರಿಂದ, ರಾಜ್ಯ ಸರ್ಕಾರವು ನಾಗಾರ್ಜುನ ಶಾಖೋತ್ಪನ್ನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ಸಂಪೂರ್ಣ ಬೆಂಬಲ ನೀಡುವುದು

ಆ) ಪರಿಸರಕ್ಕೆ ಮತ್ತು ಜನರಿಗೆ ಈ ಯೋಜನೆಯಿಂದಾಗುವ ಹಾನಿಯನ್ನು ತಡೆಯಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಪರಿಸರ ಮತ್ತು ಅರಣ್ಯ ಮಂತ್ರಾಲಯ, ಕೇಂದ್ರ ಸರ್ಕಾರದವರು ಈ

ಯೋಜನೆಗಳಿಗೆ ಅನುಮತಿ ನೀಡುವಾಗ ಪರಿಸರ ಸಂರಕ್ಷಣೆಗೆ ವಿಧಿಸಿರುವ ಶರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸರ್ಕಾರವು ನಾಗಾರ್ಜುನ ವಿದ್ಯುತ್ ನಿಗಮ ನಿಯಮಿತಕ್ಕೆ ಆದೇಶಿಸಿದೆ

ಇ) ಪರಿಸರ ತಜ್ಞರು ಮತ್ತು ಸ್ಥಳಿಯರು ಈ ಯೋಜನೆಯಿಂದ ಪರಿಸರಕ್ಕೆ ಹಾನಿಯಾಗುತ್ತದೆಂದು ಅಭಿಪ್ರಾಯ ಪಟ್ಟಿರುವರು ಮಾನ್ಯ ಮುಖ್ಯ ಮಂತ್ರಿಯವರು ಸ್ಥಳೀಯ ಲೋಕಸಭಾ ಸದಸ್ಯರು, ವಿಧಾನ ಸಭಾ/ವಿಧಾನ ಪರಿಷತ್ ಸದಸ್ಯರು ಮತ್ತು ಸ್ಥಳೀಯ ಮುಖಂಡರ ಸಭೆಯನ್ನು ಕರೆದು ರಾಜ್ಯದಲ್ಲಿ ವಿದ್ಯುತ್ ಕೊರತೆ ಇರುವುದರ ಬಗ್ಗೆ ಎಲ್ಲರಿಗೂ ತಿಳಿಸಿ ಹೇಳಿದ್ದಾರೆ ಮತ್ತು ಯೋಜನೆಯಿಂದ ಪರಿಸರಕ್ಕೆ ಯಾವುದೇ ಹಾನಿಯಾಗದಂತೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದೆಂದು ಭರವಸೆ ನೀಡಿರುವರು

ಈ) ಉದ್ಭವಿಸುವುದಿಲ್ಲ

ಉ) ಸ್ಥಳೀಯ ಜನರ ಸಮ್ಮತಿಯನ್ನು ಪಡೆಯಲು ಮೀನುಗಾರ ಮುಖಂಡರು ಮತ್ತು ಸ್ಥಳೀಯ ಜನರನ್ನು ಒಳಗೊಂಡಂತೆ ಸುಮಾರು 165 ಜನರ ತಂಡವನ್ನು ಎನ್ ಟಿ ಪಿ ಸಿ ಯವರು ಕಾರ್ಯಗತಗೊಳಿಸಿರುವ ಆಂಧ್ರಪ್ರದೇಶದ ಕರಾವಳಿಯಲ್ಲಿನ ಸಿಂಹಾದ್ರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ಅಧ್ಯಯನ ಪ್ರವಾಸಕ್ಕೆ ಕರೆದುಕೊಂಡು ಹೋಗಲಾಗಿದೆ

ಊ) ಸ್ಥಾವರಕ್ಕೆ ಬಳಸಿದ ನೀರನ್ನು ಶುದ್ಧಿಕರಿಸಿ ಮತ್ತು ಮೀನುಗಾರಿಕೆಗೆ ಯಾವುದೇ ತೊಂದರೆ ಆಗದಂತೆ ಕ್ರಮ ಕೈಗೊಳ್ಳಲು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಪರಿಸರ ಮತ್ತು ಅರಣ್ಯ ಮಂತ್ರಾಲಯ, ಕೇಂದ್ರ ಸರ್ಕಾರದವರು ವಿಧಿಸಿರುವ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಆದೇಶಿಸಿದೆ

377 (645) ಶ್ರೀ ಕೃಷ್ಣಾಪಾಲೇಮಾರ್ ಜೆ (ಸುರತ್ಕಲ್) ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ಜಿಲ್ಲೆಯಲ್ಲಿ ಕ್ರೀಡಾ ಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಯಾವ ಹಂತದಲ್ಲಿದೆ, ಹಾಗೂ ಆ ಕುರಿತ ಯೋಜನೆಗಳನ್ನು ಸಿದ್ಧಪಡಿಸಲಾಗಿದೆಯೇ

(ವಿವರಗಳನ್ನು ನೀಡುವುದು),

ಆ) ಹಾಗಿದ್ದಲ್ಲಿ ಈ ಯೋಜನೆಗಾಗಿ ನಿಗಧಿಪಡಿಸಿದ ಹಣದ ಮೊತ್ತ ಎಷ್ಟು,

ಇ) ತ್ವರಿತಗತಿಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು).

ಅ) ರಾಜ್ಯದ ಕೆಳಕಾಣಿಸಿದ 23 ಜಿಲ್ಲೆಗಳಲ್ಲಿ ಕ್ರೀಡಾ ಶಾಲೆ ಆರಂಭಿಸಲು ಸರ್ಕಾರಿ ಆದೇಶ ಸಂಖ್ಯೆ ವಾಪ್ರಯು 75 ಯುಸೇಕ್ರೀ 2006 ಬೆಂಗಳೂರು ದಿನಾಂಕ 12 1 2007 ರಲ್ಲಿ ಮಂಜೂರಾತಿ ನೀಡಲಾಗಿದೆ

1 ಹಾಸನ, 2, ರಾಯಚೂರು, 3 ದಾವಣಗೆರೆ, 4 ಬಿಜಾಪುರ, 5 ಬೀದರ್ 6 ಚಿಕ್ಕಮಗಳೂರು, 7 ಬೆಳಗಾಂ 8 ಬೆಂಗಳೂರು ಗ್ರಾಮಾಂತರ, 9 ತುಮಕೂರು 10 ಚಿತ್ರದುರ್ಗ 11 ಮಂಡ್ಯ 12 ಶೀವಮೊಗ್ಗ 13 ಹಾವೇರಿ 14 ಗದಗ 15 ಬಾಗಲಕೋಟೆ 16 ಕೊಪ್ಪಳ 17 ಉಡುಪಿ 18 ಕೋಲಾರ 19 ಚಾಮರಾಜನಗರ 20 ಉತ್ತರಕನ್ನಡ 21 ದಕ್ಷಿಣ ಕನ್ನಡ 22 ಮೈಸೂರು 23 ಧಾರವಾಡ

ಆಯಾ ಜಿಲ್ಲಾ ಪಂಚಾಯ್ತಿಗಳು ವಸತಿ ಸೌಕರ್ಯಕ್ಕಾಗಿ ಕಟ್ಟಡಗಳನ್ನು ಒದಗಿಸಿ, ಕಟ್ಟಡದ ನಿರ್ವಹಣಾ ವೆಚ್ಚ ಭರಿಸಬೇಕಾಗಿರುತ್ತದೆ ಕ್ರೀಡಾಪಟುಗಳ ಆಯ್ಕೆ, ಪ್ರವೇಶ, ಶೈಕ್ಷಣಿಕ ವೆಚ್ಚ, ಭೋಜನಾ ವೆಚ್ಚ ಅಗತ್ಯ ಕ್ರೀಡಾ ಸಾಮಗ್ರಿಗಳ ವೆಚ್ಚ ಪೀಠೋಪಕರಣ ವೆಚ್ಚ ಸಿಬ್ಬಂದಿ ವೆಚ್ಚ ವೈದ್ಯಕೀಯ ಮುಂತಾದ ವೆಚ್ಚಗಳನ್ನು ರಾಜ್ಯ ವಲಯದಿಂದ ಭರಿಸಲಾಗುವುದು 6 ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯ್ತಿಗಳು ಕಟ್ಟಡ ಒದಗಿಸಿದ್ದು ಕ್ರೀಡಾ ಶಾಲೆಗಳನ್ನು ಪ್ರಾರಂಭಿಸಲಾಗಿದೆ 13 ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯತಿಗಳು ಕಟ್ಟಡ ಒದಗಿಸಿದ್ದು ಕ್ರೀಡಾ ಶಾಲೆ ಆರಂಭಿಸಲಾಗುತ್ತಿದೆ

ದಕ್ಷಿಣ ಕನ್ನಡ ಜಿಲ್ಲೆ ಶಿವಮೊಗ್ಗ ಉತ್ತರ ಕನ್ನಡ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಸೂಕ್ತ ಕಟ್ಟಡ ಒದಗಿಸುವಂತೆ ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಇವರನ್ನು ಕೋರಲಾಗಿದೆ

ಆ) ಆವರ್ತಕ ವೆಚ್ಚಕ್ಕಾಗಿ ರೂ 1 00 ಕೋಟಿಗಳನ್ನು ಮತ್ತು ಅನಾವರ್ತಕ ವೆಚ್ಚಕ್ಕಾಗಿ ರೂ 2 00 ಕೋಟಿಗಳು ಮಂಜೂರಾಗಿರುತ್ತದೆ

ಇ) ಎಲ್ಲಾ ಶಾಲೆಗಳಿಗೆ ಅಗತ್ಯವಾದ ಹಾಸಿಗೆ ದಿಂಬುಗಳನ್ನು ಒದಗಿಸಲಾಗಿದೆ ಭೋಜನ ವ್ಯವಸ್ಥೆಯನ್ನು ಗುತ್ತಿಗೆ ಆಧಾರದ ಮೇಲೆ ಖರೀದಿ ಮಾಡಲು ಟೆಂಡರ್ ಕರೆಯಲು ಅಗತ್ಯ ಮಂಚಗಳನ್ನು ಖರೀದಿಸಲು ಟೆಂಡರ್ ಕರೆಯಲು ಕ್ರೀಡಾ ಸಮವಸ್ತ್ರವಾದ ಟಿ ಷರ್ಟ್ಸ್, ಟ್ರಾಕ್ ಸೂಟ್ ಷೂ ಮತ್ತು ಸಾಕ್ಸ್ ಖರೀದಿಸಲು ಆಯಾ ಸಹಾಯಕ ನಿರ್ದೇಶಕರಿಗೆ ಅನುಮತಿ

ನೀಡಲಾಗಿದೆ ದಿನಾಂಕ 27 1 2007ರವರೆಗೆ ಈ ಕೆಳಕಂಡ ಜಿಲ್ಲೆಗಳಲ್ಲಿ ಕ್ರೀಡಾಶಾಲೆಗಳನ್ನು ಪ್ರಾರಂಭಿಸಲಾಗಿದೆ

1 ಹಾಸನ, 2, ರಾಯಚೂರು, 3 ದಾವಣಗೆರೆ, 4 ಬಿಜಾಪುರ, 5 ಬೀದರ್ 6 ಚಿಕ್ಕಮಗಳೂರು, 7 ಬೆಳಗಾಂ

378 (646) ಶ್ರೀ ಕೃಷ್ಣಾಪಾಲೇಮಾರ್ ಜೆ (ಸುರತ್ಕಲ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರಾವಳಿ ಪ್ರದೇಶದ ಜನರು ವರ್ಷಂಪ್ರತಿ ಎದುರಿಸುತ್ತಿರುವ ಕಡರೆತದಿಂದ ಉಂಟಾಗುವ ಪರಿಣಾಮಗಳನ್ನು ಎದುರಿಸಲು ಸರ್ಕಾರ ಕೈಗೊಂಡ ಮುಂಜಾಗರೂಕತಾ ಕ್ರಮಗಳೇನು,

ಆ) ಕಡಲ್ಕೊರೆತಕ್ಕೆ ಶಾಶ್ವತ ಪರಿಹಾರ ರೂಪಿಸುವ ನಿಟ್ಟಿನಲ್ಲಿ ಸರ್ಕಾರದ ನಿಲುವುಗಳೇನು,

ಇ) ವರ್ಷ ವರ್ಷವೂ ತಾತ್ಕಾಲಿಕ ಪರಿಹಾರವನ್ನು ಒದಗಿಸಲು ಬದಲು ಶಾಶ್ವತ ಪರಿಹಾರ ಒದಗಿಸಲು ಸರ್ಕಾರ ಕ್ರಮ ಜರುಗಿಸುವುದೇ,

ಈ) ಕೇಂದ್ರ ಸರ್ಕಾರದ ನೆರವಿನೊಂದಿಗೆ ಕರಾವಳಿ ಪ್ರದೇಶದಲ್ಲಿ ತಡೆಗೋಡೆ ನಿರ್ಮಾಣ ಮಾಡಲು ಯೋಜನೆಯನ್ನು ರೂಪಿಸಲಾಗಿದೆಯೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) .

ಅ) ತೀವ್ರತರವಾದ ಸಮುದ್ರ ಕೊರತೆ ಸಂಭವಿಸಿದ ಪ್ರದೇಶಗಳಲ್ಲಿ ತಾತ್ಕಾಲಿಕ ಕಲ್ಲಿನ ತಡೆಗೋಡೆ ಅಥವಾ ಮರಳು ಚೀಲಗಳ ಬಂಡಿಂಗ್ ನಿರ್ಮಿಸಿ ತುರ್ತು ಸಂರಕ್ಷಣೆ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ

ಆ) Central Water & Power Research Station (C W P R S) Pune ಕರ್ನಾಟಕ ಇಂಜಿನಿಯರಿಂಗ್ ರಿಸರ್ಚ್ ಸ್ಟೇಷನ್ ಮೈಸೂರು ಸಂಸ್ಥೆಯವರು ಅದ್ಯಯನ ಮಾಡಿ ನೀಡಿರುವ ತಾಂತ್ರಿಕ ವಿನ್ಯಾಸದಂತೆ ಈವರೆಗೆ ತೀವ್ರ ಸಮುದ್ರ ಕೊರತೆ ಸಂಭವಿಸಿದ ಪ್ರದೇಶಗಳಲ್ಲಿ ಸುಮಾರು 50 ಕಿ ಮೀ ಉದ್ದದ ಪ್ರದೇಶದಲ್ಲಿ ಅಂದಾಜು ವೆಚ್ಚ ರೂ 136 00 ಕೋಟಿ (ಪರಿಷ್ಕೃತ ಅಂದಾಜು ರೂ 292 00 ಕೋಟಿ) ಗಳಿಗೆ “ರಾಷ್ಟ್ರೀಯ ಕರಾವಳಿ ತೀರ ಸಂರಕ್ಷಣೆ ಯೋಜನೆ” ಅಡಿಯಲ್ಲಿ ವಿನ್ಯಾಸಂತೆ ಕಲ್ಲಿನ ತಡೆಗೋಡೆ ನಿರ್ಮಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಇದು ಕೇಂದ್ರ ಸರ್ಕಾರವು ತಯಾರಿಸಿರುವ National Coastal Protection Project (N C P P) Phase-I ರಲ್ಲಿ ಸೇರ್ಪಡೆಯಾಗಿರುತ್ತದೆ ತೀವ್ರ ಸಮುದ್ರ ಕೊರತೆ ಸಂಭವಿಸುತ್ತಿರುವ

ಉಳ್ಳಾಲ ಪ್ರದೇಶದಲ್ಲಿ "T" ಗ್ರಾಯನ್ಸ್ ನಿರ್ಮಿಸುವ ಅಥವಾ STABI PLEGE ತಂತ್ರಜ್ಞಾನ ಅಳವಡಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ

ಇ) –ಹೌದು–

ಮೇಲೆ ವಿವರಿಸಿರುವಂತೆ ಯೋಜನೆಗಳು ಸರ್ಕಾರದ ಮುಂದೆ ಪರಿಶೀಲನೆಯಲ್ಲಿದ್ದು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ

ಈ) –ಹೌದು–

ಕೇಂದ್ರ ಪುರಸ್ಕೃತ ಯೋಜನೆಯಡಿ ಕುಂದಾಪುರ ತಾಲ್ಲೂಕು ಪಡುವರಿಯಲ್ಲಿ ರೂ 575 00 ಲಕ್ಷ ಅಂದಾಜು ವೆಚ್ಚದಲ್ಲಿ 1170 ಮೀ ಉದ್ದಕ್ಕೆ ತಡೆಗೋಡೆ ನಿರ್ಮಿಸುವ ಕಾಮಗಾರಿಯ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರೆತಿದ್ದು ಶೀಘ್ರವಾಗಿ ಕಾಮಗಾರಿ ಪ್ರಾರಂಭಿಸಲಾಗುವುದು ರಾಜ್ಯದ ಕರಾವಳಿಯಲ್ಲಿ ತೀವ್ರ ಸಮುದ್ರ ಕೊರೆತ ಸಂಭವಿಸುತ್ತಿರುವ ಸುಮಾರು 50 ಕಿ ಮೀ ಪ್ರದೇಶದಲ್ಲಿ 136 00 ಕೋಟಿ (ಪರಿಸ್ಕೃತ ಅಂದಾಜು ರೂ 292 00 ಕೋಟಿ) ಅಂದಾಜು ವೆಚ್ಚದಲ್ಲಿ ಕೇಂದ್ರ ಸರ್ಕಾರದ "ರಾಷ್ಟ್ರೀಯ ಕರಾವಳಿ ತೀರ ಸಂರಕ್ಷಣೆ ಯೋಜನೆಯಡಿ" ತಡೆಗೋಡೆ ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಲಾಗಿದ್ದು ಇದು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ

379 (647) ಶ್ರೀ ಕೃಷ್ಣಾಪಾಲೇಮಾರ್ ಜೆ (ಸುರತ್ಕಲ್) ಮಾನ್ಯ ಗೃಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಸಂಚಾರ ಸುಧಾರಣೆಗಾಗಿ ಚಾಲನೆಗೊಂಡ ಬಿ–ಟ್ರಾಕ್ ಯೋಜನೆಗಳು ಯಾವುವು (ವಿವರ ಒದಗಿಸುವುದು),

ಆ) ಸದರಿ ಕಾರ್ಯಕ್ರಮದ ಪ್ರಗತಿಯೇನು

ಇ) ನಗರದ ವಿವಿಧ ಭಾಗಗಳಲ್ಲಿ ಉಂಟಾಗುತ್ತಿರುವ ಸಂಚಾರ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ರೂಪಿಸಿದ ಯೋಜನೆಗಳು ಯಾವುವು?

ಶ್ರೀ ಎಂ ಪಿ ಪ್ರಕಾಶ್ (ಗೃಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) .

ಅ) ಬೆಂಗಳೂರು ನಗರದ ಸಂಚಾರ ಸುಧಾರಣೆಗಾಗಿ ಚಾಳನೆಗೊಂಡ ಬಿ–ಟ್ರಾಕ್ ಯೋಜನೆಗಳು 2006ರಿಂದ ಆರಂಭಿಸಿ ಮುಂಬರುವ ವರ್ಷಗಳಲ್ಲಿ ಕೈಗೊಳ್ಳಲಾಗುವ ವಿವಿಧ ಯೋಜನೆಗಳು ಈ ಕೆಳಕಂಡಂತೆ ಇರುತ್ತದೆ

ವಿಷಯಗಳು	2006–07	2007–08	2008–09	2009–10	2010–11	ಒಟ್ಟು ಮೊತ್ತ
ಜಂಕ್ಷನ್ ಅಭಿವೃದ್ಧಿಗಳು	2 00	7 00	7 00	7 00	7 00	30 00
ರಸ್ತೆ ಸೌಲಭ್ಯ ರಸ್ತೆ ಸೌಕರ್ಯಗಳು, ರಸ್ತೆ ಗುರುತುಗಳು	5 00	23 75	23 75	23 75	23 75	100 00
ಇಂಟೆಲಿಜೆಂಟಾ ಟ್ರಾನ್ಸ್ ಪೋರ್ಟ್ ಸಿಸ್ಟಂ	30 00	30 00	30 00	30 00	30 00	150 00
ಸರ್ವೈಲೆನ್ಸ್/ಮಾನಿಟರಿಂಗ್ ಹಾಗೂ ಎನ್ ಪೋರ್ಸ್ ಮೆಂಟ್ ಕ್ಯಾಮೆರಾಗಳು ಇತ್ಯಾದಿ	5 00	11 25	11 25	11 25	11 25	50 00
ಶಿಕ್ಷಣ ಮತ್ತು ತರಬೇತಿ ಮತ್ತಿತರೆ	2 00	4 5	4 5	4 5	4 5	20 00
ಒಟ್ಟು ಮೊತ್ತ	44 00	76 5	76 5	76 5	76 5	350 00

2006–07ರ ಆರ್ಥಿಕ ವರ್ಷದಲ್ಲಿ ಬಿ–ಟ್ರ್ಯಾಕ್–2010 ಕಾರ್ಯಕ್ರಮದ ಯೋಜನೆಗಳು ಈ ಕೆಳಗಿನಂತಿರುತ್ತದೆ

1 10 ಪ್ರಮುಖ ವಲಯಗಳ (ಸಿಗ್ನಲ್ ಗಳ) ಕ್ರೋಡೀಕರಣ (ಏಕೀಕರಣ), ವಾಹನೋತ್ತೇಜಿತ ಸಿಗ್ನಲ್‌ಗಳನ್ನು ಅಳವಡಿಸುವುದರ ಮುಖಾಂತರ ಚುರುಕಾದ ಇಂಟೆಲಿಜೆಂಟ್ ಟ್ರಾಫಿಕ್ ಸಿಗ್ನಲ್ ವ್ಯವಸ್ಥೆಯನ್ನು ಅಳವಡಿಸುವುದು ಮೆಟಾಲಿಕ್‌ನಿಂದ ಪಾಲಿಕಾರ್ಬೋನೇಟ್ ಸಿಗ್ನಲ್‌ಗೆ ಹಾಗೂ ಎನ್‌ಕ್ಯಾಂಡೆಸೆಂಟ್ ಬಲ್ಬ್ ನಿಂದ ಎಲ್‌ಇಡಿ ಬಲ್ಬ್ ಗಳಿಗೆ ದುರಸ್ತಿ ಅಥವಾ ನವೀಕರಣಗೊಳಿಸುವುದನ್ನೊಳಗೊಂಡಂತೆ ಹಾಲಿ ಈಗಿರುವ 165 ಸಂಚಾರ ಸಿಗ್ನಲ್ ಗಳ ಉನ್ನತೀಕರಣ/ಆಧುನಿಕರಣ ಗೊಳಿಸುವುದು

2 ಸಮಗ್ರ ಕೇಂದ್ರ ಪ್ರದೇಶ ಹಾಗೂ ಪ್ರಮುಖ ವಲಯ ಪ್ರದೇಶಗಳಲ್ಲಿ ಸಿಗ್ನಲ್ ಗಳ ಸಮಯ ಹಾಗೂ ಬಸ್ ಸಂಚಾರದ ಪ್ರಾಧಾನ್ಯತೆ ಇವುಗಳಿಗಾಗಿ ಅತ್ಯಾಧುನಿಕ ಏರಿಯಾ ಟ್ರಾಫಿಕ್ ಕಂಟ್ರೋಲ್ (ಎ ಟಿ ಸಿ–ಸಂಪರ್ಕಜಾಲ) ರೂಪಿಸುವ ಬಗ್ಗೆ ವಿವರವಾದ ಯೋಜನೆಯನ್ನು ತಯಾರಿಸುವುದು

3 ಕೇಂದ್ರ ನಿಯಂತ್ರಣ ಕೋಣೆಯೊಂದಿಗೆ ನಿಸ್ತಂತು ಸಂಪರ್ಕ ಹಾಗು ಸಾಫ್ಟ್‌ವೇರ್ ವ್ಯವಸ್ಥೆಯಿರುವ ಉನ್ನತ ಗುಣಮಟ್ಟದ ಟಿ ಪಿ ಜಡ್ ಕ್ಯಾಮೆರಾಗಳನ್ನು 50 ಜಂಕ್ಷನ್‌ಗಳಲ್ಲಿ ಅಳವಡಿಸುವುದರ ಮೂಲಕ ಸಂಚಾರದ ಹರಿವಿನ ನೇರ ವಿಡಿಯೋ ಪ್ರದರ್ಶನದ ವ್ಯವಸ್ಥೆಯಿಂದಾಗಿ ಸಂಚಾರವನ್ನು ಗುಣಾತ್ಮಕವಾಗಿ ಸುಗಮಗೊಳಿಸುವುದು

4 50 ಎಲ್ ಇ ಡಿ ವೇರಿಯಬಲ್ ಮೆಸೇಜ್ ಸಿಸ್ಟಂ (ಫಲಕಗಳು) ಅನ್ನು ಸ್ಥಾಪಿಸಿ ಸಂಚಾರ ಪರಿಸ್ಥಿತಿಯ ಬಗ್ಗೆ ಸ್ಥಗಿತಗಳ ಬಗ್ಗೆಮಾರ್ಗ ಬದಲಾವಣೆ ಬಗ್ಗೆ ಸಮಚಾರ ನಿರ್ವಹಣಾ ಕೇಂದ್ರದೊಂದಿಗೆ ಅಂತರ್ ಸಂಪರ್ಕ ಹೊಂದಿರುವ ವ್ಯವಸ್ಥೆಯಿಂದಾಗಿ ಸಾರ್ವಜನಿಕರಿಗೆ ಪೋಲೀಸರಿಂದ ಅಂತಹ ಮಾಹಿತಿಯನ್ನು ವಿ ಎಂ ಎಸ್ ಮೂಲಕ ಒದಗಿಸುವುದು ಹಾಗೂ ಎಚ್ಚರಿಸುವುದು

5 ಸಂಚಾರ ಜಾಗೃತಿಗಾಗಿ (ಎಚ್ಚರಿಸಲು) ವಿ ಎಂ ಎಸ್ ಸಂಪರ್ಕ ಮತ್ತು ರೇಡಿಯೋ ಸ್ಟೇಷನ್ ಗಳೊಂದಿಗೆ ಸಂಪರ್ಕವಿರುವ ಸಂಚಾರ ನೆರವು ಮೇಜಿನ (ಟ್ರಾಫಿಕ್ ಹೆಲ್ಫ್ ಡೆಸ್ಕ್) ನಿಸ್ತಂತು ನಿಯಂತ್ರಣ ಕೋಣೆಯಲ್ಲಿ ಸಿಗ್ನಲ್ ಗಳ ಸ್ಥಿತಿಗತಿಗಳನ್ನು ಬಿಂಬಿಸುವ ವಿಡಿಯೋ ಚಿತ್ರವನ್ನು ತೋರಿಸುವಂತಹ ಬೃಹತ್ ವಿಡಿಯೋ ಚಿತ್ರವನ್ನು ತೋರಿಸುವಂತಹ ಬೃಹತ್ ವಿಡಿಯೋ ಗೋಡೆಗಳನ್ನು ಹೊಂದಿರುವ ಅತ್ಯಾಧುನಿಕ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಕೇಂದ್ರ (ಟಿ ಎಂ ಸಿ) ವನ್ನು ಸ್ಥಾಪಿಸುವುದು

6 ಸ್ವಯಂಚಾಲಿತ ಸಂಚಾರ ನಿಯಮಜಾರಿ ಕ್ಯಾಮೆರಾಗಳನ್ನು ಅಳವಡಿಸುವುದರ ಮೂಲಕ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಗಣಕೀಕೃತ ಕೇಂದ್ರದ ಮುಖಾಂತರ, ಕೆಂಪು-ಸಿಗ್ನಲ್ ಜಂಪ್ ನಂತಹ ಉಲ್ಲಂಘನೆಗಳು, ವಾಹನಗಳನ್ನು ಅತಿ ವೇಗದಿಂದ ಚಲಾಯಿಸುವಂತಹ ಉಲ್ಲಂಘನೆಗಳ ಬಗ್ಗೆ ಸ್ವಯಂಚಾಲಿತವಾಗಿ ಚಲನ್ನುಗಳನ್ನು ಹೊರಡಿಸುವುದು

7 ಸಂಚಾರ ಸೂಚನೆಗಳನ್ನು ನೀಡುವುದರ ಸಲುವಾಗಿ ಸಂಚಾರ ಪೋಲೀಸ್ ಬ್ಯಾರಿಕೇಡ್‌ಗಳು, ಪಧವಿಭಜನೆಗಾಗಿ ಟ್ಯೂಬುಲರ್ ಕೋನ್ಸ್ ಗಳು, ಸಿಕ್ಸೂಚಿ ಫಲಕಗಳು/ ಬೃಹತ್ ಗ್ಯಾಂಟ್ರಿಗಳನ್ನು ಸ್ಥಾಪಿಸುವುದು

8 ಪ್ರಧಾನ ಸಂಪರ್ಕ ರಸ್ತೆಗಳಲಿ ಧರ್ಮೋ ಪ್ಲಾಸ್ಟಿಕ್ ಬಣ್ಣದಿಂದ ರಸ್ತೆಗಳಿಗೆ ಬಣ್ಣ ಬಳಿಯುವುದು

9 ಸಂಚಾರ ಪೋಲೀಸರು ಮತ್ತಿತರ ತರಬೇತಿಗಾಗಿ ಅತ್ಯಾಧುನಿಕ ಸಂಚಾರ ತರಬೇತಿ ಶಾಲೆಯನ್ನು ಅಭಿವೃದ್ಧಿಗೊಳಿಸಲು ಯೋಜನೆಯನ್ನು ರೂಪಿಸುವುದು

10 ಗಸ್ತು ವಾಹನಗಳನ್ನು ಒದಗಿಸುವುದು, ಟೋಯಿಂಗ್ ವಾಹನಗಳನ್ನು ಒದಗಿಸುವುದು ಮತ್ತು ಇಂಟರ್‌ಸೆಪ್ಟರ್ಸ್ ಮುಖಾಂತರ ಸಂಚಾರ ಪೊಲೀಸರ ಓಡಾಟದ ಗುಣಮಟ್ಟವನ್ನು ಹೆಚ್ಚಿಸುವುದು

11 ಸ್ವರಕ್ಷಣೆಯ ಉಪಕರಣಗಳನ್ನು ಪೊಲೀಸ್ ಕಾನ್ಸ್‌ಟೇಬಲ್‌ಗಳಿಗೆ ಒದಗಿಸುವುದು ಸಂಚಾರ ಪೊಲಿಸ್‌ನ ಗಣಕೀಕೃತ ವ್ಯವಸ್ಥೆಯನ್ನು ಉತ್ತಮಪಡಿಸುವುದು ಹಾಗೂ ಸಂಚಾರ ಪೊಲೀಸ್ ವ್ಯವಸ್ಥೆಗೆ ಆಧುನಿಕ ಉಪಕರಣಗಳನ್ನು ಒದಗಿಸುವುದು

12 ಕೇಂದ್ರ ಪ್ರದೇಶದ ಅಭಿವೃದ್ಧಿ ಯೋಜನೆ, ಸ್ಥಳೀಯ ಪ್ರದೇಶಗಳ ಅಭಿವೃದ್ಧಿ ಯೋಜನೆ ಹಾಗೂ ಅಪಘಾತ ತಗ್ಗಿಸುವ ಯೋಜನೆ ಮುಂತಾದ ಸಂಚಾರ ನಿರ್ವಹಣಾ ಯೋಜನೆಗಳನ್ನು ತಯಾರಿಸಿ ಕಾರ್ಯಗತಗೊಳಿಸುವುದು

ಆ) ಬೆಂಗಳೂರು ನಗರದಲ್ಲಿನ ಸಂಚಾರ ಸುಧಾರಣೆಗಾಗಿ ರೂಪಿಸಿರುವ ಬಿ–ಟ್ರ್ಯಾಕ್ 2010 ಯೋಜನೆಗೆ ಒಟ್ಟು ರೂ 350 00 ಕೋಟಿಗಳನ್ನು ನಿಗಧೀಪಡಿಸಿದ್ದು, 2006–07ನೇ ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ ಹೆಚ್‌ಡಿ 73 ಪಿಒಪಿ 2006, ದಿನಾಂಕ 6 1 2007ರ ಆದೇಶದಲ್ಲಿ ಬಿ–ಟ್ರ್ಯಾಕ್ ಯೋಜನೆಯ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ರೂ 44 00 ಕೊಟಿಗಳಿಗೆ ಮಂಜೂರಾತಿ ನೀಡಿರುತ್ತದೆ ಸದರಿ ಮೊತ್ತವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (KRDCL) ಬೆಂಗಳೂರುರವರಿಗೆ ಮುಂಗಡವಾಗಿ ರೇವಣಿಯಾಗಿ ಪಾವತಿಸಬೇಕಾಗಿರುತ್ತದೆ ಈ ಸಂಬಂಧ ಪ್ರಗತಿಕಾರ್ಯ ಮುಂದುವರೆದಿರುತ್ತದೆ ರವರು ರೂ 29 00 ಕೋಟಿಗಳಿಗೆ ಕಾರ್ಯಯೋಜನೆಯನ್ನು ರೂಪಿಸಿದ್ದು, ಈ ಸಂಬಂಧವಾಗಿ ಟೆಂಡರ್ ಕಾರ್ಯ ಪ್ರಗತಿಯಲ್ಲಿರುತ್ತದೆ

ಇ) ಕಾರ್ಯರೂಪಕ್ಕೆ ತಂದಿರುವ ಯೋಜನೆಗಳು

ನಗರದಲ್ಲಿ ಅಲ್ಲಲ್ಲಿ ಆಗುತ್ತಿರುವ ವಾಹನಗಳ ಸಂಚಾರದ ವ್ಯತ್ಯಯವನ್ನು ತಪ್ಪಿಸಿ ಹಾಗೂ ಸಂಚಾರವನ್ನು ಸುಗಮಗೊಳಿಸಲು ಏಕಮುಖ ಸಂಚಾರ ವ್ಯವಸ್ಥೆ, ಸಿಗ್ನಲ್ ಲೈಟ್ಸ್‌ಗಳ ಅಳವಡಿಕೆ, ರಸ್ತೆ ಅಗಲೀಕರಣ, ಹೊರ ವರ್ತುಲ ರಸ್ತೆ ನಿರ್ಮಾಣ, ಮೇಲ್ಸೇತುವೆ ನಿರ್ಮಾಣ, ಆಟೋಮೇಷನ್ ಎನ್‌ಫೋರ್ಸ್‌ಮೆಂಟ್ ಇತ್ಯಾದಿ ಕ್ರಮಗಳನ್ನು ಕೆಳಕಂಡಂತೆ ಕೈಗೊಳ್ಳಲಾಗಿದೆ

1 2005ನೇ ಸಾಲಿನಿಂದ ಈಚೆಗೆ ಪ್ರಮುಖ ರಸ್ತೆಗಳನ್ನು ಒಳಗೊಂಡಂತೆ ನಗರದ 96 ರಸ್ತೆಗಳನ್ನು “ಏಕಮುಖ ಸಂಚಾರ”

ಗೊಳಿಸಲಾಗಿದೆ ಇದರಿಂದಾಗಿ ಅತ್ಯಂತ ಸಂಚಾರ ದಟ್ಟಣೆ ಸಮಸ್ಯೆಗಳಿದ್ದಂತಹ ಹಲವಾರು ರಸ್ತೆಗಳಲ್ಲಿ ಸುಗಮ ಸಂಚಾರದ ವ್ಯವಸ್ಥೆಯಾಗಿದೆ

2 52 ಪ್ರಮುಖ ಜಂಕ್ಷನ್ ಗಳಲ್ಲಿ ಸೋಲಾರ್ ಶಕ್ತಿ ಚಾಲಿತ ಸಿಗ್ನಲ್ ದೀಪಗಳನ್ನು ಅಳವಡಿಸಲಾಗಿದ್ದು, ಪುರಭವನ ಪ್ರದೇಶದಲ್ಲಿನ '8' ಜಂಕ್ಷನ್ ಗಳಲ್ಲಿ ಏಕೀಕೃತ ಸ್ಪಂದನದ (Synchronization) ವ್ಯವಸ್ಥೆ ಮಾಡಲಾಗಿದೆ

3 ಮಧ್ಯಪಾನ ಮಾಡಿ ವಾಹನ ಡ್ರೈವ್ ಮಾಡುವವರ ವಿರುದ್ಧ "ಆಲ್ಕೊ ಮೀಟರ್ಸ್" ಬಳಕೆಯಿಂದ ತಪಾಸಣೆ ಮಾಡುವ ಕ್ರಮವನ್ನು ಜಾರಿಗೊಳಿಸಲಾಗಿದೆ

4 ಸ್ಪೀಡ್ ವಿಷನ್ ಕ್ಯಾಮೆರಾಗಳ ನೇರವಿನಿಂದ ಲೇಸರ್ ಮೂಲಕ ಮಿತಿಮೀರಿದ, ಅತಿವೇಗದಿಮದ ವಾಹನ ಟ್ರೈವ್ ಮಾಡುವವರ ವಿರುದ್ಧ ಕ್ರಮಕೈಗೊಳ್ಳಲಾಗಿದೆ

5 ಕಂಪ್ಯೂಟರ್ ಚಲನ್‌ಗಳ ಮೂಲಕ "ಆಟೋಮೇಟೆಡ್ ಎನ್ ಫೋರ್ಸ್‌ಮೆಂಟ್" (ಗಣಕೀಕೃತ ಸ್ವಯಂಚಾಲಿತ ಜಾರಿ ಕ್ರಮ) ಕ್ರಮವನ್ನು ಜಾರಿಗೊಳಿಸಲಾಗಿದೆ

6 ರಸ್ತೆಗಳಲ್ಲಿ ಪರಿಣಾಮಕಾರಿ "ಜಾರಿಕ್ರಮ" ಕೈಗೊಳ್ಳುವ ಸಲುವಾಗಿ "ಸಿಂಪ್ಯೂಟರ್ಸ್" ಗಳನ್ನು ಪರಿಚಯಿಸಲಾಗಿದೆ

7 ಅಪಘಾತ ತನಿಖೆಯಲ್ಲಿನ ಗುಣಮಟ್ಟ ಅಭಿವೃದ್ಧಿ ಪಡಿಸುವ ಸಲುವಾಗಿ ಸಂಚಾರ ವಲಯ ಮತ್ತು ಉಪ ವಲಯಗಳನ್ನು ಸಂಚಾರ ಪೊಲೀಸ್ ಠಾಣೆಗಳಾಗಿ ಪರಿವರ್ತಿಸಲಾಗಿದೆ

8 ಸಂಚಾರ ಸಮಸ್ಯೆಗಳಿಗೆ ಅತಿ ಶೀಘ್ರವಾಗಿ ಕ್ಷಣ ಮಾತ್ರದಲ್ಲಿ ಸ್ಪಂದಿಸುವ ಸಂಚಾರಿ "ಕ್ರೋಬ್ರಾ" ಗಳನ್ನು (ಸುಸಜ್ಜಿತ ಮೋಟಾರ್ ಸೈಕಲ್‌ನಲಿ ಸತತ ಗಸ್ತು ತಿರುಗಿ ತಕ್ಷಣ ಸ್ಪಂದಿಸುವ ನುರಿತ ಮೋಟಾರ್ ಸೈಕಲ್ ಸವಾರರು) ಪರಿಚಯಿಸಲಾಗಿದ್ದು, ಈಗ "53" ಕೋಬ್ರಾಗಳು ನಗರದಲ್ಲಿ ಸಂಚಾರಿ ಕಾರ್ಯನಿರತವಾಗಿವೆ

9 ಆಟೋಗಳಲ್ಲಿ ಚಾಲಕರು ಡ್ರೈವಿಂಗ್ ಲೈಸೆನ್ಸ್ ವಿವರಗಳನ್ನು ಚಾಲಕರ ಸೀಟಿನ ಹಿಂಬದಿಯಲ್ಲಿ ಪ್ರದರ್ಶಿಸುವ ನಮೂನೆಯನ್ನು "Display Cards" ಗಳನ್ನು ಆಟೋ ಚಾಲಕರುಗಳಿಗೆ ವಿತರಿಸಲಾಗುತ್ತಿದೆ

10 ಬೆಂಗಳೂರು ನಗರದಲ್ಲಿ ಪ್ರಮುಖ ಸ್ಥಳಗಳಾದ ಬಸ್ ನಿಲ್ದಾಣ, ವಿಮಾನ ನಿಲ್ದಾಣ ಹಾಗೂ ರಸ್ತೆಗಳಲ್ಲಿ ನಾಗರೀಕರು ಆಟೋಗಳಿಗಾಗಿ ಕಾಯುವುದು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಿದ್ದು, ಇವರನ್ನು ಆಟೋ ಚಾಲಕರುಗಳು ಕರೆದಲ್ಲಿಗೆ ಬರದೆ ಮತ್ತು ಪ್ರಯಾಣಿಕರಿಂದ ಹೆಚ್ಚಿನ

ಬಾಡಿಗೆಯನ್ನು ವಸೂಲಿ ಮಾಡುತ್ತಿರುವುದನ್ನು ಮನಗಂಡು ನಾಗರೀಕರಿಗೆ ಉಂಟಾಗುತ್ತಿರುವ ತೊಂದರೆಯನ್ನು ತಪ್ಪಿಸಲು 9 ಪ್ರಮುಖ ಸ್ಥಳಗಳಲ್ಲಿ ಮುಂಗಡ ಪಾವತಿ ಆಟೋರಿಕ್ಷಾ (Pre-Paid Auto Stand) ಸ್ಟಾಂಡ್‌ಗಳನ್ನು ತೆರೆಯಲಾಗಿದೆ

11 ಬೆಂಗಳೂರು ನಗರದ ಕೇಂದ್ರ ಪ್ರದೇಶದ ಹಲಸೂರು ಗೇಟ್, ಕಬ್ಬನ್ ಪಾರ್ಕ್, ಸದಾಶಿವನಗರ, ಶಿವಾಜಿನಗರ, ಹಲಸೂರು ಮತ್ತು ಉಪ್ಪಾರಪೇಟೆ ಏರಿಯಾಗಳ 14 ರಸ್ತೆಗಳಲ್ಲಿ ಸುಗಮ ಹಾಗೂ ಸುರಕ್ಷಿತ ಸಂಚಾರ ದೃಷ್ಟಿಯಿಂದ ಆಟೋರಿಕ್ಷಾಗಳಿಗಾಗಿಯೇ ಪ್ರತ್ಯೇಕ ಕಡ್ಡಾಯ ಪಥವನ್ನು ನಿಗದಿಪಡಿಸಿ ಆಟೋರಿಕ್ಷಾಗಳು ನಿರ್ದಿಷ್ಟ ಪಥದಲ್ಲಿ ಸಾಗುವಂತೆ ವ್ಯವಸ್ಥೆ ಮಾಡಲಾಗಿದೆ

12 ರಸ್ತೆಗಳಲ್ಲಿ ವಾಹನ ನಿಲುಗಡೆಯಾಗುತ್ತಿರುದ್ದುದರಿಂದ ರಸ್ತೆಯಪೂರ್ಣ ಭಾಗವನ್ನು ವಾಹನಗಳ ಸಂಚಾರಕ್ಕೆ ಬಳಸಿಕೊಳ್ಳಲು ಅನುಕೂಲವಾಗುವಂತೆ ನಗರದಲ್ಲಿನ 26 ಪ್ರಮುಖ ರಸ್ತೆಗಳಲ್ಲಿ ವಾಹನಗಳ ನಿಲುಗಡೆಯನ್ನು ನಿಷೇಧಿಸಿ ಸುಗಮ ಸಂಚಾರಕ್ಕೆ ಕಳೆದ 6 ತಿಂಗಳುಗಳಿಂದ ಅನುವು ಮಾಡಿಕೊಡಲಾಗಿದೆ

13 ಎಸ್ ಎ ಆರ್ ಎಸ್ ಯೋಜನೆ ಅಡಿಯಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಶಾಲಾ ಮಕ್ಕಳಿಗೆ ತರಬೇತಿ ನೀಡಲಾಗುತ್ತಿದೆ

14 ಇಪ್ಪತ್ತು (20) ಜಂಕ್ಷನ್‌ಗಳಲ್ಲಿದ್ದಂತ ಹಳೆಯದಾದ ಸಿಗ್ನಲ್ ಲೈಟ್ ಗಳನ್ನು ತೆಗೆದು ಹೊಸ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗಿದೆ.

ಬೆಂಗಳೂರು ನಗರದಲ್ಲಿ ಸುಗಮ ಸಂಚಾರವನ್ನು ಸುಧಾರಣೆಗೊಳಿಸಲು ಮಾನ್ಯ ಮುಖ್ಯಮಂತ್ರಿಗಳು 10 ಅಂಶಗಳ ಕಾರ್ಯಕ್ರಮಗಳನ್ನು ಸೂಚಿಸಿದ್ದು, ಅವುಗಳ ವಿವರಗಳು ಈ ಕೆಳಗಿನಂತಿದೆ

ಅ) ಜಂಕ್ಷನ್ ಗಳನ್ನು ಮಾರ್ಪಾಡು ಮಾಡುವುದು

ಆ) ರಸ್ತೆ ಮೀಡಿಯನ್ ಗಳನ್ನು ಅಳವಡಿಸುವುದು

ಇ) ಬಸ್-ಬೇಗಳನ್ನು ನಿರ್ಮಿಸುವುದು

ಈ) ಆಟೋ ನಿಲ್ದಾಣಗಳನ್ನು ಸ್ಥಳಾಂತರಿಸುವುದು

ಉ) ವಾಹನಗಳ ನಿಲುಗಡೆ ವ್ಯವಸ್ಥೆಯನ್ನು ಉನ್ನತೀಕರಿಸುವುದು ಹಾಗೂ ಮಿನಿ ಪಾರ್ಕಿಂಗ್ ಲಾಟ್ ಗಳನ್ನು ನಿರ್ಮಿಸುವುದು

ಋ) ಪಾದಚಾರಿಗಳಿಗೆ ಫುಟ್‌ಪಾತ್‌ಗಳನ್ನು ನಿರ್ಮಿಸುವುದು

ಎ) ರಸ್ತೆಗಳಲ್ಲಿ ಸಂಚಾರಿ ಸೂಚನಾ ಫಲಕಗಳನ್ನು ಅಳವಡಿಸುವುದು

BLANK

BLANK

ತೀರ್ಪನ್ನು ನೀಡಿತ್ತು ಈ ತೀರ್ಪಿನ ವಿರುದ್ಧ ಕನಾಟಕ ನಾಂದರ್ಭಿಕ ಹಾಗೂ ದಿನಗೂಲಿ ನೌಕರರ ಸಂಘ ಹುಬ್ಬಳ್ಳಿಯು ಸರ್ವೋನ್ನತ ನ್ಯಾಯಾಲಯದಲ್ಲಿ ಎಸ್ ಎಲ್‌ಪಿ ಸಂಖ್ಯೆ 3112–3314/2001 ನ್ನು ನಲ್ಲಿಸಿತ್ತು (ಸಿವಿಲ್ ಅಪೀಲು ನಂಕ್ಯೆ 1861–2063/2001)

ಮೇಲ್ಕಂಡ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಐದು ನ್ಯಾಯಾಧೀಶರ ಸಂವಿಧಾನ ಪೀರವು ದಿನಾಂಕ 10 4 2006 ರಂದು ತೀರ್ಪನ್ನು ನೀಡಿದ್ದು ಸಂಘದ ಸಿವಿಲ್ ಅಪೀಲನ್ನು ವಜಾಗೊಳಿಸಿದೆ ಸಂವಿಧಾನಾತ್ಮಕವಾಗಿ ನಿಗದಿ ಪಡಿಸಿದ ವಿಧಾನದ ಅನುಸಾರ ನೇಮಕಗೊಂಡ ವ್ಯಕ್ತಿಗಳ ಸೇವೆಯನ್ನು ನಕ್ರಮಗೊಳಿಸಲು ಅಥವಾ ಅವರ ಸೇವೆಯನ್ನು ಖಾಯಂಗೊಳಿನಲು ಕ್ರಮ ಕೈಗೊಳ್ಳಬಾರದೆಂದು ನ್ಯಾಯಾಲಯವು ಆದೇಶಿಸಿದೆ ಆದರೆ ನಿಗದಿತ ನೇಮಕಾತಿ ವಿಧಾನವನ್ನು ಬಹು ಪಾಲು ಪಾಲಿಸಿ ಮಾಡಿದ ನೇಮಕಾತಿಗಳನ್ನು ಒಂದು ಬಾರಿಯ ಕ್ರಮವಾಗಿ ಕೆಲವು ಷರತ್ತುಗಳನ್ನು ಪೂರೈಸಿದಲ್ಲಿ ನಕ್ರಮಗೊಳಿನಬಹುದೆಂದು ಈ ತೀರ್ಪಿನಲ್ಲಿ ಹೇಳಲಾಗಿದೆ ನ್ಯಾಯಾಲಯದ ಈ ತೀರ್ಪಿನ ಪರಿಣಾಮವನ್ನು ಪರಿಶೀಲಿಸಿ ಸಚಿವ ಸಂಪುಟಕ್ಕೆ ಶಿಫಾರ್ಸನ್ನು ನೀಡಲು ದಿನಾಂಕ 27 12 2006ರಂದು ಸಚಿವ ನಂಪುಟ ಉಪ ನಮಿತಿಯನ್ನು ರಚಿಸಲಾಗಿದೆ ಅದರ ಶಿಫಾರ್ಸನ್ನು ನಿರೀಕ್ಷಿಸಲಾಗಿದೆ

350 (654) ಶ್ರೀ ಗೋಪಾಲಕೃಷ್ಣ ಬೇಳೂರು ಬಿ ಕೆ (ಸಾಗರ) ಪೂಜಾರಿ ಕೆ (ಬೈಂದೂರು) ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ನಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆ ನಾಗರ ಪಟ್ಟಣದಲ್ಲಿ ಬ್ರಿಟೀಷರ ಕಾಲದಲ್ಲಿ ನಿರ್ಮಿಸಿದ ನಾಗರ ನಬ್ ಜೈಲು ತೀರಾ ಹಳೆಯದಾಗಿ ಬೀಳುವ ಹಂತದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಹೊಸ ಕಟ್ಟಡ ನಿರ್ಮಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಕಟ್ಟಡವು ಹಳೆಯದಾಗಿದ್ದರೂ ಬೀಳುವಂತಹ ಪರಿಸ್ಥಿತಿಯಲ್ಲಿ ಇದಕ್ಕೆ ದುರಸ್ತಿ ಕಾರ್ಯ ಅಗತ್ಯವಿದೆ, ಈ ದುರಸ್ತಿ ಕೆಲಸವನ್ನು ಕೈಗೆತ್ತಿಕೊಳ್ಳು ಲೋಕೋಪಯೋಗಿ ಇಲಾಖೆಯನ್ನು ಕೋರಿದೆ

ಆ) –ಅದೇ–

351 (655) ಶ್ರೀ ಗೋಪಾಲಕೃಷ್ಣ ಬೇಳೂರು ಬಿ ಕೆ (ಸಾಗರ) ಪೂಜಾರಿ ಕೆ (ಬೈಂದೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆ ಸಾಗರದ ಮೆಸ್ಕಾಂ ಉಪ ವಿಭಾಗದಲ್ಲಿ 1800 ವಿದ್ಯುತ್ ಕಂಬಗಳು ಹಾಗೂ 70 ಪರಿವರ್ತಕ (ಡಿ ಟಿ ಸಿ ಗಳು)ಗಳ ಕೊರತೆಯಿಂದಾಗಿ ಸಾರ್ವಜನಿಕರಿಗೆ ವಿದ್ಯುತ್ ಸಂಪರ್ಕದಲ್ಲಿ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಕಂಬಗಳನ್ನು ಹಾಗೂ ಪರಿವರ್ತಕಗಳನ್ನು ಕೂಡಲೇ ಸರಬರಾಜು ಮಾಡಲು ಸರ್ಕಾರ ಕೈಗೊಂಡ ಕ್ರಮವೇನು,

ಇ) ನಿರ್ಧಿಷ್ಟ ಕಾಲಮಿತಿಯಲ್ಲಿ ಕಂಬಗಳು ಹಾಗೂ ಪರಿವರ್ತಕಗಳನ್ನು ಸರಬರಾಜು ಮಾಡಲಾಗುವುದೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) ·

ಅ) ಮತ್ತು ಆ) ಶಿವಮೊಗ್ಗ ಜಿಲ್ಲೆಯ ಸಾಗರದ ಮೆಸ್ಕಾಂ ವಿಭಾಗಕ್ಕೆ 4711 ಸಂಖ್ಯೆಗಳ ವಿವಿಧ ರೀತಿಯ/ಉದ್ದದ ಕಂಬಗಳ ಸರಬರಾಜಿಗಾಗಿ ಖರೀದಿ ಆದೇಶವನ್ನು ಈಗಾಗಲೇ ನೀಡಲಾಗಿದ್ದು ಅದರಲ್ಲಿ ಸಾಗರ ಉಪ ವಿಭಾಗಕ್ಕೆ ಒಟ್ಟು 1018 ಕಂಬಗಳನ್ನು ಹಂಚಿಕೆ ಮಾಡಲಾಗಿದ್ದು, ಕಂಬಗಳ ಸರಬರಾಜು ಪ್ರಕ್ರಿಯೆಯು ಪ್ರಗತಿಯಲ್ಲಿದೆ 2006–07ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳ ಅಡಿಯಲ್ಲಿ ಸಾಗರ ಉಪವಿಭಾಗದಲ್ಲಿ ಒಟ್ಟು 47 ಸಂಖ್ಯೆಗಳ ಹೊಸ ವಿದ್ಯುತ್ ಪರಿವರ್ತಕಗಳನ್ನು ಈಗಾಗಲೇ ಸ್ಥಾಪಿಸಲಾಗಿದೆ ಅದರಲ್ಲಿ ವ್ಯವಸ್ಥೆ ಸುಧಾರಣೆಯಲ್ಲಿಯೇ 36 ಸಂಖ್ಯೆಗಳ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲಾಗಿದೆ ಸಾಗರ ಉಪವಿಭಾಗಕ್ಕೆ ಸಂಬಂಧಿಸಿದಂತೆ ಒಟ್ಟು 70 ವಿದ್ಯುತ್ ಪರಿವರ್ತಕಗಳ ಬೇಡಿಕೆಗೆ ಪೂರಕವಾಗಿ 47 ವಿದ್ಯುತ್ ಪರಿವರ್ತಕಗಳನ್ನು ಈಗಾಗಲೇ ಒದಗಿಸಲಾಗಿದ್ದು, ಇನ್ನೂ 23 ವಿದ್ಯುತ್ ಪರಿವರ್ತಕಗಳನ್ನು ಆದ್ಯತೆಯ ಮೇರೆಗೆ ಪೂರ್ಣಗೊಳ್ಳುವ ಕಾಮಗಾರಿಗಳಿಗೆ ಒದಗಿಸಲಾಗುವುದು

ಇ) ನಿರ್ದಿಷ್ಟ ಕಾಲಮಿತಿಯಲ್ಲಿ ಕಂಬಗಳು ಮತ್ತು ಪರಿವರ್ತಕಗಳನು ಸರಬರಾಜು ಮಾಡಲು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಈಗಾಗಲೇ ಕ್ರಮಗಳನ್ನು ಕೈಗೊಂಡಿರುತ್ತದೆ

BLANK

BLANK

ಈ) ಆಯವ್ಯಯದಲ್ಲಿ ಎಷ್ಟು ಹಣವನ್ನು ಇದಕ್ಕಾಗಿ ನಿಗಧಿಪಡಿಸಲಾಗುವುದು,

ಉ) ರಾಜ್ಯ ಸರ್ಕಾರವು ಕಳೆದ ಸಾಲುಗಳಲ್ಲಿ ಬಡ್ಡಿ ಮನ್ನಾ ಮಾಡಿರುವುದು ನಿಜವಲ್ಲವೇ,

ಊ) ಹಾಗಿದ್ದಲ್ಲಿ ಇದಕ್ಕಾಗಿ ಸರ್ಕಾರವು ಸಹಕಾರ ಸಂಸ್ಥೆಗಳಿಗೆ ಎಷ್ಟು ಹಣವನ್ನು ತುಂಬಿಕೊಟ್ಟಿದೆ,

ಋ) ಇನ್ನೂ ಎಷ್ಟು ಹಣವನ್ನು ಕೊಡಬೇಕಾಗಿದೆ,

ೠ) ಈ ಹಣವನ್ನು ಯಾವ ರೀತಿ ಹೊಂದಾಣಿಕೆ ಮಾಡಿ ಕೊಡಲಾಗುವುದು,

ಎ) ಸರ್ಕಾರದ ಪರವಾಗಿ ಮುಖ್ಯಮಂತ್ರಿ ಹಾಗು ಉಪಮುಖ್ಯಮಂತ್ರಿಗಳು ಈ ಬಗ್ಗೆ ಸತತವಾಗಿ ಹೇಳಿಕೆಗಳನ್ನು ನೀಡುತ್ತಿರುವುದರಿಂದ ಸಾಲ ಪಡೆದಿರುವ ರೈತರು ಸಾಲ ಮರುಪಾವತಿ ಮಾಡುವಲ್ಲಿ ವಿಳಂಬ ಮಾಡುತ್ತಿರುವ ಪ್ರಯುಕ್ತ ಸಹಕಾರ ಸಂಘ-ಸಂಸ್ಥೆಗಳು ತೀರಾ ಸಂಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) .

ಅ) ಸಹಕಾರಿ ಸಂಸ್ಥೆಗಳು ರೈತರಿಗೆ ನೀಡಿರುವ ಕೃಷಿ ಸಾಲಗಳನ್ನು ಮನ್ನಾ ಮಾಡುವ ಪ್ರಸ್ತಾವವು ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ

ಆ) –ಅದೇ–

ಇ) –ಅದೇ–

ಈ) –ಅದೇ–

ಉ) ಹೌದು

ಊ) ಬಡ್ಡಿ ಮತ್ತು ದಂಡದ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಅಲ್ಪಾವಧಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ಬಾಬ್ತು ಸರ್ಕಾರವು ಸಹಕಾರ ಸಂಸ್ಥೆಗಳಿಗೆ ಒಟ್ಟು ರೂ 1000–00ಕೋಟಿ ಸಹಾಯಧನವನ್ನು ಬಿಡುಗಡೆ ಮಾಡಿದೆ

ಋ) ಇನ್ನು ಸುಮಾರು ರೂ 16863–00 ಲಕ್ಷಗಳನ್ನು ಕೊಡಬೇಕಾಗಿದೆ

ೠ) ಬಿಡುಡೆಗೆ ಬಾಕಿ ಇರುವ ಬಡ್ಡಿ ಮನ್ನಾ ಮೊಬಲಗನ್ನು ಆಯವ್ಯಯದ ಹಂಚಿಕೆ ಮೂಲಕ ಕೊಡಲಾಗುವುದು

ಎ) ಸಾಲ ಮರುಪಾವತಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ

354 (663) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರ್ದ್) ಮಾನ್ಯ ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ದ್ವಿಚಕ್ರ ವಾಹನ ಸವಾರರಿಗೆ ಎಂದಿನಿಂದ ಹೆಲ್ಮೆಟ್ ಕಡ್ಡಾಯಗೊಳಿಸಲಾಯಿತು ಇದು ರಾಜ್ಯದ ಯಾವ ಯಾವ ಜಿಲ್ಲೆಗೆ ಅನ್ವಯವಾಗುತ್ತದೆ ಹಾಗೂ ಯಾವ ಯಾವ ಜಿಲ್ಲೆಗಳಿಗೆ ಇದಕ್ಕೆ ವಿನಾಯಿತಿ ನೀಡಲಾಗಿದೆ, ವಿನಾಯಿತಿ ನೀಡುವಾಗ ಅನುಸರಿಸಿದ ಮಾನದಂಡಗಳೇನು,

ಆ) ಗುಲ್ಬರ್ಗಾದಲ್ಲಿ ಹೆಚ್ಚಿನ ಬಿಸಿಲಿನ ತಾಪಮಾನವಿದ್ದರೂ ಸಹ ಇಲ್ಲಿಗೆ ನೀಡದೆ, ಬಳ್ಳಾರಿಗೆ ವಿನಾಯಿತಿ ನೀಡಿ ತಾರತಮ್ಯ ಮಾಡಲು ಕಾರಣಗಳೇನು,

ಇ) ರಾಜ್ಯದಲ್ಲಿ ಹೆಲ್ಮೆಟ್ ಧಾರಣೆಯನ್ನು ಕಡ್ಡಯವಾಗಿರುವುದನ್ನು ರದ್ದುಪಡಿಸಿ ಹೆಲ್ಮೆಟ್ ಧರಿಸುವುದನ್ನು ದ್ವಿಚಕ್ರ ವಾಹನ ಸವಾರರ ಇಷ್ಟಕ್ಕೆ ಬಿಡುವ ಬಗ್ಗೆ ಸರ್ಕಾರ ಆದೇಶ ಹೊರಡಿಸುತ್ತದೆಯೇ, ಹಾಗಿಲ್ಲದಿದ್ದಲ್ಲಿ ಕಾರಣಗಳೇಣು?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ದ್ವಿಚಕ್ರ ವಾಹನ ಸವಾರರಿಗೆ 1 11 2006 ರಿಂದ ಹೆಲ್ಮೆಟ್ ಕಡ್ಡಾಯ ಗೊಳಿಸಲಾಯಿತು ದ್ವಿಚಕ್ರ ವಾಹನ ಸವಾರರು ರಸ್ತೆ ಅಪಘಾತಗಳಲ್ಲಿ ಮರಣ ಹಾಗೂ ಗಾಯಗೊಂಡಿರುವ ಅಂಕಿಅಂಶಗಳ ಆಧಾರದ ಮೇಲೆ ಬೆಂಗಳೂರು, ಮೈಸೂರು, ಹುಬ್ಬಳ್ಳಿ-ದಾರವಾಡ, ಬೆಳಗಾವಿ, ಗುಲ್ಬರ್ಗಾ ಹಾಗೂ ಮಂಗಳೂರು ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಹೆಲ್ಮೆಟ್ ಕಡ್ಡಾಯಗೊಳಿಸಲಾಗಿದೆ

ಆ) ದ್ವಿಚಕ್ರ ವಾಹನ ಸವಾರರು ರಸ್ತೆ ಅಪಘಾತಗಳಲ್ಲಿ ಮರಣ ಹಾಗೂ ಗಾಯ ಗೊಂಡಿರುವ ಅಂಕಿಅಂಶಗಳ ಆಧಾರದ ಮೇಲೆ ಗುಲ್ಬರ್ಗಾ ಮಹಾನಗರದ ವ್ಯಾಪ್ತಿಯಲ್ಲಿ ಹೆಲ್ಮೆಟ್ ಕಡ್ಡಾಯಗೊಳಿಸಲಾಗಿದೆ

ಇ) ಇಲ್ಲ

355 (664) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೊಲೀಸ್ ಔಟ್‌ಪೋಸ್ಟ್‌ಗಳನ್ನು ತೆರೆಯುವಾಗ ಅನುಸರಿಸುವ ನೀತಿ ನಿಯಮಗಳೇನು,

ಆ) ಎಷ್ಟು ಜನಸಂಖ್ಯೆಗೆ ಒಂದರಂತೆ ಈ ಹೊರಠಾಣೆಗಳನ್ನು ಸ್ಥಾಪಿಸಲಾಗುವುದು,

ಇ) ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ಹೊಕ್ರಾಣಾ ಗ್ರಾಮದಲ್ಲಿರುವ ಪೊಲೀಸ್ ಹೊರಠಾಣೆಯನ್ನು (ಔಟ್ ಪೋಸ್ಟ್) ಯಾವಾಗ ಪ್ರಾರಂಭಿಸಲಾಯಿತು,

ಈ) ಈ ಗ್ರಾಮವು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳ ಗಡಿಭಾಗದಲ್ಲಿ ಬರುತ್ತಿದ್ದು, ನಕ್ಸಲೀಯ ಪ್ರಭಾವಕ್ಕೆ ಒಳಾಗಿದ್ದು, ಆಗಾಗ ಈ ಗ್ರಾಮದಲ್ಲಿರುವ ಹೊರಠಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೆ ಏರಿಸುವ ಬಗ್ಗೆ ಪೊಲೀಸ್ ಮಹಾ ನಿರ್ದೇಶಕರಿಂದ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿರುವುದು ನಿಜವಲ್ಲವೇ,

ಉ) ಹಾಗಿದ್ದಲ್ಲಿ ಅತ್ಯಂತ ಹಿಂದುಳಿದ ಗಡಿ ಗ್ರಾಮವಾದ ಹೊಕ್ರಾಣಾದಲ್ಲಿ ಈಗಿರುವ ಪೊಲೀಸ್ ಔಟ್ ಪೋಸ್ಟ್‌ನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೆ ಏರಿಸಲು ಸರ್ಕಾರ ಕ್ರಮ ಕೈಗೊಳ್ಳುವುದಿಲ್ಲ,

ಊ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎಂ.ಪಿ ಪ್ರಕಾಶ್ (ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) .

ಅ) ಪೊಲೀಸ್ ಔಟ್ ಪೋಸ್ಟ್‌ಗಳನ್ನು ತೆರೆಯುವಾಗ ಅನುಸರಿಸುವ ಯಾವುದೇ ನೀತಿ ನಿಯಮಗಳು ಇರುವುದಿಲ್ಲ

ಆದರೆ ಮಾತೃಠಾಣೆಯ ವ್ಯಾಪ್ತಿಯು ವಿಶಾಲತೆ ಹೊಂದಿದ್ದರೆ ಅಲ್ಲಿಯ ಸೂಕ್ತ ಕಾನೂನು ಸುವ್ಯವಸ್ಥೆ ಕಾಪಾಡಿಕೊಂಡು ಬರಲು ಅಪರಾಧಿಗಳ ನಿಯಂತ್ರಣ ಮಾಡಲು ಹಾಗೂ ಗ್ರಾಮಸ್ಥರ ಕುಂದುಕೊರತೆಗಳನ್ನು ಶೀಘ್ರವಾಗಿ ಪರಿಹರಿಸುವ ನಿಮಿತ್ತ ಹೊರಠಾಣೆಯ ಸೃಜನೆ ಪ್ರಸ್ತಾಪಿಸಬಹುದಾಗಿರುತ್ತದೆ

ಆ) ಜನಸಂಖ್ಯೆಯ ಮಾನದಂಡನೆಯ ಬಗ್ಗೆ ನಿರ್ಧಾರತೆ ಇರುವುದಿಲ್ಲ

ಇ) ದಿನಾಂಕ 25 8 1970ರಲ್ಲಿ ಈ ಪೊಲೀಸ್ ಹೊರಠಾಣೆ ಪ್ರಾರಂಭಿಸಲಾಗಿದೆ

ಈ) ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

ಉ) ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

ಊ) ಉದ್ಭವಿಸುವುದಿಲ್ಲ

357 (676) ಶ್ರೀ ಹಾಲಪ್ಪ ಹೆಚ್ (ಹೊಸನಗರ) ಮಾನ್ಯ ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆ ಬಾದಾಮಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಉಪ ನಿರೀಕ್ಷಕರಾಗಲಿ ಅಥವಾ ಮುಖ್ಯ ಪೇದೆಗಳಾಗಲಿ ದೂರುಗಳನ್ನು ದಾಖಲಿಸದೇ ಕಿರುಕುಳ ನೀಡುವುದರ ಮೂಲಕ ದೂರು ನೀಡುವವರಿಂದ ಹಾಗೂ ಅಪರಾಧಿಗಳಿಬ್ಬರಿಂದಲೂ ಹಣ ಪಡೆದು ಅವ್ಯವಹಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಇಂತಹವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಯಾವುದೇ ನಿರ್ದಿಷ್ಟ ದೂರು ಈವರೆಗೂ ಬಂದಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

358 (838) ಶ್ರೀ ಹಾಲಪ್ಪ ಹೆಚ್ (ಹೊಸನಗರ) . ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಲಗೇರಿ-ಹಾನಕಲ್ ರಸ್ತೆಯು (ರಾ ಹೆ 26) ಹೊಸನಗರ ತಾಲ್ಲೂಕು ವ್ಯಾಪ್ತಿಯಲ್ಲಿ ಸೊಡೂರಿನಿಂದ ಕಾರಣಗಿರಿಯ ವರೆಗಿನ 43 ಕಿಮೀಗಳ ಪೈಕಿ 23 ಕಿಮೀ ನಷ್ಟು ದೂರದ ರಸ್ತೆ ಏಕಪಥ (ಕಿರಿದಾದ) ರಸ್ತೆಯಾಗಿರುವುದರಿಂದ ದಟ್ಟಣೆಯ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಈ ರಸ್ತೆಯನ್ನು ಅಗಲೀಕರಣ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು,

ಇ) ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗಿ ಇಂಧನ ಸಚಿವರು)

ಅ) ಬಂದಿದೆ

ಆ) ಹಲಗೇರಿ–ಹಾನಕಲ್ ರಸ್ತೆ (ರಾಜ್ಯ ಹೆದ್ದಾರಿ–26) ಒಟ್ಟು 111 50 ಕಿಮೀ ಉದ್ದ ಶಿವಮೊಗ್ಗ ವಿಭಾಗದಲ್ಲಿ ಹಾದು ಹೋಗುತ್ತಿದ್ದು, ಇದರಲ್ಲಿ ಹೊಸನಗರ ತಾಲ್ಲೂಕಿನ ಕಿಮೀ, 86 60 ರಿಂದ 173 3 ಕಿಮೀ ವರೆಗೆ ಒಟ್ಟು 87 30 ಕಿಮೀ ಹಾದುಹೋಗಿರುತ್ತದೆ ಇದರಲ್ಲಿ ಸದರಿ ರಸ್ತೆಯ ವಿವಿಧ ಚೈನೇಜುಗಳಲ್ಲಿ ಸುಮಾರು 22 25 ಕಿಮೀ ಗಳ ಉದ್ದದ ರಸ್ತೆಯು ಏಕಪಥ ರಸ್ತೆಯಾಗಿದ್ದು, ಮಧ್ಯಪಥ ರಸ್ತೆಯನ್ನಾಗಿ ಮಾರ್ಪಡಿಸುವುದು ತೀರಾ ಅವಶ್ಯವಿರುವುದು ಇಲಾಖಾ ಗಮನಕ್ಕೆ ಬಂದಿದೆ

2005–08 ರವರೆಗಿನ ಮೂರು ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣಾ ಯೋಜನೆಯಡಿ ಅಗಲೀಕರಣಕ್ಕೆ ಅವಕಾಶವಿಲ್ಲದಿರುವುದರಿಂದ ಸದರಿ ರಸ್ತೆಯ ಅಗಲೀಕರಣ ಕಾಮಗಾರಿಯನ್ನು ನಿರ್ವಹಣೆ ಯೋಜನೆಯಡಿಯಲ್ಲಿ ಕೈಗೊಂಡಿರುವುದಿಲ್ಲ ಸದರಿ ರಸ್ತೆಯಲ್ಲಿ ಅಧಿಕ ಬಾರದ ವಾಹನ ಸಂಚಾರ ದಟ್ಟವಾಗಿದ್ದು, ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಗಳಿಗೆ ರೂ 300 ಲಕ್ಷಗಳು ಅವಶ್ಯವಿದ್ದು, ಈ ಬಗ್ಗೆ ಪ್ರಸ್ತಾವನೆಯು ತಯಾರಿಕೆಯ ಹಂತದಲ್ಲಿದೆ

ಇ) ಸದರಿ ರಸ್ತೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಕೈಗೊಳ್ಳಲಾಗುತ್ತಿರುವ 2005–08 ರವರೆಗಿನ ಮೂರು ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣಾ ಯೋಜನೆಯಡಿ, ಆಯ್ದ ಭಾಗಗಳಲ್ಲಿ ಮರುಡಾಂಬರೀಕರಣ ಮಾಡಲಾಗಿದ್ದು, ಉಳಿದಂತೆ ಗುಂಡಿ ಮುಚ್ಚಿ ರಸ್ತೆಯನ್ನು ಸಂಚಾರ ಯೋಗ್ಯವನ್ನಾಗಿ ಇಡಲಾಗಿದೆ

359 (839) ಶ್ರೀ ಹಾಲಪ್ಪ ಹೆಚ್ (ಹೊಸನಗರ ಕ್ಷೇತ್ರ) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ಚಿತ್ರ ಶೆಟ್ಟಿಹಳ್ಳಿಯ ಅಭಯಾರಣ್ಯದ ಗ್ರಾಮದಲ್ಲಿ ವಿದ್ಯುತ್ ಸಂಪರ್ಕವಿಲ್ಲದೆ ಅಲ್ಲಿನ ನಾಗರೀಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಗ್ರಾಮಕ್ಕೆ ವಿದ್ಯುದ್ದೀಕರಣಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು,

ಇ) ಗ್ರಾಮೀಣ ಭದ್ರತಾ ಯೋಜನೆಯಡಿಯಲ್ಲಿ ವಿದ್ಯುದ್ದೀಕರಣ ಗೊಳಿಸಲು ಈ ಗ್ರಾಮವನ್ನು ಆಯ್ಕೆ ಮಾಡಲಾಗುವುದೇ,

ಈ) ಈ ಕಾಮಗಾರಿಗೆ ತಗಲುವ ವೆಚ್ಚವೆಷ್ಟು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗಿ ಇಂಧನ ಸಚಿವರು),

ಅ) ಬಂದಿದೆ

ಆ) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯು ಶಿವಮೊಗ್ಗ ತಾಲ್ಲೂಕಿನ ಶೆಟ್ಟಿಹಳ್ಳಿ ಮತ್ತು ಚಿತ್ರ ಶೆಟ್ಟಿಹಳ್ಳಿ ಗ್ರಾಮಗಳನ್ನು ಗ್ರಾಮೀಣ ಭದ್ರತಾ ಯೋಜನೆಯಡಿಯಲ್ಲಿ ವಿದ್ಯುದ್ದೀಕರಣಗೊಳಿಸಲು ಪ್ರಸ್ತಾವನೆಯನ್ನು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವದೆಹಲಿ ಇವರಿಗೆ ಕಳುಹಿಸಿಕೊಡಲಾಗಿತ್ತು ಆದರೆ ಈ ಗ್ರಾಮಗಳಿಗೆ ಪ್ರತ್ಯೇಕ ಜನಗಣತಿ ಸಂಖ್ಯೆಗಳಿರುವುದರಿಂದ ಇವುಗಳನ್ನು ಗ್ರಾಮೀಣ ಭದ್ರತಾ ಯೋಜನೆಯಡಿಯಲ್ಲಿ ವಿದ್ಯುದೀಕರಣಗೊಳಿಸಲು ಬರುವುದಿಲ್ಲವೆಂದು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವದೆಹಲಿ ಇವರು ತಿಳಿಸಿರುವುದರಿಂದ ಕ್ರೆಡೆಲ್ ಸಂಸ್ಥೆಯು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ ನವದೆಹಲಿ ಇವರ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ಸೋಲಾರ್ ಪೋಟೋವೋಲ್ಟಾಯಿಕ್ ಮೂಲಕ ವಿದ್ಯುದೀಕರಣಗೊಳಿಸುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುವುದು

ಇ) ಶಿವಮೊಗ್ಗ ತಾಲ್ಲೂಕಿನ ಶೆಟ್ಟಿಹಳ್ಳಿ ಮತ್ತು ಚಿತ್ರ ಶೆಟ್ಟಿಹಳ್ಳಿ ಗ್ರಾಮಗಳಿಗೆ ಪ್ರತ್ಯೇಕ ಜನಗಣತಿ ಸಂಖ್ಯೆಗಳಿರುವುದರಿಂದ ಇವುಗಳನ್ನು ಗ್ರಾಮೀಣ ಭದ್ರತಾ ಯೋಜನೆಯಡಿಯಲ್ಲಿ ವಿದ್ಯುದೀಕರಣಗೊಳಿಸಲು ಬರುವುದಿಲ್ಲವೆಂದು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವದೆಹಲಿ ಇವರು ತಿಳಿಸಿರುತ್ತಾರೆ ಆದುದರಿಂದ ಈ ಗ್ರಾಮಗಳನ್ನು ಗ್ರಾಮೀಣ ಭದ್ರತಾ ಯೋಜನೆಯಡಿಯಲ್ಲಿ ವಿದ್ಯುದೀಕರಣ ಗೊಳಿಸಲು ಬರುವುದಿಲ್ಲ

ಈ) ಈ ಗ್ರಾಮಗಳನ್ನು ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿಯಲ್ಲಿ ಸೋಲಾರ್ ಪೋಟೋವೋಲ್ಟಾಯಿಕ್ ಮೂಲಕ ವಿದ್ಯುದೀಕರಣಗೊಳಿಸಲು ಅಂದಾಜು ವೆಚ್ಚ ರೂ 12 65 ಲಕ್ಷಗಳಾಗುತ್ತದೆ

360 (332) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ ಹಾಲಪ್ಪ ಹೆಚ್ (ಹೊಸನಗರ ಕ್ಷೇತ್ರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ನೋಂದಾಯಿಸಿದ ಸ್ತ್ರೀಶಕ್ತಿ ಮತ್ತು ಮಹಿಳಾ ಸ್ವಸಹಾಯ ಗುಂಪುಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು),

ಇ) ಈ ಸದನದ ಇತಿಹಾಶದಲ್ಲಿ ಯಾವ ವರ್ಷ ಅತೀ ಹೆಚ್ಚು ದಿನ ಹಾಗೂ ಅತಿ ಕಡಿಮೆ ದಿನ ಕಲಾಪ ನಡೆಸಲಾಗಿದೆ, ಆಗ ಸರ್ಕಾರದ ನೇತೃತ್ವ ವಹಿಸಿದವರಾರು (ಮುಖ್ಯಮಂತ್ರಿಗಳಾರು),

ಈ) ಈ ವರ್ಷವಾದರೂ ಕಾನೂನು ಪ್ರಕಾರ ಕನಿಷ್ಟ ದಿನಗಳಾದರೂ ಸದನ ಕಲಾಪ ನಡೆಸಲು ಕ್ರಮ ಕೈಗೊಳ್ಳಲಾಗುವುದೇ,

ಉ) ಪಾರ್ಲಿಮೆಂಟಿನ ಹಾಗೆ ನಿಗದಿತ ಅವಧಿಯಲ್ಲಿ ಸನದ ಕೂಡುವ ಹಾಗೆ ಕಾನೂನಿನಲ್ಲಿ ಸೂಕ್ತ ಮಾರ್ಪಾಡು ತರುವ ಉದ್ದೇಶ ಸರ್ಕಾರಕ್ಕಿದೆಯೇ?

ಮಾನ್ಯ ಶ್ರೀ ಎಂ ಪಿ ಪ್ರಕಾಶ್ ಗೃಹ, ಕಾನೂನು, ನ್ಯಾಯಾ, ಮಾನವಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು

ಅ) 2002ನೇ ಸಾಲಿನಿಂದ 2006ನೇ ಸಾಲಿನವರೆಗೆ ಒಟ್ಟು 231 ದಿನಗಳಲ್ಲಿ ಸದನದ ಕಲಾಪ ನಡೆದಿದೆ

ಆ) ಯಾವುದೇ ತೊಂದರೆಗಳಿಲ್ಲಿ

ಇ) 2006ನೇ ಸಾಲಿನವರೆಗೆ ಅತಿ ಹೆಚ್ಚು ಅವಧಿಗೆ ಅಧಿವೇಶನವು 1963ನೇ ಸಾಲಿನಲ್ಲಿ 98 ದಿನಗಳ ವರೆಗೆ ನಡೆದಿದೆ ಆಗ ಸರ್ಕಾರದ ನೇತೃತ್ವ ವಹಿಸಿರುವ ಮುಖ್ಯಮಂತ್ರಿಗಳು ಶ್ರೀ ಎಸ್ ನಿಜಲಿಂಗಪ್ಪ ನವರು 1971ನೇ ಸಾಲಿನಲ್ಲಿ 04 ದಿನಗಳು ಮಾತ್ರ ಅಧಿವೇಶನ ನಡೆದಿದೆ (ದಿನಾಂಕ 27 3 71 ರಿಂದ 20 3 72 ರವರೆಗೆ ರಾಷ್ಟ್ರಾಧ್ಯಕ್ಷರ ಆಳ್ವಿಕೆ ಇತ್ತು) 1971ನೇ ಸಾಲಿನಲ್ಲಿ ಶ್ರಿ ವಿರೇಂದ್ರ ಪಾಟೀಲ್ ರವರು ರಾಜ್ಯದ ಮುಖ್ಯಮಂತ್ರಿಗಲಾಗಿದ್ದರು

ಈ) ಕನಿಷ್ಠ 60 ದಿವಸಗಳು ಸದನ ನಡೆಸುವ ಉದ್ದೇಶ ಸರ್ಕಾರಕ್ಕೆ ಇದೆ

ಉ) ವಿಧಾನ ಮಂಡಲದ ಅಧಿವೇಶನವನನು ಆಗಿಂದಾಗ್ಗೆ ಕರೆಯುವ ಬಗ್ಗೆ ಭಾರತ ಸಂವಿಧಾನದ 174ನೇ ಅನುಚ್ಛೇದ ಅನ್ವಯ ಹಾಗೂ ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪ ಗಳ ನಿರ್ವಹಣೆ ಅಧಿನಿಯಮ, 2005ರಡಿಯಲ್ಲಿ ಕ್ರಮ ಜರುಗಿಸಲಾಗುವುದು ಪಾರ್ಲೀಮೆಂಟಿನ ಮಾದರಿಯನ್ವಯ ಕಾನೂನನ್ನು ಮಾರ್ಪಾಡು ಮಾಡುವ ಉದ್ದೇಶವಿರುವುದಿಲ್ಲ

406 (339) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) . ಮಾನ್ಯ ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಈ ವರ್ಷ 31ರವರೆಗೆ ಮಸೀದಿಗಳಿಗೆ ಬಿಗಡೆ ಮಾಡಿದ ಅನುದಾನದೆಷ್ಟು ? (ಕ್ಷೇತ್ರವಾರು ವಿವರ ನೀಡುವುದು),

ಆ) ಗದಗ ಜಿಲ್ಲೆ ಮುಂಡರಗಿ ವಿಧಾನಸಭಾ ಕ್ಷೇತ್ರದಲ್ಲಿ 2 ವರ್ಷಗಳಲ್ಲಿ ಮಸೀದಿ ಗಳಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ವಿವರ ನೀಡುವುದು)?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿರುವ ಮಸೀದಿಗಳಿಗೆ ಕಳೆದ ಮೂರು ವರ್ಷಗಳಿಂದ ಈ ವರ್ಷದ ಡಿಸೆಂಬರ್–31 ರವರೆಗೆ ಬಿಡುಗಡೆ ಮಾಡಿದ ಅನುದಾನದ ಕ್ಷೇತ್ರವಾರು ವಿವರ ಈ ಕೆಳಕಂಡಂತಿರುತ್ತದೆ

ವರ್ಷ	ಬಿಡುಗಡೆಯಾದ ಮೊತ್ತ
1) 2004–05	ಒಟ್ಟು ರೂ 182,65,000–00
2) 2005–06	ಒಟ್ಟು 1 52,35,000–00
3) 2006–07	ಒಟ್ಟು ರೂ 3,41,40,000–00 (31 12 2006ರವರೆಗೆ)

ತತಕ್ಷಣದ ಕ್ರಮವಾಗಿ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಸಲ್ಲಿಸಿದೆ ಕ್ಷೇತ್ರವಾರು ವಿವರಗಳನ್ನು ನಂತರ ಒದಗಿಸಲಾಗುವುದು

ಆ) ಗದಗ ಜಿಲ್ಲೆ ಮುಂಡರಗಿ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಲ್ಲಿ ಮಸೀದಿಗಳಿಗಾಗಿ ಈ ಕೆಳಕಂಡಂತೆ ಅನುದಾನವನ್ನು ನೀಡಲಾಗಿದೆ

ವರ್ಷ	ಬಿಡುಗಡೆ ಮಾಡಿದ ಅನುದಾನ	ಮಸೀದಿಯ ಹೆಸರು	
1) 2004–05	– ಇಲ್ಲ –		
2) 2005–06	1,00,000–00	1) ಮುಂಡರಗಿ ಮಸೀದಿ	20000–00
		2) ಅಂಜುಮಾನ್ ಇಸ್ಲಾ	40000–00
		3) ಮುಂಡರಗಿಮಸೀದಿ	20000–00
		4) ಜಾಮಿಯಾ ಮಸ್ಜೀಜ್	20000–00
		ಒಟ್ಟು	1,00,000–00
3) 2006–07	31 12 07ಕ್ಕೆ	– ಇಲ್ಲಾ –	

-ಅನುಬಂಧ-

ಕಳೆದ ಮೂರು ವರ್ಷಗಳಿಂದ ಈ ವರ್ಷದ ಡಿಸೆಂಬರ್ 31 ರವರೆಗೆ ಮಸೀದಿಗಳಿಗೆ ಬಿಡುಗಡೆ ಮಾಡಿದ ಅನುದಾನದ ವಿವರ (ಜಿಲ್ಲಾವಾರು)

ಕ್ರಸಂ	ಜಿಲ್ಲೆಯ ಹೆಸರು	2004-05 ಅನುದಾನ ರೂ	ಸಂಸ್ಥೆಯ ಸಂಖ್ಯೆ	2005-06 ಅನುದಾನ ರೂ	ಸಂಸ್ಥೆಯ ಸಂಖ್ಯೆ	2006-07 ಅನುದಾನ ರೂ	ಸಂಸ್ಥೆಯ ಸಂಖ್ಯೆ
1	ಹಾಸನ	2 40,000-00	12	2 00,000-00	10	3,00,000-00	03
2	ಕೊಡಗು	6 60,000-00	33	5,40,000-00	27	-	-
3	ಚಿಕ್ಕಮಗಳೂರು	9,40,000-00	47	2,50,000-00	12	9,40,000-00	30
4	ಉಡುಪಿ	2,60,000-00	08	2,00 000-00	10	-	-
5	ಚಾಮರಾಜನಗರ	3,10,000-00	17	4,30,000-00	17	8,90,000-00	09
6	ಮಂಡ್ಯ	4,70,000-00	19	1,40,000-00	07	1,00,000-00	01
7	ಮೈಸೂರು	4,80,000-00	28	2,90,000-00	14	7,50,000-00	11
8	ಮಂಗಳೂರು	8,35,000-00	38	5,80 000-00	29	13 00,000-00	06
9	ಬೆಂಗಳೂರು ನಗರ	3,70 000-00	16	5,10,000-00	23	20,00,000-00	11
10	ಬೆಂಗಳೂರು ಗ್ರಾಮಾಂತರ	6 60,000-00	33	5 60,000-00	23	38,20,000-00	33
11	ಚಿತ್ರದುರ್ಗ	6,00,000-00	30	4,40,000-00	22	2,00,00-00	01
12	ತುಮಕೂರು	7,80,000-00	49	5,40,000-00	28	31,50,000-00	28
13	ಕೋಲಾರ	10,20,000-00	50	5,60 000-00	28	23,25,000-00	31

14	ದಾವಣಗೆರೆ	8,60,000-00	48	3,60,000-00	18	3,00,000-00	03
15	ಶಿವಮೊಗ್ಗ	6,00,00-00	40	5 60,000-00	28	3,30,000-00	03
16	ಬಿದರ	19,70,000-00	89	26,05,000-00	65	5,00,000-00	03
17	ಗುಲಬರ್ಗಾ	10,90,000-00	53	10,70,000-00	40	-	-
18	ಬಳ್ಳಾರಿ	11,00,000-00	52	4,60,000-00	19	36,00,000-00	18
19	ರಾಯಚೂರು	8 60 000-00	42	6 60,000-00	33	-	-
20	ಕೊಪ್ಪಳ	6,60,000-00	32	4,80 000-00	25	23,70,000-00	24
21	ಹಾವೇರಿ	7,70,000-00	35	4,40,000-00	21	73,05,000-00	133
22	ಬೆಳಗಾವಿ	6,80,000-00	32	5,40,000-00	27	8,00,000-00	08
23	ಬಾಗಲಕೋಟೆ	2,80,000-00	13	2,20,000-00	11	1,00,000-00	01
24	ಬಿಜಾಪುರ	6,30,000-00	23	12,10,000-00	43	-	-
25	ಗದಗ	3 20,000-00	16	5,60,000-00	28	-	-
26	ಧಾರವಾಡ	4,80 000-00	23	4,80,000-00	19	3,50,000-00	07
27	ಉತ್ತರ ಕನ್ನಡಜಿಲ್ಲೆ	3,40 000-00	17	3,40,000-00	17	27,10,000-00	38
	ಒಟ್ಟು ಮೊತ್ತ	182,65,000-00	895	1 5235,000-00	644	3 41,40,000-00	406

830 ಶ್ರೀ ಪಾಟೀಲ್ ಡಿ ಆರ್ (ಗದಗ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರದಲ್ಲಿರುವ ಸ್ಥಳೀಯ ಸಂಸ್ಥೆಗಳ ಚುನಾಯಿತ ಆಡಳಿತ ಮಂಡಳಿಗಳ ಅಧಿಕಾರ ಮುಗಿದಿದ್ದು ಯಾವಾಗ,

ಆ) ಈ ಸಂಸ್ಥೆಗಳಿಗೆ ಕಾನೂನು ಪ್ರಕಾರ ಹೊಸ ಆಡಳಿತ ಮಂಡಳಿಯ ಚುನಾವಣೆ ನಡೆಸಬೇಕಾಗಿದ್ದು ಯಾವಾಗ, ಅವಧಿ ಮುಗಿಯುವ ಪೂರ್ವದಲ್ಲೇ ಸರಕಾರ ಈ ಬಗ್ಗೆ ಅವಶ್ಯ ಕ್ರಮ ಕೈಗೊಳ್ಳದಿರಲು ಕಾರಣವೇನು,

ಇ) ಈ ಸಂಸ್ಥೆಗಳಿಗೆ ಯಾವಾಗ ಚುನಾವಣೆ ನಡೆಸಲಾಗುವುದು (ವಿವರ ನೀಡುವುದು),

ಈ) ಸರ್ವೋಚ್ಚ ನ್ಯಾಯಾಲಯ ಈ ಚುನಾವಣೆಗಳ ಬಗ್ಗೆ ಕೊಟ್ಟಿರುವ ತೀರ್ಪುಗಳೇನು,

ಉ) ರಾಜ್ಯದಲ್ಲಿ ತೀರ್ಪನ್ನು ಅನುಷ್ಠಾನಗೊಳಿಸಲು ಸರಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ವಿವರಗಳನ್ನು ಅನುಬಂದ-1ರಲ್ಲಿ ನೀಡಲಾಗಿದೆ

ಆ) ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಕೌನ್ಸಿಲ್ ಅವಧಿಯು ಮುಗಿದ ತಕ್ಷಣ ಆಯಾ ನಗರಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸಬೇಕಾಗುತ್ತದೆ ಮೇಲೆ ನಮೂದಿಸಿರುವ ಅನುಬಂಧ-1 ರಲ್ಲಿನ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕಾಗಿರುತ್ತದೆ ಜೂನ್ 2006ರ ಅವಧಿಯಲ್ಲಿ ಒಟ್ಟು 39 ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಕೌನ್ಸಿಲ್ ಅವಧಿಯು ಮುಗಿದಿದ್ದು ಅಂತಹ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸಲು ಸರ್ಕಾರವು ಮಿಸಲಾತಿಯನ್ನು ನಿಗಧಿ ಪಡಿಸಿ ಚುನಾವಣೆ ನಡೆಸುವಂತೆ ಆಯುಕ್ತರು, ರಾಜ್ಯ ಚುನಾವಣಾ ಆಯೋಗ ಇವರನ್ನು ಕೋರಲಾಗಿತ್ತು

ಸದರಿ ಮೀಸಲಾತಿ ಅಧಿಸೂಚನೆಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 7107/06, 7871/06ರಲ್ಲಿ ಪ್ರಶ್ನಿಸಲಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 16 6 2006 ರ ಆದೇಶದಲ್ಲಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವಾರ್ಡುಗಳ ಕ್ಷೇತ್ರಗಳನ್ನು

2001ರ ಜನಗಣತಿಯನ್ವಯ ಪರಿಷ್ಕರಿಸಿ ತದನಂತರ, ಚುನಾವಣೆಯನ್ನು ನಡೆಸುವಂತೆ ಆದೇಶಿಸಿದ ಹಿನ್ನೆಲೆಯಲ್ಲಿ ಸರ್ಕಾರವು ಆದೇಶ ಸಂಖ್ಯೆ ನಅಇ 34 ಎಂಎಲ್ ಆರ್ 2006, ದಿನಾಂಕ 3 6 2006ರಲ್ಲಿನ ಮಾರ್ಗಸೂಚಿಗಳ ಪ್ರಕಾರ ಮೀಸಲಾತಿ ನಿಗದಿಪಡಿಸಿ ಹೊರಡಿಸಲಾಗಿದ್ದ ಎಲ್ಲಾ ಆದೇಶಗಳನ್ನು ರದ್ದುಗೊಳಿಸಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಾನುಸಾರ ಕ್ಷೇತ್ರಗಳ ಮರು ವಿಂಗಡಣೆ ಕುರಿತು ಮಾರ್ಗ ಸೂಚಿಗಳನ್ನು ದಿನಾಂಕ18 8 2006ರ ಆದೇಶದ ಮೂಲಕ ಹೊರಡಿಸಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ 2001ರ ಜನಗಣತಿಯನ್ವಯ ನಗರ ಸ್ಥಳೀಯ ಸಂಸ್ಥೆಗಳ ವಾರ್ಡುಗಳ ಕ್ಷೇತ್ರಗಳನ್ನು ಪುನರ್ ವಿಂಗಡಿಸಿ ಪ್ರಸ್ತಾವೆಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿತ್ತು ಹಾಗೂ ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 3,9,11 ಹಾಗೂ ಕರ್ನಾಟಕ ಮಹಾ ನಗರ ಪಾಲಿಕೆ ಕಾಯ್ದೆ 1976ರ ಕಲಂ 3 ಮತ್ತು 7ರನ್ವಯ ಒಟ್ಟು ಒಂದು ನಗರಸಬೆಯನ್ನು ಮಹಾನಗರ ಪಾಲಿಕೆಯನ್ನಾಗಿ, 9 ಪುರಸಭೆಗಳನ್ನು ನಗರ ಸಭೆಗಳನ್ನಾಗಿ 25 ಪಟ್ಟಣ ಪಂಚಾಯಿತಿಗಳನ್ನು ಪುರಸಭೆಗಳನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಸೂಕ್ತ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶಿಸಲಾಗಿತ್ತು ಅದಲ್ಲದೆ, ಕ್ಷೇತ್ರಗಳ ಮರುವಿಂಗಡಣೆ ಕುರಿತು ಅನುಬಂಧ–2ರಲ್ಲಿ ನಿಗಧಿ ಪಡಿಸಲಾದಂತೆ ತಪ್ಪದೇ ಕ್ರಮ ವಹಿಸಲು ನಿರ್ದೇಶಿಸಲಾಗಿತ್ತು, ಅದರಂತೆ ಪ್ರಸ್ತಾವನೆಗಳನ್ನು ಪಡೆದು ಒಟ್ಟು ಒಂದು ನಗರಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಮತ್ತು 9 ಪುರಸಭೆಗಳನ್ನು ನಗರಸಭೆಗಳನ್ನಾಗಿ ಹಾಗೂ 24 ಪಟ್ಟಣ ಪಂಚಾಯಿತಿಗಳನ್ನು ಪುರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಿ ಆದೇಶಿಸಲಾಗಿದೆ ಬನ್ನೂರು ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲನೆಯಲ್ಲಿದ್ದು ಮೈಸೂರು ಚಾಮುಂಡೇಶ್ವರಿ ಮತ ಕ್ಷೇತ್ರದ ಚುನಾವಣೆಯಿಂದಾಗಿ ಕಾಲವಿಳಂಬವಾಗಿದೆ

ಸರ್ಕಾರದ ದಿನಾಂಕ 2 11 2006ರ ಆದೇಶಾನುಸಾರ ಬೆಂಗಳೂರು ಮಹಾನಗರ ಪಾಲಿಕೆಯೊಂದಿಗೆ 7 ನಗರಸಭೆಗಳು, 1 ಪುರಸಭೆ ಮತ್ತು 111 ಗ್ರಾಮಗಳನ್ನು ವಿಲೀನಗೊಳಿಸುವ ಮೂಲಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ರಚಿಸುವ ಬಗ್ಗೆ ಸಾರ್ವಜನಿಕ ಆಕ್ಷೇಪಣೆಗಳನ್ನು /ಸಲಹೆಗಳನ್ನು

ಆಹ್ವಾನಿಸಲಾಗಿತ್ತು ಏತನ್ಮಧ್ಯೆ ದಿನಾಂಕ 23 11 2006 ರಂದು ಬೆಂಗಳೂರು ಮಹಾ ನಗರ ಪಾಲಿಕೆಯ ಅಧಿಕಾರಾವಧಿಯು ಮುಕ್ತಾಯ ಗೊಂಡ ಕಾರಣ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲಾಗಿತ್ತು ಮುಂದುವರಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಚನೆ ಕುರಿತು ಸ್ವೀಕೃತವಾದ ಆಕ್ಷಪಣೆಗಳನ್ನು/ಸಲಹೆಗಳನ್ನು ಸಮಗ್ರವಾಗಿ ಪರಿಶೀಲಿಸಿ ಅಂತಿಮ ಅಧಿಸೂಚನೆಯನ್ನು ದಿನಾಂಕ'16 1 2007 ರಂದು ಹೊರಡಿಸಲಾಗಿದೆ ಅದಲ್ಲದೆ, ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕ್ಷೇತ್ರಗಳ ಪುನರ್ ವಿಂಗಡನೆ ಪ್ರಕ್ರಿಯೆಯನ್ನು ನಿರ್ವಹಿಸಲು ಮೆ ಎನ್ ಸಾಫ್ಟ್ ಇಂಡಿಯಾ ಪ್ರೈ ಲಿ ಇವರಿಗೆ ದಿ 8 11 2006 ರಂದು ವಹಿಸಲಾಗಿದ್ದು, ಸದರಿ ಪ್ರಕ್ರಿಯೆಯು ಪ್ರಗತಿಯಲ್ಲಿದೆ ಕ್ಷೇತ್ರಗಳ ಪುನರ್ ವಿಂಗಡಣೆ ಕಾರ್ಯ ಮುಗಿದ ನಂತರ ಕಾನೂನುರೀತ್ಯಾ ಮೀಸಲಾತಿ ನಿಗಧಿ ಪಡಿಸಿ ಚುನಾವಣೆ ಜರುಗಿಸುವ ಬಗ್ಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು

ಮೇಲೆ ನಮೂದಿಸಿದ ಪ್ರಕ್ರಿಯೆಗಳು ದಿನಾಂಕ 19 1 2007 ರಂದು ಮುಗಿದಿದ್ದರಿಂದ (ಬನ್ನೂರು ಹೊರತುಪಡಿಸಿ) ಮೇಲ್ಕಂಡ ಅನಿವಾರ್ಯ ಕಾರಣಗಳಿಂದ ಸಕಾಲದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸಲು ಸಾಧ್ಯವಾಗಿರುವುದಿಲ್ಲ

ಇ) ಸರ್ಕಾರವು ದಿ 19 1 2007ರಂದು ಎಲ್ಲಾ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದು ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ದಿ 31 1 2007 ರ ಒಳಗೆ ಮೀಸಲಾತಿ ಯನ್ನು ನಿಗಧಿಪಡಿಸಿದ ಅಧಿಸೂಚನೆಯನ್ವಯ ಪ್ರತಿಗಳನ್ನು ಮುದ್ದಾಂ ಆಗಿ ರಾಜ್ಯ ಚುನಾವಣಾ ಆಯೋಗ ಇವರಿಗೆ ತಲುಪಿಸುವಂತೆ ನಿರ್ದೇಶನ ನೀಡಲಾಗಿತ್ತು ಕೆಲ ಜಿಲ್ಲಾಧಿಕಾರಿಗಳು ಮೀಸಲಾತಿ ನಿಗದಿಪಡಿಸುವ ಬಗ್ಗೆ ಸರ್ಕಾರದ ಸ್ಪಷ್ಟೀಕರಣ

ಕೋರಿರುತ್ತಾರೆ ಸ್ಪಷ್ಟೀಕರಣ ನೀಡುವ ಪೂರ್ವದಲ್ಲಿ ಕಾನೂನು ಅಭಿಪ್ರಾಯ ಪಡೆಯುವುದು ಸೂಕ್ತವೆಂದು ಭಾವಿಸಿ ಕಾನೂನು ಇಲಾಖೆಯ ಅಭಿಪ್ರಾಯ ಪಡೆಯುವ ಬಗ್ಗೆ ಕಡತವನ್ನು ಕಾನೂನು ಇಲಾಖೆಗೆ ಕಳುಹಿಸಲಾಗಿದೆ ಕಾನೂನು ಇಲಾಖೆಯ ಅಭಿಪ್ರಾಯ ಬಂದ ತಕ್ಷಣ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಮೀಸಲಾತಿಯನ್ನು ನಿಗಧಿಪಡಿಸಿ ಚುನಾವಣೆ ನಡೆಸುವ ಬಗ್ಗೆ ಆಯುಕ್ತರು, ರಾಜ್ಯ ಚುನಾವಣಾ ಆಯೋಗ ಇವರನ್ನು ಕೋರಲಾಗುವುದು

ಈ) ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 19 10 2006ರ ಆದೇಶದಲ್ಲಿ ಆಯುಕ್ತರು, ರಾಜ್ಯ ಚುನಾವಣಾ ಆಯೋಗ ಇವರು ನಗರ ಸ್ಥಳಿಯ ಸಂಸ್ಥೆಗಳಿಗೆ ಚುನಾಯಿತ ಕೌನ್ಸಿಲ್ ಅವಧಿ ಮುಗಿಯುವುದರೊಳಗಾಗಿ ಚುನಾವಣೆಯನ್ನು ನಡೆಸುವಂತೆ ನಿರ್ದೇಶನ ನೀಡಿದೆ

ಉ) ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ, 7107/06, 7871/06ಗೆ ಸಂಬಂಧಿಸಿದಂತೆ ದಿನಾಂಕ 16 6 2006 ರ ಉಚ್ಚ ನ್ಯಾಯಾಲಯದ ಆದೇಶದಲ್ಲಿ 2001ರ ಜನಗಣತಿಯನ್ವಯ ಆಧಾರದ ಮೇಲೆ ಎಲ್ಲಾ ನಗರ ಸ್ಥಳಿಯ ಸಂಸ್ಥೆಗಳ ವಾರ್ಡುಗಳನ್ನು ಪುನರ್ ವಿಂಗಡಿಸಿ ತದನಂತರ ಮೀಸಲಾತಿಯನ್ನು ನಿಗಧಿಪಡಿಸಲು ನಿರ್ದೇಶನ ನೀಡಿರುವ ಹಿನ್ನಲೆಯಲ್ಲಿ ಸಂಬಂಧಿಸಿದ ಎಲ್ಲಾ ಜಿಲ್ಲಾಧಿಕಾರಿಗಳು ಈಗಾಗಲೇ ವಾರ್ಡುಗಳಿಗೆ ಸಂಬಂಧಪಟ್ಟಂತೆ ಕ್ಷೇತ್ರಗಳಿಗೆ ಮರುವಿಂಗಡಣೆ ಪೂರ್ಣಗೊಳಿಸುತ್ತಾರೆ ಈ ಪ್ರಕ್ರಿಯೆ ಈಗ ತಾನೆ ಮುಗಿಸಿರುವುದರಿಂದ ಮೇಲೆ ನಮೂದಿಸಲಾದ ಎಲ್ಲಾ ನಗರ ಸ್ಥಳೀಯ ಸಂಸ್ಥೇಗಳಿಗೆ ಮೀಸಲಾತಿಯನ್ನು ನಿಗಧಿಪಡಿಸಿ ಚುನಾವಣೆಯನ್ನು ನಡೆಸಲು ಕ್ರಮ ವಹಿಸುವಂತೆ ರಾಜ್ಯ ಚುನಾವಣಾ ಆಯೋಗವನ್ನು ಕೋರಲಾಗುವುದು

ANNEXURE

Sl No	Name of the District	Corporation		City Municipal Council		Town Municipal Council		Town Panchayath	
1	Bangalore	BBMP	23 11 2006			Anekal	14 3 2006		
2	Bangalore Rural			Doddaballapur	11 12 2006	Devanahalli	13 5 2006	Nelamangala	10 1 2007
				Channapatna	4 1 2007	Vijayapura	14 6 2006		
				Ramanagar	4 1 2007	Kanakapura	13 6 2006		
						Magadi	12 12 006		
						Hoskote	2 1 2007		
3	Chitradurga			Chitradurga	1 1 2007	Challakere	3 1 2007	Molakalmur	4 1 2007
						Hiryur	6 1 2007	Holalkere	3 1 2007
								Hosadurga	2 1 2007
4	Davanagere			Davanagere	1 1 2007			Harapanahalli	25/12/2006
				Harihara	2 1 2007			Jagalur	4 1 2007
								Honnali	30 12 2006
								Channagri	2 1 2007

5	Shimoga			Shimoga	14 6 2006	Sagar	28 12 2006	Thirthahalli	26 12 2006
				Bhadravathi	23 12 2006	Shikaripura	25 12 2006	Hosanagar	30 12 2006
								Shiralakoppa	27 12 2006
								Soraba	2 12 2006
								Jogkargal	26 1 2008
6	Kolar			Chakkaballapur	2 1 2007	Bangarpet	2 1 2007	Srinivasapur	3 1 2007
				Chintamani	1 1 2007	Gowribdanur	1 1 2007	Bagepalli	6 1 2007
				Kolar	31 12 2006	Mulabagal	4 1 2007	Gudibande	3 1 2007
				Robertsonpet	28 12 2006	Malur	31 12 2006		
						Siddlaghatta	12 12 2006		
				Tumkur	30 12 2006	Madhugiri	27 12 2006	Pavagada	26 12 2006
						Kunigal	28 12 2006	Turuvekere	26 12 2006
						Tiptur	27 12 2006	Koralagene	27 12 2006
						Sira	28 12 006	Gubbi	28 12 2006
						Chiknayakanhalli	27 12 2006		
8	Mysore	Mysore	21 6 2006			K R Nagar	28 12 2006	Bannur	30 12 2006
						Hunsur	29 12 2006	H D Kote	30 12 2006

						Nanjangud	3 1 2007	T Narasipur	28 12 2006
								Piriyapatna	29 12 2006
								Saragur	18 1 2009
9	Chamarajanagar			Chamarajangar	8 1 2007	Kollegal	2 1 2007	Yaandur	1 2007
						Gundlupet	3 1 2007	Hanur	-
10	Chickmagalur			Chikamagalur	13 6 2006	Kadur	3 1 2007	Tarikare	14 6 2006
						Birur	1 1 2007	Mudigere	1 2007
								N R Pura	2 1 2007
								Koppa	2 1 2007
								Sringeri	2 1 2007
11	Dakshin Kannada	MagaloreCC	16 6 2007			Moodabidro	1 1 2007	Bantwal	30 12 2006
						Putur	2 1 2007	Ullal	8 1 2007
								Suliya	3 1 2007
								Belthangadi	2 ,1 2007
								Mulki	15 1 2008
12	Udupi			Udupi	8 1 2007	Kundapur	28 12 2006	Saligrama	27 8 2007
				Hassan	10 6 2006	Arasikere	12 6 2006	Belur	1 6 2006

						C R Patna	13 6 2006	Alur	12 12 2006
						Hoeenarsipur	14 6 2006	Arakalgud	28 12 006
						Sakaleshpur	28 12 2006		
14	Mandya			Mandya	3 1 2007	Malayalli	30 12 2006	Pandauapur	1 2007
						Maddur	3 1 2007	K R Pet	2 1 2007
						Sirangapatna	1 1 2007	Nagamangal	2 1 2007
15	Kodagu			Madikeri	1 1 2007			Kushalnagara	
								Virajpet	30 12 2006
								Somuarpet	2 1 2007
16	Belgaum	Belgaum	15 6 2006	Nippan	14 6 2006	Ramadurga	14 6 2006	Khanapur	14 6 2006
				Gokak	28 12 2006	Chikkodi	28 12 2006	Sadalaga	14 6 2006
						Sauadatti	28 12 2006	Hukkeri	2 1 2007
						Bailahongala	1 1 2007	Raibagh	2 1 2007
						Atnani	18 1 2007	Kudachi	1 2007
						Mudalagi	3 1 2007	Konnur	29 1 2007
						Sankeshvar	1 1 2007		
17	Bijapur			Bijapur	4 1 2007	Indi	28 12 2006	B Bagewadi	3 1 2007

						Sindhagi	31 12 2006		
						Muddlebihal	6 1 2007		
	/					Talikote	7 1 2007		
18	Dharwad	Hubli - Dharwad	18 6 2006			Annigeri	1 1 2007	Navalgund	30 12 2006
								Kalaghatagi	30 12 2006
								Kundgol	4 1 2007
								Alnavar	1 2007
19	Gadag			Gadag Betgeri	12 6 2006	Naragund	28 12 2006	Mulgund	30 12 2006
						Gajendragad	28 12 2006	Mundaragi	30 12 2006
						Lakshmeshwar	27 3 2007	Ron	30 12 2006
								Shirahatti	29 12 2006
								Naregal	28 12 2006
20	Haveri			Ranibennur	3 1 2007	Byadagi	2 1 2007	Shiggon	2 1 2007
				Haveri	4 1 2007	Hanagal	3 1 2007	Bankapur	1 2007
						Savanur	4 1 2007	Hirekeur	1 2007
21	Uttara Kannada			Karwar	7 1 2007	Kumta	6 1 2007	Honhvar	8 1 2007

				Dandel	7 1 2007	Bhatkal	9 1 2007	Anokla	7 1 2007
				Sirsi	8 1 2007			Haliyal	6 1 2007
								Siddapur	9 1 2007
								Yallapur	10 1 2007
								Mundagod	8 1 2007
22	Bellary	Bellary	Ready	Hospet	4 1 2007	Kampli	14 3 2006	Sirguppa	12 6 2006
								Tekkalkote	14 6 2006
								Kamalapur	30 12 2006
								Kottur	1 2007
								H Hadagali	4 1 2007
								Sandur	3 1 2007
								Kudligi	8 1 2007
23	Bidar			Bidar	10 1 2007	Basavakalyan	1 1 2007	Aurad	1 2007
						Humnabad	16 1 2007		
						Chitaguppa	2 1 2007		
						Bhalki	2 4 2007		
24	Gulbarga	Gulbarga	21 6 2006	Shahabad	8 1 2007	Aland	3 1 2007	Gurumitkal	4 1 2007

						Chittapur	2 1 2007	Afzalpur	7 1 2007
						Sedum	4 1 2007	Chhincholi	8 1 2007
						Shahapur	8 1 2007	Jewargi	1 2007
						Shorapur	7 1 2007		
						Yadgir	6 1 2007		
						Wadi	6 4 2008		
25	Raichur			Raichur	3 1 2007	Sindanur	14 6 2006	Lingasugur	9 1 2007
						Manvi	14 6 2006	Mudagal	8 1 2007
								Devadurga	2 1 2007
26	Koppa			Ganagavathi	10 6 2006			Kustagi	3 1 2007
				Koppal	12 6 2006			Yalburga	2 1 2007
				Bagalkote	13 6 2006	Jamakandi	13 6 2006	Hungund	14 6 2006
				R Banahatti	14 6 2006	Mudhol	13 6 2006	Badami	14 6 2006
						Mahalingpur	14 6 2006	Kerur	14 6 2006
						Ilkal	14 6 2006	Terdal	28 12 2006
						Guledagudda	13 6 2006	Bilagi	27 12 2006

407 (340) ಶ್ರೀ ಪಾಟೀಲ್ ಎಸ್ ಎಸ್ ಮಾನ್ಯ ಗೃಹ, ಕಾನೂನು, ನ್ಯಾಯ, ಮಾನವಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ಜಿಲ್ಲೆ, ಮುಂಡರಗಿ ತಾಳ್ಲೂಕು, ಡಂಬಳ ಪೊಲೀಸ್ ಔಟ್ ಪೋಸ್ಟ್ ಅನ್ನು ಪೊಲೀಸ್ ಠಾಣೆಯಾಗಿ ಮೇಲ್ದರ್ಜೆಗೇರಿಸಲಾಗುವುದೇ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).

ಅ) ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

408 (501) ಶ್ರೀ ಪ್ರಬಾಕರ ಬಂಗೇರ ಕೆ (ಬೆಳ್ತಂಗಡಿ) · ಮಾನ್ಯ ಶಿ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸಬೇಕಾಗಿರುವ ರಸ್ತೆಗಳನ್ನು ಸರ್ಕಾರ ಗುರುತಿಸಿದೆಯೇ, ಹೌದಾದಲ್ಲಿ ಅಂತಹ ರಸ್ತೆಗಳಾವುವು,

ಆ) ಅತ್ಯಂತ ಜರೂರಾಗಿ ಗುರುವಾಯನ ಕೆರೆ–ಉಪ್ಪಿನಂಗಡಿ ಬೆಳ್ತಂಗಡಿ–ಬಂಗಾಡಿ–ಕಿಲ್ಲೂರು–ಕಾಜೂರು–ಮಡಂತ್ಯಾರು–ಬಳ್ಳಮಂಜಕಲ್ಲೇರಿ, ವೇಣೂರು–ಅಂಡಿಂಜೆ–ನಾರಾಕಿ,ನಿಡ್ಲೆ–ಕಾಯರ್ ತಡ್ಕ–ಪುದುವೆಟ್ಟು–ಸೆರಿಯ ಹಾಗೂ ಧರ್ಮಸ್ಥಳ–ಪೆರಿಯಡ್ಕ–ತೋಟತ್ತಾಡಿ–ಕಕ್ಕಂಜಿ ರಸ್ತೆಗಳನ್ನು ಮರು ಡಾಂಬರೀಕರಣಗೊಳಿಸಿ ಸಂಚಾರಕ್ಕೆ ಯೋಗ್ಯವನ್ನಾಗಿರಿಸಲು ಸರ್ಕಾರ ತ್ವರಿತ ಕ್ರಮ ಕೈಗೊಳ್ಳುವುದೇ,

ಇ) ಕಳೆದ ಮೂರು ವರ್ಷಗಳಿಂದ ಸಿ ಆರ್ ಎಫ್ ನಬಾರ್ಡ್ ಮತ್ತಿತರ ಯೋಜನೆಗಳ ಮೂಲಕ ಮಂಜೂರಾಗಿರುವ ಅಪೂರ್ಣವಾಗಿರುವ ರಸ್ತೆಗಳನ್ನು ಪೂರ್ಣಗೊಳಿಸಲು ಸರ್ಕಾರದ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು ರಸ್ತೆಗಳ ವಿವರಗಳು ಅನಬಂಧ–1 ರಲ್ಲಿ ಸಲ್ಲಿಸಿದೆ

ಆ) 1 ಗುರುವಾಯನಕೆರೆ ಉಪ್ಪಿನಂಗಡಿ ರಸ್ತೆ (ರಾಜ್ಯ ಹೆದ್ದಾರಿ–118) ಈ ರಸ್ತೆಯ ಒಟ್ಟು ಉದ್ದ 20 40 ಕಿಮೀ ರಸ್ತೆಯ ಅಂದಾಜು ಮೊತ್ತವಾದ ರೂ 1475 00 ಲಕ್ಷ ಅಭಿವೃದ್ಧಿ ಕಾಮಗಾರಿಯನ್ನು ಕೆ ಆರ್ ಡಿ ಸಿ ಎಲ್

ವತಿಯಿಂದ ನಿರ್ವಹಿಸಲಾಗುವುದು ಹಾಗೂ ಸದರಿ ರಸ್ತೆಯ ದುರಸ್ತಿ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿದೆ

2 ಬೆಳ್ತಂಗಡಿ ಬಂಗಾಡಿ ಕಿಲ್ಲೂರು ಕಾಜೂರು ಮಂಡಂತ್ಯಾರು ಬಳ್ಳಮಂಜಕಲ್ಲೇರಿ ರಸ್ತೆ–ಕಿಮೀ 0 00 ರಿಂದ 17 60 ಕಿಮೀ ವರೆಗೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಯನ್ನು ರೂ 70 00 ಲಕ್ಷದಲ್ಲಿ ಪ್ರಾರಂಭಿಸಲಾಗಿದೆ

3 ವೇಣೂರು ಅಂಡಿಂಜಿ ನಾರಾವಿ ರಸ್ತೆ ಈ ರಸ್ತೆಯ ಒಟ್ಟು ಉದ್ದ 15 80 ಕಿಮೀ ಇರುತ್ತದೆ ಈ ರಸ್ತೆಯ ಕಿಮೀ 9 00 ರಿಂದ 14 80 ಕಿಮೀ ವರೆಗೆ ನವೀಕರಿಸಲು ರೂ 25 00 ಲಕ್ಷ ಮೊತ್ತದ ಕಾಮಗಾರಿಯನ್ನು ಗುತ್ತಿಗೆದಾರರಿಗೆ ಈಗಾಗಲೇ ವಹಿಸಲಾಗಿದೆ

4 ನಿಡ್ಲೆ ಕಾಯರ್ ತಡ್ಕ ಸೆರಿಯ ರಸ್ತೆ ಈ ರಸ್ತೆಯು ಪುದುವೆಟ್ಟು–ಕಾಯರ್ ತಡ್ಕ ನಿಡ್ಲೆ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಒಟ್ಟು ಉದ್ದ 8 00 ಕಿಮೀ ಅಭಿವೃದ್ಧಿಗೆ ರೂ 85 00 ಲಕ್ಷ ಅಂದಾಜು ತಯಾರಿಸಲಾಗಿದೆ

5 ಧರ್ಮಸ್ಥಳ ಪೆರಿಯಡ್ಕ ತೋಟತ್ತಾಡಿ ಕಕ್ಕಿಂಜಿ ರಸ್ತೆ–ಈ ರಸ್ತೆಯು ಧರ್ಮಸ್ಥಳ ತೋಟತ್ತಾಡಿ ಚಿಬಿದ್ರೆ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಒಟ್ಟು ಉದ್ದ 10 80 ಕಿಮೀ ಅಭಿವೃದ್ಧಿಗೆ ರೂ 90 00 ಲಕ್ಷ ಅಂದಾಜು ತಯಾರಿಸಲಾಗಿದೆ

ಮೇಲ್ಕಂಡ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಿ ರಸ್ತೆಯನ್ನು ಸುಸ್ಥಿತಿಯಲ್ಲಿಡಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಮತ್ತು ಅನುದಾನದ ಲಭ್ಯತೆಯ ಅನುಗುಣವಾಗಿ ಸದರಿ ರಸ್ತೆಗಳನ್ನು ಡಾಂಬರೀಕರಣ ಮಾಡಲಾಗುವುದು

ಇ) ಬೆಳ್ತಂಗಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಸಿ ಆರ್ ಎಫ್ ನಬಾರ್ಡ್ ಮತ್ತಿತರ ಯೋಜನೆಗಳಡಿಯಲ್ಲಿ ಮಂಜೂರಾಗಿದ್ದು ಅಪೂರ್ಣವಾಗಿರುವ ರಸ್ತೆಗಳ ಕೆಲಸವನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು

ಅನುಬಂಧ–1 ಪ್ರಶ್ನೆ ಸಂಖ್ಯೆ 501

ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ 104 85 ಕಿಮೀ ಉದ್ದ ಜಿಲ್ಲಾ ಮುಖ್ಯ ರಸ್ತೆ ಮತ್ತು 140 83 ಉದ್ದ ರಾಜ್ಯ ಹೆದ್ದಾರಿ ಒಳಪಟ್ಟಿರುತ್ತದೆ ರಸ್ತೆಗಳ ವಿವರಗಳು ಈ ಕೆಳಕಂಡಂತಿದೆ

1	ಮುಂಡಾಜೆ ಕಡಿರುದ್ಯಾವರ ಡಿಡುಪೆ ಸಂಸೆ ರಸ್ತೆ ಕಿಮೀ 0 00 ರಿಂದ 16 50 ಕಿಮೀ	16 50 ಕಿಮೀ
2	ಮದುವೆಟ್ಟು ಕಾಯೆರ್ ತಡ್ಕ ನಿಡ್ಲೆ ರಸ್ತೆ ಕಿಮೀ 0 00 ರಿಂದ 8 00 ಕಿಮೀ	8 00 ಕಿಮೀ
3	ಕರಾಯ ಮಂಡಂತ್ಯಾರು ರಸ್ತೆ ಕಿಮೀ 0 00 ರಿಂದ 10 80 ಕಿಮೀ	10 80 ಕಿಮೀ
4	ಕಕ್ಕುಂಜೆ ನೆರಿಯಾ ಮದುವೆಟ್ಟು ರಸ್ತೆ ಕಿಮೀ 0 00 ರಿಂದ 15 40 ಕಿಮೀ	15 40 ಕಿಮೀ
5	ಧರ್ಮಸ್ಥಳ ತೋಟತ್ತಾಡಿ ಚಿಬಿದ್ರಿ ರಸ್ತೆ ಕಿಮೀ 0 00 10 80 ಕಿಮೀ	10 80 ಕಿಮೀ
6	ಔಗ್ಗ ಉಳಿ ಕರಾಯ ರಸ್ತೆ ಕಿಮೀ 14 20 ರಿಂದ 19 85 ಕಿಮೀ	5 65 ಕಿಮೀ
7	ಧರ್ಮಸ್ಥಳ ಸ್ನಾನಘಟ್ಟ ರಸ್ತೆ ಕಿಮೀ 0 00 ರಿಂದ 4 00 ಕಿಮೀ	4 00 ಕಿಮೀ
8	ವೇಣೂರು ಅಂಡಿಂಜೆ ನಾರಾವಿ ರಸ್ತೆ ಕಿಮೀ 0 00 ರಿಂದ 15 50 ಕಿಮೀ	15 50 ಕಿಮೀ
9	ಬೆಳ್ತಂಗಡಿ ಕಿಲ್ಲೂರು ಕಾಜೂರು ರಸ್ತೆ ಕಿಮೀ 0 00 ರಿಂದ 18 20 ಕಿಮೀ	18 20 ಕಿಮೀ
	ಒಟ್ಟು	104 85 ಕಿಮೀ
10	ಕಡೂರು ಕಾಯಿಂಗಾಡ್ ಸಂಸೆ ರಸ್ತೆ ಕಿಮೀ 99 27 ರಿಂದ 145 00 ಕಿಮೀ –ರಾಹೆ 64	45 73 ಕಿಮೀ
11	ಸುಬ್ರಹ್ಮಣ್ಯ ಉಡುಪಿ ರಸ್ತೆ ಕಿಮೀ 31 50 ರಿಂದ 82 40 ಕಿಮೀ –ರಾಹೆ 37	50 90 ಕಿಮೀ
12	ಬೆಳ್ತಂಗಡಿ ಮೂಲ್ಕಿ ರಸ್ತೆ ಕಿಮೀ 0 00 ರಿಂದ 23 80 ಕಿಮೀ– ರಾಃಎ 70	23 80 ಕಿಮೀ
13	ಗುರುವಾಯನಕೆರೆ ಉಪ್ಪಿನಂಗಡಿ ರಸ್ತೆ ಕಿಮೀ 0 00 ರಿಂದ 20 40 ಕಿಮೀ –ರಾಹೆ 118	20 ,40 ಕಿಮೀ
	ಒಟ್ಟು	140 83 ಕಿಮೀ

ಇವುಗಳಲ್ಲಿ ಪೈಕಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಈ ಕೆಳಕಂಡತ್ತ ಕ್ರಮಕೈಗೊಳ್ಳಲಾಗಿದೆ

1) ರಾಜ್ಯ ಹೆದ್ದಾರಿಗಳ ಅಭಿವೃದ್ಧಿ

ರಾಜ್ಯ ಹೆದ್ದಾರಿಗಳ ನಿರ್ವಾಹಣೆಯನ್ನು 2005–08ನೇ ಸಾಲಿಗೆ ಕೆಆರ್ ಡಿಸಿಎಲ್ ವತಿಯಿಂದ ಈ ಕೆಳಕಂಡಂತೆ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಗೆ ಬರುವ ರಸ್ತೆ ಚಾಚುಗಳು ಡಾಂಬರೀಕರಣ ಮಾಡಲಾಗಿದೆ

1	ಕಡೂರು ಕಾಯಿಂಗಾಡ್ ಸಂಸೆ ರಸ್ತೆ ಕಿಂಇ 99 27 ರಿಂದ 145 00 ಕಿಮೀ–ರಾಹೆ 64 ಇದರಲ್ಲಿ 125 00 ರಿಂದ 145 00 ವರೆಗೆ 9 00 ಕಿಮೀ ಆಯ್ದುಭಾಗಗಳಲ್ಲಿ ರೂ 62 38 ಲಕ್ಷ ಮೊತ್ತಕ್ಕೆ ಡಾಂಬರೀಕರಣ ಮಾಡಲಾಗಿದೆ	(ಒಟ್ಟು 45 73 ಕಿಮೀ
2	ಸುಬ್ರಹ್ಮಣ್ಯ ಉಡುಪಿ ರಸ್ತೆ ಕಿಮೀ 31 50 ರಿಂದ 82 40 ಕಿಮೀ –ರಾಹೆ 37 ಇದರಲ್ಲಿ 31 50 ರಿಂದ 82 40 ರವರೆಗೆ 8 50 ಕಿಮೀ ಆಯ್ದುಭಾಗಗಳಲ್ಲಿ ರೂ 82 00 ಲಕ್ಷ ಮೊತ್ತಕ್ಕೆ ಡಾಂಬರೀಕರಣ ಮಾಡಲಾಗಿದೆ	(ಒಟ್ಟು 50 90 ಕಿಮೀ)
3	ಬೆಳ್ತಂಗಡಿ ಮೂಲ್ಕಿ ರಸ್ತೆ ಕಿಮೀ 0 00 ರಿಂದ 23 80 ಕಿಮೀ–ರಾಹೆ 70 ಇದರಲ್ಲಿ 8 00 ಕಿಮೀ ಆಯ್ದುಭಾಗಗಳಲ್ಲಿ ರೂ 64 00 ಲಕ್ಷ ಮೊತ್ತಕ್ಕೆ ಡಾಂಬರೀಕರಣ ಮಾಡಲಾಗಿದೆ	(ಒಟ್ಟು 23 80 ಕಿಮೀ)
4	ಗುರುವಾಯನಕೆರೆ ಉಪ್ಪಿನಂಗಡಿ ರಸ್ತೆ (ರಾಜ್ಯ ಹೆದ್ದಾರಿ–118) ಈ ರಸ್ತೆಯ ಒಟ್ಟು ಉದ್ದ 20 40 ಕಿಮೀ ಇದ್ದು ಸಮಗ್ರ ಅಭಿವೃದ್ಧಿಗೆ ರೂ 1475 00 ಲಕ್ಷ ಮೊತ್ತದ ವಿವರವಾದ ಅಂದಾಜನ್ನು ಈಗಾಗಲೇ ಕೆಆರ್‌ಡಿಸಿಎಲ್‌ಗೆ ಸಲ್ಲಿಸಲಾಗಿರುತ್ತದೆ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ	

ಇದಲ್ಲದೆ ಸದರಿ ರಸ್ತೆಯ ದುರಸ್ತಿಗಾಗಿ ಕೆಆರ್ ಡಿಸಿಎಲ್ ವತಿಯಿಂದ ರೂ 25 60 ಲಕ್ಷಕೆ ಅನುಮೋದನೆ ಆಗಿದ್ದು ಟೆಂಡರ್ ಪ್ರಕ್ರಿಯೆಯಲ್ಲಿದೆ

2) ಜಿಲ್ಲಾ ಮುಖ್ಯ ರಸ್ತೆಗಳ ಅಬಿವೃದ್ಧಿ

1 ಬೆಳ್ತಂಗಡಿ ಬಂಗಾಡಿ ಕಿಲ್ಲೂರು ಕಾಜೂರು ಮಡಂತ್ಯಾರು ಬಳ್ಳಮಂಜಕಲ್ಲೇರಿ ರಸ್ತೆ· ಕಿಮೀ 0 00 ರಿಂದ 17 60 ಕಿಮೀ ವರೆಗೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಯನ್ನು ರೂ 70 00 ಲಕ್ಷದಲ್ಲಿ ಪ್ರಾರಂಭಿಸಲಾಗಿದೆ

2 ವೇಣೂರು ಅಂಡಿಂಜೆ ನಾರಾವಿ ರಸ್ತೆ ಈ ರಸ್ತೆಯ ಒಟ್ಟು ಉದ್ದ 15 80 ಕಿಮೀ ಇರುತ್ತದೆ ಈ ರಸ್ತೆಯ ಕಿಮೀ 9 00 ರಿಂದ ವರೆಗೆ ನವೀಕರಿಸಲು ರೂ 25 00 ಲಕ್ಷ ಮೊತ್ತದ ಕಾಮಗಾರಿಯನ್ನು ಗುತ್ತಿಗೆದಾರರಿಗೆ ಈಗಾಗಲೇ ವಹಿಸಲಾಗಿದೆ

3 ನಿಡ್ಲೆ ಕಾಯರ್ ತಡ್ಕ ಸೆರಿಯ ರಸ್ತೆ ಈ ರಸ್ತೆಯು ಪುದುವೆಟ್ಟು– ಕಾಯರ್ ತಡ್ಕ, ನಿಡ್ಲೆ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಒಟ್ಟು ಉದ್ದ 8 00 ಕಿಮೀ ಅಭಿವೃದ್ಧಿಗೆ ರೂ 85 00 ಲಕ್ಷ ಅಂದಾಜನ್ನು ತಯಾರಿಸಲಾಗಿದೆ

4 ಧರ್ಮಸ್ಥಳ ಪೆರಿಯಡ್ಕ ತೋಟತ್ತಾಡಿ ಕಕ್ಕಂಜಿ ರಸ್ತೆ ಈ ರಸ್ತೆಯು ಧರ್ಮಸ್ಥಳ ತೋಟತ್ತಾಡಿ ಚಿಬಿದ್ರೆ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಒಟ್ಟು ಉದ್ದ 10 80 ಕಿಮೀ ಅಭಿವೃದ್ಧಿಗೆ ರೂ 90 00 ಲಕ್ಷ ಅಂದಾಜನ್ನು ತಯಾರಿಸಲಾಗಿದೆ

5 ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಕ್ಕಂಜದ ನೆರಿಯಾ ಪುದುವೆಟ್ಟು ರಸ್ತೆಯ ಕಿಮೀ 0 00 ರಿಂದ 7 00 ಕಿಮೀ ವರೆಗೆ ಅಭಿವೃದ್ಧಿಗೆ ರೂ 55 00 ಲಕ್ಷ ಅನುಮೋದನೆ ಮತ್ತು ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಸಲ್ಲಿಸಲಾಗಿದೆ (3054–12ನೇ ಹಣಕಾಸು ಯೋಜನೆಯಡಿಯಲ್ಲಿ)

6 ಬೆಳ್ತಂಗಡಿ ತಾಲ್ಲೂಕಿನಲ್ಲಿ ಮುಂಡಾಜೆ ಕದಿರುದ್ಯಾವರ ಸಿಡುಪೆ ಸಂಸೆ ರಸ್ತೆಯ ಕಿಮೀ 0 00 ರಿಂದ 16 00 ಕಿಮೀ ವರೆಗೆ ಅಭಿವೃದ್ಧಿಗೆ ರೂ 60 00 ಲಕ್ಷ ಅನುಮೋದನೆ ಮತ್ತು ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಸಲ್ಲಿಸಲಾಗಿದೆ (3054–12ನೇ ಹಣಕಾಸು ಯೋಜನೆಯಡಿಯಲ್ಲಿ)

ಮೇಲ್ಕಂಡ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಿ ರಸ್ತೆಯನ್ನು ಸುಸ್ಥಿತಿಯಲ್ಲಿಡಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಮತ್ತು ಸರ್ಕಾರದಿಂದ ಆಗಿಂದಾಗ್ಗೆ ಬಿಡುಗಡೆ ಆಗುವ ಅನುದಾನ ಅನುಗುಣವಾಗಿ ಸದರಿ ರಸ್ತೆಗಳನ್ನು ಡಾಂಬರೀಕರಣ ಮಾಡಲಾಗುವುದು

409 (502) ಶ್ರೀ ಪ್ರಬಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭಿಸಲಾದ ಅಂಗನವಾಡಿ ಕೇಂದ್ರಗಳು ಯಾವುವು, (ಜಿಲ್ಲಾವಾರು ವಿವರ ನೀಡುವುದು)

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭಿಸಲಾದ ಅಂಗನವಾಡಿ ಕೇಂದ್ರಗಳ ಸಂಕ್ಯೆ ಎಷ್ಟು, (ತಾಲ್ಲೂರುವಾರು ವಿವರ ನೀಡುವುದು)

ಇ) ಅಂಗನವಾಡಿ ಕೇಂದ್ರಗಳಿಗೆ ಕಾರ್ಯಕರ್ತೆಯರ ನೇಮಕಾತಿಯಲ್ಲಿ ಅನುಸರಿಸುತ್ತಿರುವ ಮಾನದಂಡಗಳೇನು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ ಮಂಜೂರಾಗಿರುವ ಹಾಗೂ ಪ್ರಾರಂಭಿಸಲಾಗಿರುವ ಅಂಗನವಾಡಿ ಕೇಂದ್ರಗಳ ಜಿಲ್ಲಾವಾರು ವಿವರವನ್ನು ಅನುಬಂಧ–1 ರಲ್ಲಿ ಒದಗಿಸಿದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭಿಸಲಾಗಿರುವ ಅಂಗನವಾಡಿ ಕೇಂದ್ರಗಳ ವಿವರ ಅನುಬಂಧ–2 ರಲ್ಲಿ ಒದಗಿಸಿದೆ

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭಿಸಲಾದ ಅಂಗನವಾಡಿ ಕೇಂದ್ರಗಳು–261 ವಿವರ ಅನುಬಂಧ–2 ರಲ್ಲಿ ಒದಗಿಸಿದೆ

ಇ) ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆಗಾಗಿ ಅರ್ಜಿಗಳನ್ನು ಅಂಗನವಾಡಿ ಕೇಂದ್ರದ ಗ್ರಾಮದವರಿಂದ ಮಾತ್ರ ಕರೆಯಬೇಕು, ಈ ಬಗ್ಗೆ ಪ್ರಕಟಣೆಯನ್ನು ಹೊರಡಿಸಿ ಆ ಗ್ರಾಮದ ಪ್ರಾಥಮಿಕ ಶಾಲಾ ಕಟ್ಟಡಗಳ ಹಾಗೂ ಗ್ರಾಮ ಪಂಚಾಯಿತಿ ಕಟ್ಟಡಗಳ ಸೂಚನಾ ಫಲಕದ ಮೇಲೆ ಅಂಟಿಸಬೇಕು ಅಂಗನವಾಡಿ ಕಾರ್ಯಕತೆಯರ ನೇಮಕಾತಿಯನ್ನು ಆಯ್ಕೆ ಸಮಿತಿಯ ಮೂಲಕ ನಡೆಸಲಾಗುವುದು ಅಂಗನವಾಡಿ ಕಾರ್ಯಕರ್ತೆಯರನ್ನು ಆಯ್ಕೆ ಮಾಡಲು ಇರಬೇಕಾದ ಅರ್ಹತೆಗಳು

1] ಸ್ಥಳೀಯ ಮಹಿಳೆಯರಾಗಿಬೇಕು

2] 18 ರಿಂದ 45 ವರ್ಷದೊಳಗಿನವರಾಗಿರಬೇಕು

3] ಎಸ್ ಎಸ್ ಎಲ್ ಸಿ ತೇರ್ಗಡೆಯಾಗಿರಬೇಕು

4] ಅರ್ಹತೆಯ ಮೇರೆಗೆ ಬದ್ಧಿವಂತಿಕೆಯುಳ್ಳ, ಚಟುವಟಿಕೆಯುಳ್ಳ ಮಹಿಳೆಯನ್ನು ಅಂಗನವಾಡಿ ಕಾರ್ಯಕರ್ತೆಯನ್ನಾಗಿ ಗುರುತಿಸುವುದು

ಅನುಬಂಧ–1

ರಾಜ್ಯದಲ್ಲಿ ಪ್ರಾರಂಭಿಸಲಾಗಿರುವ ಹೊಸ ಅಂಗನವಾಡಿ ಕೇಂದ್ರಗಳ ಮಾಹಿತಿ

ಕ್ರ.ಸಂ	ಜಿಲ್ಲೆಯ ಹೆಸರು	ಮಂಜೂರಾದ ಅಂಗನವಾಡಿ ಕೇಂದ್ರಗಳ ಸಂಖ್ಯೆ	ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ
1	ಬಾಗಲಕೋಟೆ	426	392
2	ಬೆಂಗಳೂರು (ಗ್ರಾ)	299	299
3	ಬೆಂಗಳೂರು (ನ)	236	212
4	ಬೆಳಗಾಂ	813	660
5	ಬಳ್ಳಾರಿ	650	477
6	ಬೀದರ್	352	328
7	ಬಿಜಾಪುರ	339	303
8	ಚಾಮರಾಜನಗರ	231	231
9	ಚಿಕ್ಕಮಗಳೂರು	290	215
10	ಚಿತ್ರದುರ್ಗ	383	375
11	ದಕ್ಷಿಣ ಕನ್ನಡ	261	261
12	ದಾವಣಗೆರೆ	412	296
13	ಧಾರವಾಡ	354	348
14	ಗದಗ	167	167
15	ಗುಲ್ಬರ್ಗಾ	833	752
16	ಹಾಸನ	468	468
17	ಹಾವೇರಿ	323	318
18	ಕೋಲಾರ	691	589
19	ಮಡಿಕೇರಿ	100	100

20	ಕೊಪ್ಪಳ	383	383
21	ಮಂಡ್ಯ	323	299
22	ಮೈಸೂರು	404	384
23	ರಾಯಚೂರು	459	395
24	ಶಿವಮೊಗ್ಗ	559	540
25	ತುಮಕೂರು	915	858
26	ಉಡುಪಿ	75	75
27	ಕಾರವಾರ	567	540
	ಒಟ್ಟು	11313	10265

ಅನುಬಂಧ-2

2005-06ನೇ ಸಾಲಿಗೆ ದ ಕ ಜಿಲ್ಲೆಗೆ ಮಂಜೂರಾದ ಹೆಚ್ಚುವರಿ ಅಂಗನವಾಡಿ ಕೇಂದ್ರಗಳ ಪಟ್ಟಿ

ಕ್ರ.ಸಂ	ತಾಲ್ಲೂಕು	ಮಂಜೂರಾದ ಕೇಂದ್ರಗಳ ಸಂಖ್ಯೆ
1	ಮತ್ತೂರು	5
2	ಮಂಗಳೂರು (ಗ್ರಾ)	45
3	ಸುಳ್ಯ	45
4	ಬಂಟ್ವಾಳ	28
5	ಮಂಗಳೂರು (ನ)	50
6	ಬೆಳ್ತಂಗಡಿ	88
	ಒಟ್ಟು	261

ಹೆಚ್ಚುವರಿ ಅಂಗನವಾಡಿ ಕೇಂದ್ರಗಳ ವಿವರ

ಕ್ರ.ಸಂ	ಹೆಚ್ಚುವರಿ ಅಂ ಕೇಂದ್ರದ ಹೆಸರು	ಗ್ರಾಮ ಪಂಚಾಯತ್	ಗ್ರಾಮ
	ಪುತ್ತೂರು ತಾಲ್ಲೂಕು		
1	ವೀರಮಂಗಲ	ನರಿಮೊಗರು	ನರಿಮೊಗರು
2	ಮುಕ್ವೆ	ನರಿಮೊಗರು	ನರಿಮೊಗರು
3	ಮಂತೂರು	ಸವಣೂರು	ಸವಣೂರು

4	ಕುರೇಲು	ಕಾಣಿಯೂರು	ಮೇಲ್ಕಾಡಿ
5	ಅಲಾರಮೆ	ಕುಟ್ರುಪಾಡಿ	ಕುಟ್ರುಪಾಡಿ
	ಒಟ್ಟು		
ಮಂಗಳೂರು (ಗ್ರಾ)			
1	ಕಳವಾರು ಸಂಕದ ಬಳಿ	ಬಾಳ	ಕಳವರು
2	ಗಾಂಧಿನಗರ	ಮೂಡಬಿದ್ರೆ ಮರಸಭೆ	ಮೇರ್ಪಾಡಿ
3	ಮಡ್ಯಾರು	ಕೋಟೆಕಾರು	ಕೋಡೆಕಾರು
4	ಪೋರಿಮ್ಮೆಲ್	ಹೊಸಬೆಟ್ಟು	ಇರುವೈಲು
5	ನೆಲ್ಲಿತೀರ್ಥ	ಮುಚ್ಚೂರು	ಕೊಂಪದವು
6	ಕೋರಿಬೆಟ್ಟು	ಎಡಪದವು	ತೆಂಕೆಡವದವು
7	ಕಲ್ಲಮುತ್ತಿಗೆ ವರಬೈಲು	ದರೆಉಡ್ಡೆ	ಕಲ್ಲಮುತ್ತಿಗೆ
8	ನಾರ್ಲಪದವು	ಗಂಜೀಮಠ	ಮೊಗರು
9	ನಾಗರಕಟ್ಟೆ	ಮೂಡಬಿದ್ರೆ ಪುರಸಭೆ	ಮೇರ್ವಾಡಿ
10	ಉರ್ಪೆಪಾಲ್	ಮೂಡಬಿದ್ರೆ ಮರಸಭೆ	ಕಲ್ಲಬೆಟ್ಟು
11	ಬಗ್ಗಜಾರ್	ಮೂಡಬಿದ್ರೆ ಮರಸಭೆ	ಕಲ್ಲಬೆಟ್ಟು
12	ಮೂಡಬಿದ್ರೆ ಪೇಟೆ	ಮೂಡಬಿದ್ರೆ ಮರಸಭೆ	ಮೇರ್ವಾಡಿ
13	ಮರಿಯೇಡಿ	ಮೂಡಬಿದ್ರೆ ಮರಸಭೆ	ಮೇರ್ಪಾಡಿ
14	ತಜಪೋಡಿ	ಅಡ್ಯಾರು	ಅಡ್ಯಾರು
15	ಬಂಗ್ಲೆಗುಡ್ಡೆ ಸ್ಟೈಟ್	ಗುರುಮರ	ಮೂಳೂರು
16	ಕುರ್ಚಿಗಡ್ಡೆ	ಗುರುಪುರ	ಅಡ್ಯಾರು
17	ಮಳಕಿಕ್ರಾಸ್ ಆಳಿಕೆ	ಗಂಜೀಮಠ	ಬಡಗುಳಿಪಾಡಿ

18	ಕೈಕಂಬ ಮಸೀದಿಬಳಿ	ಗಂಜೀಮರ	ಬಡಗಉಳಿಪಾಡಿ
19	ಜರಿನಗರ	ಮಳವೂರು	ಮಳವೂರು
20	ತತ್ತಾಡಿ ಶಾಂತಿಗುಡ್ಡೆ	ಮಳವೂರು	ಕೆಂಜಾರು
21	ಬೀರಿಂಜ	ಮಳವೂರು	ಕೆಂಜಾರು
22	ಚಾರ	ಮೂಡುಶೆಡ್ಡೆ	ಮೂಡುಶೆಡ್ಡೆ
23	ಪಡುಶೆಡ್ಡೆ	ಮೂಡುಶೆಡ್ಡೆ	ವಡುಶೆಡ್ಡೆ
24	ಪಾಲ್ದನೆ	ಕುಡುಪು	ಕುಡುಪು
25	ಜ್ಯೋತಿನಗರ	ತಿರುವ್ಯೆಲು	ತಿರುವ್ಯೆಲು
26	ಚೆಂಬುಗುಡ್ಡೆ	ಪೆರ್ಮನ್ನೂರು	ವೆರ್ಮನ್ನೂರು
27	ಮಡಕ	ಅಂಬ್ಲಮೊಗರು	ಅಂಬ್ಲಮೊಗರು
28	ಮುಡಿಪೋಡಿ	ಪೆರ್ಮನ್ನೂರು	ವೆರ್ಮನ್ನೂರು
29	ಶಾಂರಿಬಾಗ್	ಮುನ್ನೂರು	ಮುನ್ನೂರು
30	ತಿಲಕ್ ನಗರ	ಅಂಬ್ಲಮೊಗರು	ಅಂಬ್ಲಮೊಗರು
31	ಸಾಗು	ಹಳೆಯಂಗಡಿ	ಹಳೆಯಂಗಡಿ
32	ಉಕ್ಕಡ	ಕಿನ್ಯ	ಕಿನ್ಯ
33	ರಹಮತ್ ನಗರ	ಕಿನ್ಯ	ಕಿನ್ಯ
34	ಕುಮರಂಗಲ	ಕೋಡೆಕಾರು	ಕೋಡೆಕಾರು
35	ನವಗ್ರಾಮ ಅಂಬೇಡ್ಕರ್ ನಗರ	ಬೆಳುವಾಯಿ	ಬೆಳುವಾಯಿ
36	ಕೊರಕಂಬಳ ಅಡ್ಕಬಾರೆ	ವಡುಪೆರಾರ	ಪಡುವೆರಾರ
37	ಕವತ್ತೂರು	ಬಳ್ಕಾಂಜೆ	ಕವತ್ತಾರು
38	ಕುಟ್ರಪಾಡಿ	ಕಲ್ಲಮುಂಡಟ್ಕೂರು	ಕಲ್ಲಮುಂಡ್ಕೂರು
39	ಅರೆಮಜಲುಪಲ್ಕೆ	ತೆಂಕವಿಜಾರು	ಬಡಗ ಮಿಜಾರು
40	ನಾಟಿಕಲ್	ಮಂಜನಾಡಿ	ಮಂಜನಾಡಿ
41	ಕಲ್ಲಕಾಡು	ಬೋಳಿಯಾರು	ಬೋಳಿಯಾರು
42	ಬೊಮ್ಮಲಗುಡ್ಡೆ	ಕಡಂದಲೆ	ಕಡಂದಲೆ
43	ಕಾಫಿಕಾಡು	ಮತ್ತಿಗೆ	ಪುತ್ತಿಗೆ

44	ಗುರುಪುರ ಪೇಟೆ	ಗುರುಪುರ	ಗುರುಮರ
45	ಪ್ರಾರಂಭವಾಗಿಲ್ಲ		

ಕ್ರ.ಸಂ	ಹೆಚ್ಚುವರಿ ಅಂ ಕೇಂದ್ರದ ಹೆಸರು	ಗ್ರಾಮ ಪಂಚಾಯತ್	ಗ್ರಾಮ
ಸುಳ್ಯ ತಾಲ್ಲೂಕು			
1	ಕಾಂತಮಂಗಲ	ಅಜ್ಜಾವರ	ಅಜ್ಜಾವರ
2	ಮೈತಡ್ಕ	ಮಂಡೆಕೋಲು	ಮಂಡೆಕೋಲು
3	ಕುಕ್ಕೆಟ್ಟಿ	ಮಂಡೇಕೋಲು	ಮಂಡೇಕೋಲು
4	ಕದಿತಡ್ಕ	ಜಾಲ್ಸೂರು	ಜಾಲ್ಸೂರು
5	ಕೋನಡ್ಕ ಪದವು	ಜಾಲ್ಸೂರು	ಜಾಲ್ಸೂರು
6	ಮರಸಂಕ	ಜಾಲ್ಸೂರು	ಜಾಲ್ಸೂರು
7	ಕನಕಮಜಲು	ಕನಕಮಜಲು	ಕನಕಮಜಲು
8	ಕಮಿಲಡ್ಕ	ಉಬರಡ್ಕ ಮಿತ್ತೂರು	ಉಬರಡ್ಕ ಮಿತ್ತೂರು
9	ದರ್ಕಾಸು	ಸಂಪಾಜೆ	ಸಂಪಾಜೆ
10	ದಾಸರಬೈಲು	ಮರ್ಕಂಜ	ಮರ್ಕಂಜ
11	ಬಾರ್ಪಣೆ	ಆಲೆಟ್ಟಿ	ಆಲೆಟ್ಟಿ
12	ಮಾವಿನಕಟ್ಟೆ	ದೇವಚಳ್ಳ	ದೇವಚಳ್ಳ
13	ಚೊಕ್ಕಾಡಿ	ಅಮರಮುಡ್ನೂರು	ಅಮರಮಡ್ನೂರು
14	ಕಮಿಲ	ಗತ್ತಿಗಾರು	ಗುತ್ತಿಗಾರು
15	ಕುಂಟಿಕಾನ	ಅಮರ ಪಡ್ನೂರು	ಅಮರ ಪಡ್ನೂರು
16	ಬಲ್ಕಜೆ	ಮಡಪ್ಪಾಡಿ	ಮಡಪ್ಪಾಡಿ
17	ಬೆಳ್ಳಾರೆ	ಬೆಳ್ಳಾರೆ	ಬೆಳ್ಳಾರೆ
18	ಪಾರೆಪ್ಪಾಡಿ	ಐವರ್ನಾಡು	ಐವರ್ನಾಡು
19	ದೇವರಗದ್ದೆ	ಸುಬ್ರಮಣ್ಯ	ಸುಬ್ರಮಣ್ಯ

20	ಪರಿವಾರಕಾನ	ಅಲೆಟ್ಟಿ	ಅಲೆಟ್ಟಿ
21	ಎಲಿಮಲೆ	ದೇವಚಳ್ಳ	ದೇವಚಳ್ಳ
22	ಅಕ್ಕೋಜಿಪಾಲ್	ಅಮರ ಪಡ್ನೂರು	ಅಮರ ಪಡ್ನೂರು
23	ಮುರ್ಕೆತ್ತಿ	ಬೆಳ್ಳಾರೆ	ಬೆಳ್ಳಾರೆ
24	ಮುರೂರು ದೇವರಗುಂಡ	ಮಂಡೆಕೋಲು	ಮಂಡೆಕೋಲು
25	ಮಾಣಿಮಜಲು	ಕನಕಮಜಲು	ಕನಕಮಜಲು
26	ಉದ್ದಾರತಡ್ಡ	ಅಜ್ಜಾವರ	ಅಜ್ಜಾವರ
27	ತೀರ್ಥಮಜಲು	ಮರ್ಕಂಜ	ಮರ್ಕಂಜ
28	ಕಡೆಪಾಲ	ಸಂಪಾಜೆ	ನಂಪಾಜೆ
29	ಪರ್ವತಮುಖಿ	ಸಬ್ರಮಣ್ಯ	ಸುಬ್ರಮಣ್ಯ
30	ಕರಂಗಲ್ಲು	ದೇವಚಳ್ಳ	ದೇವಚಳ್ಳ
31	ಕಲ್ಲವಣೆ	ಉಬರಡ್ಕ ಮಿತ್ತೂರು	ಉಬರಡ್ಕ ಮಿತ್ತೂರು
32	ಶಾರದಾಗುಡ್ಡೆ	ಸುಬ್ರಮಣ್ಯ	ಏನೆಕಲ್ಲು
33	ಕೊಟೇಲು	ಸುಳ್ಯ ನಗರ ಪಂಚಾಯತ್	ಸುಳ್ಯ
34	ದೊಡ್ಡ ಕುಮೇರಿ	ಅರಂತೋಡು	ತೊಡಿಕಾನ
35	ಮೇದಿನಡ್ಕ	ಅಜ್ಜಾವರ	ಅಜ್ಜಾವರ
36	ಹಾಲೆಮಜಲು	ಗುತ್ತಿಗಾರು	ನಾಲ್ಕೂರು
37	ಕೊತ್ನಡ್ಕ	ಹರಿಹರಪಲ್ಲತಡ್ಕ	ಬಾಳುಗೋಡು
38	ಉಮ್ಮನಗರ	ಕಳಂಜ್	ಕಳಂಜ
39	ಸೇವಾಜೆ	ದೇವಚಳ್ಳ	ದೇವಚಳ್ಳ
40	ನಾರ್ಕೋಡು	ಅಲೆಟ್ಟಿ	ಅಲೆಟ್ಟಿ

ಹೆಚ್ಚುವರಿ ಅಂಗನವಾಡಿ ಕೇಂದ್ರಗಳ ವಿವರ

ಕ್ರ.ಸಂ	ಹೆಚ್ಚುವರಿ ಅಂ ಕೇಂದ್ರದ ಹೆಸರು	ಗ್ರಾಮ ಪಂಚಾಯತ್	ಗ್ರಾಮ
ಮಂಗಳೂರು (ನಗರ)			
1	ಉರ್ದುಶಾಲೆ		
2	9ನೇ ಬ್ಲಾಕ್ ಕಾಟಿಪಳ್ಳ-2		
3	ಚರ್ಚ್ ರೋಡ್ ಕೈಕಂಬ		
4	ಕಾಟಿಪಳ್ಳ 9ನೇ ಬ್ಲಾಕ್		
5	4ನೇ ವಿಭಾಗ ಕೃಷ್ಣಾಪುರ		
6	7ನೇ ಬ್ಲಾಕ್ ಶಾಲೆ ಹಿಲ್ ಸೈಡ್		
7	8ನೇ ಬ್ಲಾಕ್ ಕೃಷ್ಣಾಪುರ		
8	6ನೇ ಬ್ಲಾಕ್ ಕೃಷ್ಣಾಪುರ		
9	ಆಶ್ರಯ ಕಲೋನಿ ಕಾನಕಟ್ಟೆ		
10	ಗುಡ್ಡೆ ಕೊಪ್ಪಲ		
11	ವೆಂಕಟ್ರಮಣ ಕಾಲೋನಿ ಹೊಸಬೆಟ್ಟು		
12	ಕುಲಾಯಿ ವಿಷ್ಣು ಮೂರ್ತಿ ದೇವಸ್ಥಾನ		
13	ಕೂರಿಕಟ್ಟ		
14	ನಾರಾಯಣ ಗುರು ವಿರೋಬ ಭ ಮಂದಿರ		
15	ಮೀನಕಳಿಯ ಪಣಂಬೂರು		
16	ಪಂಜಿಮೊಗರು-2		
17	ಸ್ನೇಹ ಬಳಗ ಕುಂಜತ್ತಬೈಲ್		
18	ಕೃಷ್ಣಾನಗರ ಬೋಂದೆಲ್		
19	ಕೆ ಎಚ್ ಬಿ ಕಾಲೋನಿ ಕಾವೂರು		
20	ಮರಕಡ ಬಸ್ ಸ್ಟಾಂಡ್		
21	ಎರ್ಮಜಾಲು ತೋಟ		
22	ಉರುಂದಾಡಿ ಗುಡ್ಡೆ ಚರ್ಚ್		
23	ಕೋಡಿಕಾಲ್ ಕ್ರಾಸ್ ರೋಡ್		

24	ಬಂಗ್ರಕೂಳೂರು
25	ಕೋಡಿಕಲ್–2
26	ಪರಪಾದೆ ಆನಂದನಗರ
27	ಪಚ್ಚನಾಡಿ ಜನತಾ ಕಾಲೋನಿ
28	ನೇಜಿಲಗುರಿ
29	ಗುಂಡಳಿಕೆ
30	ಮಂಜಡ್ಕ (ನಂಜಯನಗರ)
31	ಕುಂಟಕಾನ ಎ ಜೆ ಆಸ್ಪತ್ರೆ ಬಳಿ
32	ದೇರೆಬೈಲ್
33	ಸುಂಕದ ಕಟ್ಟೆ ಉರ್ವಸ್ಟೋರ್ (ವೈದ್ಯನಾಥೇಶ್ವರ)
34	ಗಾಂದಿನಗರ ಶಾಲೆ (ಉರ್ವ)
35	ಸ್ಟೈಂಟ್ ಅಲೋಶಿಯಸ್ ಲೇಡಿಹಿಲ್
36	ಮರದ ಕಣಿ ಉರ್ವ
37	ಬಿಜೈ ಚರ್ಚ್
38	ನ್ಯೂರೋಡ್ ಬಿಜೈ
39	ಆನೆಗುಂಡಿ
40	ನಂತೂರು ಬಬ್ಬುಸ್ವಾಮಿ
41	ರಾಜೀವನಾಗರ
42	ಕೆ ವಿ ಎಸ್ ಶಕ್ತಿನಗರ
43	ಬಜ್ಜೋಡಿ ಮರಿಯಾ ನಗರ
44	ಬಿಕರ್ಣಕಟ್ಟೆ ಶಾಲೆ
45	ಉರ್ದುಶಾಲೆ ಬಂದರು
46	ಬಿ ಇ ಎಂ ಶಾಲೆ ಕಾರ್ ಸ್ಟ್ರೀಟ್
47	ಓಲ್ಡ್ ಕೆಂಟ್ ಫ್ಲೈಯರ್ ಸ್ಟೇಷನ್
48	ನೆಕ್ಕರೆಮಾರು (ಗೋರಿಗುಡ್ಡೆ)
49	ಡೆಂಜ ಅಳಪೆ
50	ನಿಡ್ಡೇಲು ಗೋಕರ್ಣ ಕುಲಶೇಖರ

ಹೆಚ್ಚುವರಿ ಅಂಗನವಾಡಿ ಕೇಂದ್ರಗಳ ವಿವರ

ಕ್ರ.ಸಂ	ಹೆಚ್ಚುವರಿ ಅಂ ಕೇಂದ್ರದ ಹೆಸರು	ಗ್ರಾಮ ಪಂಚಾಯತ್	ಗ್ರಾಮ
ಬಂಟ್ವಾಳ ತಾಲ್ಲೂಕು			
1	ಗುಡ್ಡೆಯಂಗಡಿ	ನಗರವಂಚಾಯತ್	ನಗರಪಂಚಾಯತ್
2	ಬಡಂಗಬೆಟ್ಟು	ಚೆನ್ನೈತ್ತೋಡಿ	ಚೆನ್ನೈತ್ತೋಡಿ
3	ಸುಂಕದಕಟ್ಟೆ	ಕರೋಪಾಡಿ	ಕರೋಪಾಡಿ
4	ತಾಳಿಪಡ್ಪು	ಕರೋಪಾಡಿ	ಕರೋವಾಡಿ
5	ಬೊನ್ನೈಕುಕ್ಕು	ವೀರ ಕಂಬ	ವೀರಕಂಬ
6	ಮಣಿಯಾರುಪಾದೆ	ಕೇಮು	ಕೇಪು
7	ತುಂಬೆತ್ತಡ್ಕ	ಉಳಿ	ಉಳಿ
8	ರಾಧುಕಟ್ಟೆ	ವಿಟ್ಲ ಮುಡ್ನೂರು	ವಿಟ್ಲ ಮುಡ್ನೂರು
9	ಚಿನ್ನಕಟ್ಟೆ	ನರಿಂಗಾನ	ನರಿಂಗಾನ
10	ನೆತ್ತಲಪದವು	ನರಿಂಗಾನ	ನರಿಂಗಾನ
11	ಮಿತ್ತಪಡ್ಪು	ಕೂರ್ನಾಡು	ಕೂರ್ನಾಡು
12	ಗೇರುಪಡ್ಪು	ಇರಾ	ಇರಾ
13	ತಂಜರೆ	ಪಜೀರು	ಪಜೀರು
14	ಬೋಳ್ಕರ್	ಕೋಲ್ನಾಡು	ಕೋಲ್ನಾಡು
15	ಭಾಳೆಪುಣಿ ನವಗ್ರಾಮ	ಬಾಳೆಪುಣಿ	ಭಾಳೆಪುಣಿ
16	ದಡ್ಡಲಡ್ಕ	ವಿಟ್ಲ ಮುಡ್ನೂರು	ವಿಟ್ಲ ಮುಡ್ನೂರು
17	ಭಾವಂತಬೆಟ್ಟು	ನಾವೂರು	ನಾವೂರು
18	ನೋರ್ಣಡ್ಕಪಡು	ಅಮ್ಟಾಡಿ	ಅಮ್ಟಾಡಿ
19	ಖಂಪಮೂಗೇರು	ಕೋಲ್ನಾಡು	ಕೋಲ್ನಾಡು
20	ಅಲ್ಲುಂಡೆ	ರಾಯಿ	ರಾಯಿ
21	ಕೊಲ್ಯ	ಸಜೀಪಮೂಡ	ಸಜೀಪಮೂಡ
22	ಕೋಜುಗೋಳಿ	ಕೋಲ್ನಾಡು	ಕೋಲ್ನಾಡು
23	ಸುತ್ತಬೈಲು	ಇರಾ	ಇರಾ

24	ಮುಂಡಾಡಿ	ಇರಾ	ಇರಾ
25	ಕಟ್ಟತ್ತಿಲ ಮಸೀದಿ ಬಳಿ	ಕೋಲ್ನಾಡು	ಕೋಲ್ನಾಡು
26	ಭಡಂಗ ಬೆಟ್ಟು	ಚೆನ್ನೈತ್ತೋಡಿ	ಚೆನ್ನೈತ್ತೋಡಿ
27	ಮಾಮೇಶ್ವರ	ವಿಟ್ಲ	ವಿಟ್ಲ
28	ಪ್ರಾರಂಭಗೊಂಡಿಲ್ಲ		

ಹೆಚ್ಚುವರಿ ಅಂಗನವಾಡಿ ಕೇಂದ್ರಗಳ ವಿವರ

ಕ್ರ.ಸಂ	ಹೆಚ್ಚುವರಿ ಅಂ ಕೇಂದ್ರದ ಹೆಸರು	ಗ್ರಾಮ ಪಂಚಾಯತ್	ಗ್ರಾಮ
ಬೆಳ್ತಂಗಡಿ ತಾಲ್ಲೂಕು			
1	ನಾರಾವಿಶಾಲೆ	ನರಾವಿ	ನಾರಾವಿ
2	ಕುತ್ಲೂರುಮಲೆ	ನಾರಾವಿ	ಕುತ್ಲೂರು
3	ಮುಳ್ಳಗುಡ್ಡ	ಆಳದಂಗಡಿ	ಬಡಗಕಾಂದೂರು
4	ತಾರೆದೊಟ್ಟು	ಬಳಂಜ	ತೆಂಕಕಾರಂದೂರು
5	ಎರಂಗಲ್ಲು	ಕವೆಟ್ಟು	ಕುವೆಟ್ಟು
6	ರೇಷ್ಮೆಮ್ಮರೊಳಿಕೆ	ಕುವೆಟ್ಟು	ಓಡಿಲ್ನಾಳ
7	ಕುದ್ರಡ್ಕ	ಮಚ್ಚಿನ	ಮಚ್ಚಿನ
8	ಕಲ್ಲುಗುಡ್ಡ	ಮಚ್ಚಿನ	ಮಚ್ಚಿನ
9	ಗೋವಿಂದೂರು	ಕಳಿಯಾ	ನ್ಯಾಯತಪು
10	ಗುಂಡಿದಡಿ	ಮಲಾಡಿ	ಸೋಣಂದೂರು
11	ಕೊಲ್ಲ	ಮಿತ್ತಬಾಗಿಲು	ಮಿತ್ತಬಾಗಿಲು
12	ಎರ್ಕಲ ಪಲ್ಕೆ	ಮಿತ್ತಬಾಗಿಲು	ಕಡಿರುದ್ಯಾವರ
13	ಕಲ್ಲಗುಂಡ	ಚಾರ್ಮಾಡಿ	ಚಿಬಿದ್ರೆ
14	ಗಾಂಧಿನಗರ	ಚಾರ್ಮಾಡಿ	ಚಾರ್ಮಾಡಿ
15	ನಾರ್ಯ	ಧರ್ಮಸ್ಥಳ	ಧರ್ಮಸ್ಥಳ
16	ನೆಕ್ಕರೆಪಿಲಿಕಳಿ	ನೆರಿಯಾ	ನೆರಿಯಾ
17	ಜ್ವಾವಳ ಪಾಳಂಜ	ಆರಸಿನಮಕ್ಕಿ	ಹತ್ಯಡ್ಕ
18	ನೇನೋಡಿ	ಶಿಶಿಲ	ಶಿಶಿಲ

19	ಪಿಜಿನಡ್ಕ	ಕೊಕ್ಕಡ	ಕೊಕ್ಕಡ
20	ಬೂಡುವಮಕ್ಕಿ	ಶಿವಾಜೆ	ಶಿಬಾಜೆ
21	ಶಿಬರಾಜೆ	ನಿಡ್ಲೆ	ಕಳಂಜ
22	ಬೇಂಗಿಲ	ಬಾರ್ಯ	ಬಾರ್ಯ
23	ನೇಜಿಕಾರು	ಇಳಂತಿಲ	ಇಳಂತಿಲ
24	ಕೊಡಂಗೆ	ತಣ್ಣೀರುವಂಧ	ತಣ್ಣೀರುಪಂಧ
25	ಹೊಸಪಟ್ಲ	ವೇಣೂರು	ಬಜಿರೆ
26	ಬನ್ನೆಕರಡು ಕವಲು	ಆರಂಬೋಡಿ	ಆರಂಬೋಡಿ
27	ಕಿಲಾರ	ಆಂಡಿಂಜೆ	ಆಂಡಿಂಜೆ
28	ಅರಳಿ	ಉಜಿರೆ	ಉಜಿರೆ
29	ಪೆರ್ಮುದಕೊಪ್ಪದ ಬೈಲು	ಕೊಯ್ಯೂರು	ಕೊಯ್ಯೂರು
30	ಮಂಜದಪಲ್ಕೆ	ಮಂಡಂತ್ಯಾರು	ಕುಕ್ಲಳ
31	ಕುಕ್ಲಳ	ಮಂಡಂತ್ಯಾರು	ಕುಕ್ಲಳ
32	ಅಕ್ಷರ ಕರವಳಿ	ಮಂಡಂತ್ಯಾರು	ಪಾರೆಂಕಿ
33	ಕಲ್ಲಗುತ್ತು	ಬೆಳ್ತಂಗಡಿ	ಬೆಳ್ತಂಗಡಿ
34	ಸಧೇಮುಗೇರು	ಬೆಳ್ತಂಗಡಿ	ಬೆಳ್ತಂಗಡಿ
35	ಹೂಡಿಕ್ಯಾರು	ಇಂದಬೆಟ್ಟು	ನಾವೂರು
36	ನೇರ್ದೊಳಪಲ್ಕೆ	ನಡ	ಕನ್ಯಾಡಿ
37	ಪೆರ್ಲ	ಉಜ್ಜಿರೆ	ಉಜ್ಜಿರೆ
38	ಕಿರ್ಲಾಲು ದೇವಸ್ಥಾನ	ಶಿರ್ಲಾಲು	ಶಿರ್ಲಾಲು
39	ವಟ್ರಮೆ	ವಟ್ರಮೆ	ಪಟ್ರಮೆ
40	ನೆಲ್ಲಿಗುಡ್ಡ ಬೊಳಶಾಲೆ	ಕಾಶೀಪಟ್ನ	ಕಾಶಿಪಟ್ನ
41	ಕೊಳ್ಳಕೆಬೈಲು	ಶಿಶಿಲ	ಶಿಶಿಲ
42	ಹೋಸ್ಕೋಟ	ಅರಸಿನ ಮಕ್ಕಿ	ಹತ್ಯಡ್ಕ
43	ಬೊಟ್ಟಲ ಮಾರು	ಶಿರ್ಳಾಲು	ಕರಂಬಾಡು
44	ಅಶೋಕ ನಗರ	ಧರ್ಮಸ್ಥಳ	ಧರ್ಮಸ್ಥಳ
45	ಕೋಲೋಡಿ	ನೆರಿಯ	ನೆರಿಯ

46	ಬಡಕೊಟ್ಟು	ಉಜಿರೆ	ಉಜಿರೆ
47	ಪಾನಡ್ಕ	ಬೆಳಾಲು	ಬೆಳಾಲು
48	ಸೋಮತಡ್ಕ	ಮುಂಡಜೆ	ಮುಂಡಾಜೆ
49	ಕೋಡಿಯಾಲ್	ಮಾಲಾಡಿ	ಮಾಲಾಡಿ
50	ಮೇಗಿನವೇಟೆ	ಚಾರ್ಮಾಡಿ	ಚಾರ್ಮಾಡಿ
51	ಕುತ್ತಿನ	ಮಚ್ಚಿನ	ಮಚ್ಚಿನ
52	ಕಕ್ಕೇನ	ಲ್ಯಾಲ	ಲ್ಯಾಲ
53	ದೇವಗಿರಿ	ನೆರಿಯ	ನೆರಿಯ
54	ಬೀಟಿಗೆ	ಚಾರ್ಮಾಡಿ	ಚಾರ್ಮಾಡಿ
55	ನೂಜಿ	ಇಳಂತಿಲ	ಇಳಂತಿಲ
56	ಮೊಗೆರಡ್ಕ ಕೊಳಾಲ	ವಡಂಗಡಿ	ಪಡಂಗಡಿ
57	ರಾಮನಗರ	ಬಳಂಜ	ನಾಲೂರು
58	ಮುಂಡೂರು ವಲ್ಕೆ	ಕೊಕ್ಕಡ	ಕೊಕ್ಕಡ
59	ಕೊನ್ನಾಜೆ	ಲ್ಯಾಲ	ಲ್ಯಾಲ
60	ಶಾಂತಿ ಪಲ್ಕೆ	ವೇಣೂರು	ವೇಣೂರು
61	ಓಡೀಲು	ಪಡಂಗಡಿ	ಪಡಂಗಡಿ
62	ಕೋಯನಗರ	ಇಂದಬೆಟ್ಟು	ಇಂದಬೆಟ್ಟು
63	ಮಸ್ಕದೊಟ್ಟು	ಅಂಡಿಂಜೆ	ಕೊಕ್ರಾಡಿ
64	ಕರ್ಲಾಡಿ	ಬಾರ್ಯ	ಪುತ್ತಿಲ
65	ಕುಂಟಿನಿ	ಕಳಿಯ	ಕಳಿಯ
66	ಪಾಲಾರಗೋಳಿ	ಮರೋಡಿ	ಮರೋಡಿ
67	ನೇರೊಲ್ದಪಲ್ಕೆ	ಬಂಡಾರು	ಬಂಡಾರು
68	ಕಲ್ಲೇರಿ ಕ್ವಾರ್ಟರ್ಸ್	ತಣ್ಣೀರುವಂಧ	ತಣ್ಣೀರುಪಂಧ
69	ಕೊಳ ಚಾಡ್ರಿ	ಅರಸಿನ ಮಕ್ಕಿ	ರೆಖ್ಯಾ
70	ವಾರಡ್ಕ	ಇಳಂತಿಲ	ಇಳಂತಿಲ
71	ಕುದ್ದು ಮೂಡಾರು	ನಿಡ್ಲೆ	ಕಳಂಜ
72	ಕನ್ಯಾಡಿ ಗುತ್ತು	ಮಿತ್ತಬಾಗಿಲು	ಮಿತ್ತಬಾಗಿಲು

73	ಹೂ ಹಾಕುವ ಕಲ್ಲು	ಕಣಿಯೂರು	ಕಣಿಯೂರು
74	ಹಳ್ಳಂಗೇರಿ	ಕೊಕ್ಕಡ	ಕೊಕ್ಕಡ
75	ಎರ್ಮಾಳ್	ಇಂದಬೆಟ್ಟು	ಇಂದಬೆಟ್ಟು
76	ನಾಯಿದ ಗುರಿ	ಅಳದಂಗಡಿ	ಸುಲ್ಲೇರಿ
77	ಶಿಶು ವಿಹಾರ	ಮಡಂತ್ಯಾರು	ಪಾರೆಂಕಿ
78	ಸೂರ್ಯತ್ತಾಡ್ಕ	ಪಟ್ರಮೆ	ಪಟ್ರಮೆ
79	ಪುತ್ತಿಗೆ	ಕೊಕ್ಕಡ	ಕೊಕ್ಕಡ
80	ಕಲ್ಲಾರಿ	ಮಚ್ಚಿನ	ಮಚ್ಚಿನ
81	ಇರ್ಮೆತ್ತೋಡಿ	ಶಿರ್ಲಾಲು	ಕರಂಬಾರು
82	ಕುತ್ತಾರು	ನಿಡ್ಲೆ	ಕಳಂಜ್
83	ಸಣ್ಲಾಲು	ಕೊಯ್ಯೂರು	ಕೊಯ್ಯೂರು
84	ಸಬಕಬ್ಬೆಲು	ಮಾಲಾಡಿ	ಸೋಣಂದೂರು
85	ದಾರೊಟ್ಟು	ನಿಟ್ಟಡೆ	ಕುಕ್ಕೇರಿ
86	ಮುಡಿಪಿರೆ	ಮಚ್ಚಿನ	ಮಚ್ಚಿನ
87	ತೆಂಕಾರು ಮಸೀದಿ	ತೆಂಕಾರು	ಬಾರ್ಯಾ
88	ಅಟ್ಲಾಜೆ	ಬಾಳಂಜೆ	ಬಾಳಂಜೆ

410 (503) ಶ್ರೀ ಪ್ರಬಾಕರ ಬಂಗೇರ ಕೆ ಎಂ ಎಲ್ ಎ (ಬೆಳ್ತಂಗಡಿ)

ಮಾನ್ಯ ಗೃಹ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ಗುರುವಾಯನ ಕೆರೆ ಅಗ್ನಿಶಾಮಕ ರಾಣೆ ಕಟ್ಟಡ ನಿರ್ಮಾಣ ಕಾಮಗಾರಿಯು ಇನ್ನೂ ಪೂರ್ಣಗೊಳ್ಳದಿರಲು ಕಾರಣಗಳೇನು ಹಾಗೂ ಅದನ್ನು ಯಾವಾಗ ಪೂರ್ಣಗೊಳಿಸಲಾಗುವುದು,

ಆ) ಅಗ್ನಿಶಾಮಕ ರಾಣೆಯ ಅವಶ್ಯಕತೆಯನ್ನು ಮನಗಂಡು ತ್ವರಿತಗತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಮುಂದಾಗುವುದೇ?

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕು ಗುರುವಾಯನ ಕೆರೆ ಎಂಬಲ್ಲಿ ಅಗ್ನಿಶಾಮಕ ರಾಣೆ ಕಟ್ಟಡದ ನಿರ್ಮಾಣ ಪೂರ್ಣಗೊಂಡಿರುತ್ತದೆ ಆದರೆ ಈ

ರಾಣೆಗೆ ಬೇಕಾದ ಸಂಪರ್ಕ ರಸ್ತೆ ಕಲ್ಪಿಸಲು ದಿನಾಂಕ 12 4 2006ರಂದು ರೂ 4 00 ಲಕ್ಷ ಹಾಗೂ ದಿನಾಂಕ 9 11 2006 ರಂದು ರೂ 1 15 ಲಕ್ಷ ಒಟ್ಟು ರೂ 5 15 ಲಕ್ಷಗಳನ್ನು ಲೋಕೋಪಯೋಗಿ ಇಲಾಖೆಗೆ ಪಾವತಿಸಲಾಗಿದೆ ಈ ಕಾಮಗಾರಿಯು ಪೂರ್ಣಗೊಂಡ ಕೂಡಲೇ ರಾಣೆಯನ್ನು ವಶಕ್ಕೆ ಪಡೆದು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುವುದು

411 (504) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಮಹಿಳಾ ಮತ್ತ ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07 ಮತ್ತು 2008ನೇ ಸಾಲಿಗೆ ಅನ್ವಯವಾಗುವ ಭಾಗ್ಯಲಕ್ಷ್ಮಿ ಯೋಜನೆ ಯನ್ವಯ ಸೌಲಭ್ಯವನ್ನು ಇಲ್ಲಿಯತನಕ ಎಷ್ಟು ಜನ ಫಲಾನುಭವಿಗಳಿಗೆ ನೀಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು),

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತ ಮಕ್ಕಳ ಕಲ್ಯಾಣ ಸಚಿವರು)

ಅ) ದಿನಾಂಕ 17 10 2006ರ ಆದೇಶದಲ್ಲಿ ಸೂಚಿಸಿರುವ ಮಾರ್ಗಸೂಚಿಗಳನ್ವಯ ರಾಜ್ಯದಲ್ಲಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಫಲಾನುಭವಿಗಳನ್ನು ಗುರುತಿಸಲಾಗುತ್ತದೆ 31 3 2006ರ ನಂತರ ಹುಟ್ಟಿದ ಅರ್ಹ ಹೆಣ್ಣುಮಗುವನ್ನು ಹುಟ್ಟಿದ ಒಂದು ವರ್ಷದೊಳಗೆ ಈ ಯೋಜನೆಯಡಿಯಲ್ಲಿ ದಾಖಲಿಸಬಹುದಾಗಿದೆ ದಿನಾಂಕ 31 12 006 ರವರೆಗೆ 1,11,313 ಫಲಾನುಭವಿಗಳನ್ನು ಗುರುತಿಸಲಾಗಿದೆ ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ ಸರ್ಕಾರವು ಈ ಯೋಜನೆಗೆ 2006–07 ಮತ್ತು 2007–08ನೇ ಸಾಲಿಗೆ ಅನ್ವಯಿಸಿ ಅನುಮೋದನೆ ನೀಡಿದೆ

ಈ ಯೋಜನೆ ಸಿಗುವ ಸೌಲಭ್ಯವನ್ನು ದಿನಾಂಕ 17 10 2006ರ ಆದೇಶದಲ್ಲಿ ವಿವರಿಸಿದೆ ಇದರಲ್ಲಿ ಮಗುವಿಗೆ ವೈದ್ಯಕೀಯ ಸೌಲಭ್ಯ ವಿದ್ಯಾಭ್ಯಾಸದ ಸಮಯದಲ್ಲಿ ವಿದ್ಯಾರ್ಥಿವೇತನಗಳು ಸಹ ಒಳಗೊಂಡಿದೆ ಹುಡುಗಿಗೆ 18 ವರ್ಷ ತುಂಬಿದ ನಂತರ ಯೋಜನೆಯ ಮುಕ್ತಾಯದ ಅವಧಿಯಲ್ಲಿ ಕೆಲವೊಂದು ಷರತ್ತುಗಳನ್ನು ಪೂರೈಸಿದ್ದಲ್ಲಿ ಅಂದರೆ ಅವಳು ಒಂದನೇ ತರಗತಿಯಿಂದ ಎಂಟನೇ ತರಗತಿಯವರೆಗೆ ಪಾಸಾಗಿದ್ದಲ್ಲಿ ಮತ್ತು ಅವಿವಾಹಿತಳಾಗಿದ್ದರೆ ಮಾತ್ರ ಅಂತಿಮ ಮೊತ್ತವನ್ನು ನೀಡಲಾಗುವುದು

1/4/06 ರಿಂದ 30/12/2006ರವರೆಗೆ ಹುಟ್ಟಿದ ಹೆಣ್ಣು ಮಕ್ಕಳ ವಿವರ

ಕ್ರಸಂ	ಜಿಲ್ಲೆ/ ತಾಲ್ಲೂಕು	ಜನಿಸಿದ ಒಟ್ಟು ಹೆಣ್ಣು ಮಕ್ಕಳು	ಬಿಪಿಎಲ್ ಕುಟುಂಬದಲ್ಲಿ ಜನಿಸಿದ ಹೆಣ್ಣು ಮಕ್ಕಳು
1	ಬಾಗಲಕೋಟೆ	11346	2897
2	ಬೆಂಗಳೂರು (ಗ್ರಾ)	6798	3942
3	ಬೆಂಗಳೂರು (ನಗರ)	20813	2161
4	ಬೆಳಗಾಂ	27497	7140
5	ಬಳ್ಳಾರಿ	10579	5887
6	ಬೀದರ್	9274	4757
7	ಬಿಜಾಪುರ	12890	6213
8	ಚಾಮರಾಜನಗರ	4452	3041
9	ಚಿಕ್ಕಮಗಳೂರು	3273	1193
10	ಚಿತ್ರದುರ್ಗ	8118	4259
11	ದಕ್ಷಿಣ ಕನ್ನಡ	6800	1645
12	ದಾವಣಗೆರೆ	9823	5792
13	ದಾರವಾಡ	6616	2974
14	ಗದಗ	7356	1939
15	ಗುಲ್ಬರ್ಗಾ	23440	14093
16	ಹಾಸನ	5613	1955
17	ಹಾವೇರಿ	7912	5571
18	ಕೊಡಗು	1875	634
19	ಕೋಲಾರ	8504	4980
20	ಕೊಪ್ಪಳ	7015	3368
21	ಮಂಡ್ಯ	7020	2258
22	ಮೈಸೂರು	9949	6168
23	ರಾಯಚೂರು	81200	2504

24	ಶಿವಮೊಗ್ಗ	5673	3481
25	ತುಮಕೂರು	10626	8119
26	ಉಡುಪಿ	4727	1848
27	ಉತ್ತರ ಕನ್ನಡ	5061	2515
	ಒಟ್ಟು	324250	111331

ವಿಷಯ ಹೆಣ್ಣು ಮಕ್ಕಳಿಗಾಗಿ "ಭಾಗ್ಯಲಕ್ಷ್ಮಿ" ಯೋಜನೆ ಅನುಷ್ಠಾನ –ಆದೇಶ

ಪ್ರಸ್ತಾವನೆ 2001ರ ಜನಗಣತಿಯ ಅನುಸಾರ ಕರ್ನಾಟಕದಲ್ಲಿ ಲಿಂಗ ಅನುಪಾತವು 1000 ಪುರುಷರಿಗೆ 964 ಹೆಂಗಸರಷ್ಟಿದೆ ಈ ಅನುವಾತವು ರಾಷ್ಟ್ರೀಯ ಸರಾಸರಿಗಿಂತ ಉತ್ತಮವಾಗಿದ್ದರೂ ಸಹ ಪ್ರಸ್ತುತ ಪರಿಸ್ಥಿತಿಯಲ್ಲಿ ಹೆಣ್ಣುಮಗುವಿನ ಸ್ಥಾನಮಾನಕ್ಕೆ ಹೆಚ್ಚಿನ ಮೌಲ್ಯ ಕಲ್ಪಿಸುವ ಬಗ್ಗೆ ಬಲವಾದ ವಾದವಿರುತ್ತದೆ ಗಂಡು ಸಂತತಿಗೆ ತೋರಲಾಗುವ ಉತ್ತೇಜನಕ್ಕೆ ಅನೇಕ ಸಾಮಾಜಿಕ ಆರ್ಥಿಕ ಕಾರಣಗಳಿದ್ದರೂ, ಇದು ಹೆಣ್ಣು ಮಕ್ಕಳ ಆರೋಗ್ಯ ಶಿಕ್ಷಣ, ಮೋಷಣೆ ಹಾಗೂ ಸರ್ವಾಂಗೀಣ ಅಭಿವೃದ್ಧಿಗೆ ಅಡಚಣೆಯಾಗಿದೆ

ರಾಜ್ಯ ಸರ್ಕಾರಕ್ಕೆ ಹೆಣ್ಣು ಮಗುವಿನ ಜನನದ ಬಗ್ಗೆ ಇರುವ ಕಾಳಜಿ ವ್ಯಕ್ತಪಡಿಸಲು ಹಾಗೂ ಹೆಣ್ಣು ಮಗುವಿನ ವಿರುದ್ಧ ಸಮಾಜದಲ್ಲಿರುವ ಧೋರಣೆಯನ್ನು ಬದಲಿಸಲು 2006–07ನೇ ಸಾಲಿನ ದಿನಾಂಕ 20–3–2006ರ ಆಯವ್ಯಯ ಭಾಷಣದಲ್ಲಿ ಹೆಣ್ಣುಮಕ್ಕಳ ರಕ್ಷಣೆಗೆ "ಭಾಗ್ಯಲಕ್ಷ್ಮಿ" ಎಂಬ ಹೊಸ ಕಲ್ಯಾಣ ಯೋಜನೆಯನ್ನು ಜಾರಿಗೆ ತರಲು ಈ ಕೆಳಕಂಡಂತೆ ಘೋಷಣೆ ಮಾಡಲಾಗಿದೆ

1 ದಿನಾಂಕ 31 3 2006ರ ನಂತರ ಹುಟ್ಟಿದ ಹೆಣ್ಣುಮಗುವಿನ ಹೆಸರಿನಲ್ಲಿ ರೂ 10,000–00 ಗಳ ರೇವಣಿ ಹೂಡುವುದು

2 ಆ ಹೆಣ್ಣುಮಗು ಬೆಳೆದು 18 ವರ್ಷದ ಪ್ರಾಯಕ್ಕೆ ಬಂದ ನಂತರ ರೇವಣಿ ಮತ್ತು ಅದರ ಬಡ್ಡಿಯನ್ನು ಆಕೆಗೆ ನೀಡಲಾಗುವುದು

3 ಇದಕ್ಕಾಗಿ 2006–07ನೇ ಸಾಲಿನಲ್ಲಿ ರೂ 234 00 ಕೋಟಿಗಳ ಅಂದಾಜು ಆಗುವ ಸಾಧ್ಯತೆ ಇದ್ದು, ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸಿದ ಎರಡು ಹೆಣ್ಣುಮಕ್ಕಳಿಗೆ ಮಾತ್ರ ಸೀಮಿತಗೊಳಿಸುವುದು

2006–07 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಕರ್ನಾಟಕ ರಾಜ್ಯದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಿ ಜಾರಿಗೆ ತರಲು ಆದೇಶ ಹೊರಡಿಸಬೇಕಾಗಿದೆ ಈ ಹಿಂದೆ ಅನುಷ್ಠಾನದಲ್ಲಿದ್ದ ಯೋಜನೆಗಳಲ್ಲಿನ ಲೋಪದೋಷಗಳನ್ನು ಎಚ್ಚರಿಕೆಯಿಂದ ಅಭ್ಯಸಿಸಿ, ಕೆಳಕಂಡ ಆದೇಶ ಹೊರಡಿಸಲಾಗಿದೆ

ಸರ್ಕಾರಿ ಆದೇಶ ಸಂಖ್ಯೆ ಮಮಇ 99 ಮಮಅ 2006, ಬೆಂಗಳೂರು,
ದಿನಾಂಕ 17 10 2006

ಕರ್ನಾಟಕ ಸರ್ಕಾರವು ಹೆಣ್ಣುಮಗುವಿನ ಸ್ಥಾನವನ್ನು ಕುಟುಂಬ ಹಾಗೂ ಸಮುದಾಯದಲ್ಲಿ ಹೆಚ್ಚಿಸಲು 'ಬಾಗ್ಯಲಕ್ಷ್ಮಿ" ಎಂಬ ವಿನೂತನ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಿದೆ ಯೋಜನೆಯ ವಿವರಗಳನ್ನು ಕೆಳಕಂಡಂತೆ ವಿವರಿಸಿದೆ

I ಯೋಜನೆಯ ಮುಖ್ಯ ಉದ್ದೇಶಗಳು

ಹೆಣ್ಣುಮಗುವನ್ನು ಆರ್ಥಿಕ ನೆರವಿನ ಮೂಲಕ ಸಬಲೀಕರಣಗೊಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶ ಮಗು ಜನಿಸಿದ ಒಂದು ತಿಂಗಳೊಳಗೆ ಅರ್ಜಿಯನ್ನು ಪಡೆದು ಈ ನೆರವನ್ನು ಮಗುವಿನ ತಾಯಿ ಅಥವಾ ತಾಯಿ/ತಂದೆ ಇಲ್ಲದ ಪಕ್ಷದಲ್ಲಿ ಪೋಷಕರ ಹೆಸರಿನಲ್ಲಿ ಕೆಲವೊಂದು ಷರತ್ತುಗಳನ್ನು ಪೂರೈಸಿದಲ್ಲಿ, ನೀಡಲಾಗುವುದು

II ಯೋಜನೆ

1 ಭಾಗ್ಯಲಕ್ಷ್ಮಿ ಯೋಜನೆಯನ್ನು ಸರ್ಕಾರವು ಆಗಿಂದಾಗ್ಗೆ ತಿದ್ದುಪಡಿ ಮಾಡುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000ರಡಿ ಆಯ್ಕೆ ಮಾಡಿದ ಹಣಕಾಸು ಸಂಸ್ಥೆಯ ಸಹಭಾಗಿತ್ವದೊಡನೆ ಅನುಷ್ಠಾನಗೊಳಿಸಲಾಗುವುದು

2 ಯೋಜನೆಯು 2—6–07 ಮತ್ತು 2007–08ನೇ ಸಾಲಿನಲ್ಲಿ ಚಾಲ್ತಿಯಲ್ಲಿರುತ್ತದೆ ಮತ್ತು ಒಂದು ವರ್ಷದ ನಂತರ ಯೋಜನೆಯನ್ನು ಪರಾಮರ್ಶೆ ಮಾಡಿ ಯಾವುದಾದರೂ ಬದಲಾವಣೆಗಳು ಅಗತ್ಯವಿರುತ್ತವೆಯೇ ಎಂಬುದನ್ನು ಪರಿಶೀಲಿಸಿ ಯೋಜನೆಯನ್ನು ಮುಂದುವರಿಸುವುದನ್ನು ನಿರ್ಧರಿಸಲಾಗುವುದು

3 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ದಿನಾಂಕ 31 3 2006ರ ನಂತರ ಜನಿಸಿದ ಹೆಣ್ಣು ಮಕ್ಕಳನ್ನು ಭಾಗ್ಯಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳನ್ನಾಗಿ ದಾಖಲಿಸಿಕೊಳ್ಳಲಾಗುವುದು ಹೆಸರು ನೋಂದಾಯಿಸಲು ಮಗುವಿನ ಜನನ ಪ್ರಮಾಣ ಪತ್ರ ಒದಗಿಸಿದಲ್ಲಿ ಮಗುವು ಜನಿಸಿದ ದಿನಾಂಕದಿಂದ ಒಂದು ವರ್ಷದವರೆಗೆ ಕಾಲಾವಕಾಶ ನೀಡಲಾಗುವುದು

4 ಯೋಜನೆಯ ಸೌಲಭ್ಯಗಳನ್ನು ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬದ ಇಬ್ಬರು ಹೆಣ್ಣುಮಕ್ಕಳಿಗೆ ಸೀಮಿತಗೊಳಿಸಲಾಗಿದೆ ಫಲಾನುಭವಿ ಹೆಣ್ಣುಮಗುವಿನ ತಂದೆ ಅಥವಾ ತಾಯಿ ಶಾಶ್ವತ ಕುಟುಂಬ ಯೋಜನೆಯನ್ನು ಅಳವಡಿಸಿಕೊಂಡಿರತಕ್ಕದ್ದು ಮತ್ತು ಕುಟುಂಬದಲ್ಲಿನ ಮಕ್ಕಳ ಸಂಖ್ಯೆ 3ಕ್ಕಿಂತ ಹೆಚ್ಚಿಗೆ ಇರಬಾರದು

5 ಹೆಣ್ಣುಮಗು ಫಲಾನುಭವಿ ಎಂದು ನೊಂದಣಿಯಾದ ನಂತರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಪೂರ್ಣ ದೃಢೀಕರಣದ ನಂತರ ಪ್ರತಿ ಫಲಾನುಭವಿಗೆ ರೂ 10,000/- ಗಳನ್ನು ಆಯ್ಕೆಯಾದ ಪಾಲುದಾರ ಹಣಕಾಸು ಸಂಸ್ಥೆಯಲ್ಲಿ ನಿಶ್ಚಿತ ರೇವಣಿಯನ್ನು ಇಡುವುದು

6 ಪಾಲುದಾರ ಹಣಕಾಸು ಸಂಸ್ಥೆಯು ಹೆಣ್ಣುಮಗುವಿನ ಹೆಸರಿನಲ್ಲಿ ಇಟ್ಟ ರೂ 10,000/- ಗಳ ರೇವಣಿಯ ಮೇಲಿನ ಆದಾಯವನ್ನು ಗರಿಷ್ಠಗೊಳಿಸಿ, ರೇವಣಿ ಹಣವನ್ನು ಬಡ್ಡಿ ಸಮೇತವಾಗಿ ಫಲಾನುಭವಿಗೆ 18 ವರ್ಷಗಳು ಪೂರ್ಣಗೊಂಡನಂತರ ದೊರಕಿಸಿಕೊಡುತ್ತೇನೆ

7 ಯೋಜನೆಯನ್ನು ಕಂಡಿಕೆ VI ರಲ್ಲಿ ತಿಳಿಸಿರುವಂತೆ ವಿವಿಧ ಸರ್ಕಾರಿ ಇಲಾಖೆಗಳ ಸಹಾಯದೊಂದಿಗೆ ಅನುಷ್ಠಾನಗೊಳಿಸಲಾಗುವುದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನೋಡಲ್ ಇಲಾಖೆಯಾಗಿದ್ದು, ಯೋಜನೆಯ ಅನುಷ್ಠಾನಕ್ಕಾಗಿ ಸಂಪೂರ್ಣ ಗಣಕೀಕೃತ ಆಡಳಿತ ವ್ಯವಸ್ಥೆಯನ್ನು ಅಳವಡಿಸುವ ಆಯ್ಕೆಯಾದ ಪಾಲುದಾರ ಹಣಕಾಸು ಸಂಸ್ಥೆಯ ಸಹಯೋಗದಿಂದ ಅನುಷ್ಠಾನಗೊಳಿಸುವುದು

8 ಯೋಜನೆಯ ಅನುಷ್ಠಾನದ ಆಡಳಿತ ವೆಚ್ಚವನ್ನು ಪ್ರತ್ಯೇಕವಾಗಿ ಭರಿಸಲಾಗುವುದು

9 ಫಲಾನುಭವಿಗೆ ವಿದ್ಯಾರ್ಥಿ ವೇತನ, ವಿಮೆ ಸೌಲಭ್ಯ ಮುಂತಾದ ಮಧ್ಯಂತರ ಸಂದಾಯಗಳನ್ನು ಕೆಳಗಿನ ಕಂಡಿಕೆ III ರಲ್ಲಿ ತಿಳಿಸಿರುವ ಅರ್ಹತೆ ಮಾನದಂಡಗಳನ್ನು ಪೂರೈಸಿದಲ್ಲಿ ನೀಡಲಾಗುವುದು

ವ್ಯಾಸಂಗ ವೇತನದ ವಿವರಗಳು ಈ ಕೆಳಗಿನಂತಿರುತ್ತವೆ

ತರಗತಿ	ವಾರ್ಷಿಕ ವಿದ್ಯಾರ್ಥಿವೇತನದ ಮೊತ್ತ ರೂ ಗಳಲ್ಲಿ
1ನೇ ರಿಂದ 3ನೇ	ಪ್ರತಿ ತರಗತಿಗೆ ವಾರ್ಷಿಕ 300/-
4ನೇ	ವಾರ್ಷಿಕ 500/-
5ನೇ	ವಾರ್ಷಿಕ 600/-
6 ರಿಂದ 7ನೇ	ವಾರ್ಷಿಕ 700/-
8ನೇ	ವಾರ್ಷಿಕ 800/-
9ರಿಂದ 10ನೇ	ವಾರ್ಷಿಕ 1000/-

10 ಫಲಾನುಭವಿಯ ತಂದೆ ತಾಯಿ ಹೆಣ್ಣುಮಗು ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸುವುದನ್ನು ಖಚಿತಪಡಿಸಬೇಕು ಮತ್ತು ವಿದ್ಯಾರ್ಥಿ ವೇತನವನ್ನು ಪಡೆಯುವುದಕ್ಕೆ ಅರ್ಹತೆ ಹೊಂದಲು ಪ್ರತಿ ತರಗತಿಯಲ್ಲಿಯೂ ವರ್ಷದಿಂದ ವರ್ಷಕ್ಕೆ ತೇರ್ಗಡೆ ಹೊಂದಬೇಕು ಅಲ್ಲದೇ 18ನೇ ವರ್ಷದ ವಯೋಮಾನಕ್ಕೆ ಮುಂಚಿತವಾಗಿ ವಿವಾಹವಾಗಬಾರದು ಒಂದು ವೇಳೆ ಈ ಅವಧಿಯ ಒಳಗೆ ವಿವಾಹವಾಗಿದ್ದು ಕಂಡುಬಂದಲ್ಲಿ ಅಂತಿಮ ಸೌಲಭ್ಯಗಳನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳುವುದು

11 ಫಲಾನುಭವಿಗೆ ನಿಗಧಿಯಾಗಿ ಯಾವುದೇ ಕಾರಣದಿಂದ ಆಕೆಗೆ ವಿತರಣೆಯಾಗದೆ ಉಳಿದ ಹಣವು ಮರಳಿ ಸರ್ಕಾರಕ್ಕೆ ಬಡ್ಡಿ ಸಮೇತ ಜಮೆಯಾಗುವುದು

III ಅರ್ಹತೆಯ ಮಾನದಂಡ

1 ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಗುರುತಿಸಿ, ಕಡ್ಡಾಯ ಗುರುತಿನ ಚೀಟಿ ಹೊಂದಿರುವ ಬಡತನ ರೇಖೆಗಿಂತ ಕೆಳಗಿನ ಕುಟುಂಬ

2 ಕುಟುಂಬದ ಎರಡು ಹೆಣ್ಣುಮಕ್ಕಳು ಮಾತ್ರ ಈ ಸೌಲಭ್ಯವನ್ನು ಪಡೆಯಲು ಸೀಮಿತಗೊಳಿಸಲಾಗಿದೆ ಈ ಕುಟುಂಬವು ಮಗುವಿನ ತಾಯಿ ಅಥವಾ ತಂದೆ ಯಾರಾದರೊಬ್ಬರು ಶಾಶ್ವತ ಕುಟುಂಬ ಯೋಜನೆಯ ಪದ್ಧತಿಯನ್ನು ಅಳವಡಿಸಿಕೊಂಡಿದ್ದು, ಒಟ್ಟು ಮೂರು ಮಕ್ಕಳನ್ನು ಮೀರಿರಕೂಡದು

(ಸೂಚನೆ ಬಹುಪತಿ ಪತ್ನಿಯರನ್ನು ಹೊಂದಿದ್ದರೂ ಎರಡು ಮಕ್ಕಳು ಮಾತ್ರ ಈ ಯೋಜನೆ ಸೌಲಭ್ಯಕ್ಕೆ ಅರ್ಹರಾಗುತ್ತಾರೆ ದೇವದಾಸಿಯರ ಮಕ್ಕಳು ಈ ಯೋಜನೆಗೆ ಅರ್ಹರಿರುತ್ತಾರೆ)

3 ಈ ಯೋಜನೆಯನ್ನು ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲೂ ಅನುಷ್ಠಾನಗೊಳಿಸಲಾಗುವುದು

4 ಅಂಗನವಾಡಿಗಳಿರುವ ಪ್ರದೇಶಗಳಲ್ಲಿ ಈ ಯೋಜನೆ ಅಡಿಯಲ್ಲಿ ದಾಖಲಾದ ಹೆಣ್ಣುಮಗುವು ಕೆಳಕಂಡ ಮಾನದಂಡಗಳನ್ನು ಪೂರೈಸಬೇಕು

ಅ) ಆರೋಗ್ಯ ಇಲಾಖೆಯಿಂದ ಮಗುವಿಗೆ ರೋಗ ನಿರೋಧಕ ಲಸಿಕೆ ಹಾಕಿಸಬೇಕು

ಆ) 0–6 ವರ್ಷದವರೆವಿಗೆ ನಿರಂತರವಾಗಿ ಅಂಗನವಾಡಿ ಕೇಂದ್ರಕ್ಕೆ ಹಾಜರಾಗಬೇಕು

ಇ) ಶಿಕ್ಷಣ ಇಲಾಖೆಯಿಂದ ಅಂಗೀಕರಿಸಲ್ಪಟ್ಟ ಶಾಲೆಗಳಲ್ಲಿ ದಾಖಲಿಸಬೇಕು ಆ ಇಲಾಖೆಯಿಂದ ಕಾಲ ಕಾಲಕ್ಕೆ ನೀಡುವ ಶೈಕ್ಷಣಿಕ ಸಹಾಯಕ್ಕೆ ಅರ್ಹಳಾಗುತ್ತಾಳೆ ನಿರಂತರಂವಾಗಿ ಶಾಲೆಗೆ ಹಾಜರಾಗುತ್ತಿರುವ ಬಗ್ಗೆ ಶಾಲೆಯ ಪ್ರಾಧಿಕಾರದಿಂದ ದಾಖಲಿಸಿರಬೇಕು

ಈ) ಒಂದನೇ ತರಗತಿಯಿಂದ ತೇರ್ಗಡೆ ಹೊಂದಿ ಕನಿಷ್ಠ ಎಂಟನೇ ತರಗತಿಯವರೆಗೆ ವ್ಯಾಸಂಗ ಮಾಡಿದಲ್ಲಿ ಅಂತಿಮವಾಗಿ

ಅನುತ್ತೀರ್ಣಳಾದ ವರ್ಷದಲ್ಲಿ, ವಿದ್ಯಾರ್ಥಿ ವೇತನಕ್ಕೆ ಅರ್ಹಳಾಗಿರುವುದಿಲ್ಲ

ಉ) ಬಾಲಕಾರ್ಮಿಕ ನಿಷೇಧ ಕಾಯ್ದೆ 1986ರಂತೆ ಬಾಲಕಾರ್ಮಿಕಳಾಗಿರತಕ್ಕದ್ದಲ್ಲ

ಊ) 18 ವರ್ಷ ಪೂರೈಸುವ ಮೊದಲು ವಿವಾಹವಾಗತಕ್ಕದ್ದಲ್ಲ ಈ ಅವಧಿಯೊಳಗೆ ಕಂಡುಬಂದಲ್ಲಿ ಅರ್ಹ ಮೊಬಲಗನ್ನು ಸಂದಾಯ ಮಾಡಲಾಗುವುದಿಲ್ಲ

ಋ) ಆಯ್ಕೆಯಾದ ಫಲಾನುಭವಿಯು ಮೇಲೆ ತಿಳಿಸಿದ ಅರ್ಹತೆಯ ಮಾನದಂಡಗಳಲ್ಲಿನ ಒಂದು ಆರ್ಥಿಕ ಅದಕ್ಕೂ ಹೆಚ್ಚಿನ ಷರತ್ತುಗಳನ್ನು ಪೂರೈಸದಿದ್ದಲ್ಲಿ ಸೌಲಭ್ಯ ನೀಡುವುದನ್ನು ತತ್‌ಕ್ಷಣದಿಂದ ರದ್ದುಪಡಿಸಲಾಗುವುದು

IV ಫಲಾನುಭವಿಗಳನ್ನು ಗುರುತಿಸುವಿಕೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಫಲಾನುಭವಿಗಳನ್ನು ಅಂಗನವಾಡಿ ಕಾರ್ಯಕತೆಯರ ಮುಖಾಂತರ ಗುರುತಿಸುತ್ತಾರೆ ಇದಕ್ಕೆ ಸಂಬಂಧಿಸಿದ ಅರ್ಜಿಯನ್ನು ತಂದೆ–ತಾಯಿ ಅಥವಾ ಪೋಷಕರಿಂದ ಪಡೆದು ಸಂಬಂಧಪಟ್ಟ ಪ್ರಾಧಿಕಾರಗಳಿಂದ ಪಡೆದ ಜನನ ಪ್ರಮಾಣ ಪತ್ರ ಹಾಗೂ ಬಡತನ ರೇಖೆಗಿಂತ ಕೆಳಗಿರುವ ಕುಟುಂಬವೇ ಎಂಬ ಬಗ್ಗೆ

ಋ) ಗುರುತಿಸಿದ ಫಲಾನುಭವಿಗೆ ರೂ 10000–00 ರೇವಣಿ ಇಡುವ ವ್ಯವಸ್ಥೆ ಮಾಡುವುದು

ಎ) 0–6 ವರ್ಷದವರೆಗೆ ಮಗುವಿನ ಬೆಳವಣಿಗೆಯನ್ನು ಪರಿಶೀಲಿಸುವುದು

ಏ) ಶಿಶುಮರಣ, ತಾಯಂದಿರ ಮರಣ, ಬಾಲ್ಯ ವಿವಾಹ, ಹೆಣ್ಣುಮಗುವಿನ ಅನಕ್ಷರತೆ, ಶಾಲೆಯಿಂದ ಹೊರಗುಳಿದ ಮಕ್ಕಳು, ಬಡತನ ಮಟ್ಟದಲ್ಲಿ ಸುಧಾರಣೆ ಇವುಗಳ ಬಗ್ಗೆ ವಿವರಗಳನ್ನು ಇಡುವುದು ಮತ್ತು ಇವುಗಳ ಸುಧಾರಣೆಗಾಗಿ ಅಗತ್ಯ ಕ್ರಮ ವಹಿಸುವುದು

ವಹಿಸುವುದು

ಐ) ಅಂಗನವಾಡಿ ಕಾರ್ಯಕರ್ತೆ ಫಲಾನುಭವಿಯ ಆರೋಗ್ಯದ ಬಗ್ಗೆ, ರೋಗ ನಿರೋಧಕ ಚುಚ್ಚುಮದ್ದು ಹಾಗೂ ಪೌಷ್ಟಿಕಾಂಶದ ಬಗ್ಗೆ ನಿರ್ವಹಿಸಿರುವ ಶಾಲೆಗಳನ್ನು ಪರಿಶೀಲಿಸಿ ಕೇಂದ್ರಿಯ ಮಾಹಿತಿ ಕೇಂದ್ರ ದಲ್ಲಿ ಗಣಕೀಕರಣಗೊಳಿಸಬೇಕು

2 ಕಂದಾಯ ಇಲಾಖೆ

ಫಲಾನುಭವಿಯು ಜನನದ, ಮರಣದ ಹಾಗೂ ವಿವಾಹದ ವಿವರಗಳನ್ನು ದಾಖಲಿಸಬೇಕು

3 ಯೋಜನಾ ಇಲಾಖೆ

1 ಮಾನವ ಸಂಪನ್ಮೂಲ ಕ್ರೋಢೀಕರಣ–ಈ ಯೋಜನೆಯ ಆಗು–ಹೋಗುಗಳು ಪ್ರಗತಿಯ ಫಲಿತಾಂಶದ ಬಗ್ಗೆ ಸಲಹೆ ನೀಡುವುದು/

4 ನಗರಾಭಿವೃದ್ಧಿ ಇಲಾಖೆ

1 ರಾಜ್ಯದ ಮಹಾನಗರ ಪಾಲಿಕೆ/ನಗರ ಸಭೆ ವ್ಯಾಪ್ತಿಯಲ್ಲಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಲ್ಲಿ ಜನಿಸುವ ಹೆಣ್ಣು ಮಕ್ಕಳನ್ನು ಗುರುತಿಸಲು ಸಹಾಯ ಮಾಡುವುದು

2 ಈ ಯೋಜನೆಯಡಿ ಫಲಾನುಭವಿಗಳನ್ನು ನೋಂದಾಯಿಸಲು ಅರ್ಜಿಗಳನ್ನು ಪಡೆದು ದಾಖಲೆ ಪರಿಶೀಲಿಸಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಹಾಯಕ ನಿರ್ದೇಶಕರು/ಉಪ ನಿರ್ದೇಶಕರಿಗೆ ರವಾನಿಸುವುದು

5 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

1 ಅಂಗನವಾಡಿ ಕೇಂದ್ರಗಳು ಇಲ್ಲದ ಸ್ಥಳಗಳಲ್ಲಿ ಗ್ರಾಮೀಣ ಪ್ರದೇಶ/ಗುಡ್ಡಗಾಡು ಪ್ರದೇಶಗಳಲ್ಲಿ ಭಾಗ್ಯಲಕ್ಷ್ಮಿ ಯೋಜನೆಗೆ ಅರ್ಹ ಫಲಾನುಭವಿಗಳು ಲಭ್ಯವಿದ್ದಲ್ಲಿ ಗುರುತಿಸಿ ನೋಂದಾಯಿಸಲು ಕ್ರಮ ವಹಿಸುವುದು

2 ಈ ಕುಟುಂಬಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸೌಲಭ್ಯ ನೀಡಲು ಆಧ್ಯತೆ ನೀಡುವುದು

6 **ಆರೋಗ್ಯ ಇಲಾಖೆ**

1 ಜನನಿ ಸುರಕ್ಷ ಯೋಜನೆಯಡಿ ಸೌಲಭ್ಯ ನೀಡುವ ಎಲ್ಲಾ ಅರ್ಹ ಫಲಾನುಭವಿಗಳನ್ನು ಭಾಗ್ಯಲಕ್ಷ್ಮೀ ಯೋಜನೆಯ ಸೌಲಭ್ಯ ಪಡೆಯಲು ಪ್ರೇರೇಪಿಸಬೇಕು

2 ಹೆಣ್ಣು ಮಗುವಿನ ಜನನದಿಂದ 18 ವರ್ಷಗಳವರೆಗೆ ಮಗುವಿನ ಆರೋಗ್ಯವನ್ನು ಚುಚ್ಚುಮದ್ದು ಹಾಗೂ ಅನಾರೋಗ್ಯ ಒಳಗೊಂಡಂತೆ ಉಸ್ತುವಾರಿ ಮಾಡುವುದು

3 ಫಲಾನುಭವಿ ಮತ್ತು ಫಲಾನುಭವಿಯ ತಂದೆ-ತಾಯಿಯವರಿಗೆ ಆರೋಗ್ಯ ವಿಮೆ ಸೌಲಭ್ಯಗಳನ್ನು ಅನುಷ್ಠಾನಗೊಳಿಸುವುದು

7 **ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ**

ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ನಾಶವಾಗದಂತಹ (Tamper Proof) ಗುರುತಿನ ಚೀಟಿಗಳನ್ನು ಒದಗಿಸಬೇಕು

1 ಫಲಾನುಭವಿಗಳನ್ನು ದಾಖಲಿಸುವ ಆಧಾರದ ಮೇಲೆ ಕಾಲ ಕಾಲಕ್ಕೆ ಹಣವನ್ನು ಒದಗಿಸಬೇಕು

2 ಯೋಜನೆಯನ್ನು ಸಮರ್ಪಕವಾಗಿ ಮತ್ತು ದೀರ್ಘಕಾಲದ ಪೂರ್ಣಾವಧಿಗೆ ನಡೆಸುವಂತಹ ಸಮರ್ಥ ಪಾಲುದಾರ ಹಣಕಾಸು ಸಂಸ್ಥೆಯನ್ನು ಗುರುತಿಸಲು ಸಹಾಯ ಮಾಡುವುದು

3 ಪಾಲುದಾರ ಹಣಕಾಸು ಸಂಸ್ಥೆಯ ಕಾರ್ಯವನ್ನು ನಿಯತಕಾಲಿಕವಾಗಿ ಪರಿಶೀಲನೆಗೆ ಒಳಪಡಿಸುವುದು ಹಾಗೂ ಕಾರ್ಯವನ್ನು ನಿಯತಕಾಲಿಕವಾಗಿ ಪರಿಶೀಲನೆಗೆ ಒಳಪಡಿಸುವುದು ಹಾಗೂ ಇಟ್ಟಿರುವ ರೇವಣಿಯ ಹಣದ ಗರಿಷ್ಠತೆ ಹಾಗೂ ಸುರಕ್ಷತೆಯನ್ನು ಹೊಂದಿರುವ ಬಗ್ಗೆ

4 ಪಾಲುದಾರ ಹಣಕಾಸು ಸಂಸ್ಥೆಗೆ ಆಡಳಿತಾತ್ಮಕ ವೆಚ್ಚಗಳಿಗಾಗಿ ನೀಡಿದ ಹಣದ ಖರ್ಚು ವೆಚ್ಚದ ಬಗ್ಗೆ ಲೆಕ್ಕ ತಪಾಸಣೆ ನಡೆಸುವುದು

9 **ಇ-ಆಡಳಿತ**

1 ಗಣಕೀಕರಣ ವ್ಯವಸ್ಥೆಯನ್ನು ಕಾಲ ಕಾಲಕ್ಕೆ ಲೆಕ್ಕ ತಪಾಸಣೆಗೊಳಪಡಿಸಿ ಯೋಜನೆಯ ಅನುಷ್ಠಾನದಲ್ಲಿ

2 ಭಾಗ್ಯಲಕ್ಷ್ಮಿ ಯೋಜನೆಯ ಅನುಷ್ಠಾನದಲ್ಲಿ ಜವಾಬ್ದಾರಿ ವಹಿಸಿಕೊಳ್ಳುತ್ತಿರುವ ಪ್ರತಿ ಇಲಾಖೆಗೂ, ಈ ಯೋಜನೆಯಡಿ ಆ ಇಲಾಖೆ ನಿರ್ವಹಿಸಬೇಕಾಗಿರುವ ಪಾತ್ರ ಮತ್ತು ಜವಾಬ್ದಾರಿಯನ್ನು ಗಣನೆಗೆ ತೆಗೆದುಕೊಂಡು, ಅದಕ್ಕನುಗುಣವಾಗಿ ಹೂಡುವಳಿ, ವರದಿ ನಮೂನೆಗಳು ಮತ್ತು ದತ್ತಾಂಶಗಳ ವಿನ್ಯಾಸ ರೂಪಿಸಬೇಕು

3 ಹೋಬಳಿ ಕೇಂದ್ರಗಳಲ್ಲಿ ಸ್ಥಾಪಿಸಲಾಗುವ ನೆಮ್ಮದಿ ಕೇಂದ್ರಗಳ ಮುಖಾಂತರ ವಿವಿಧ ಗ್ರಾಮಗಳಲ್ಲಿನ ಫಲಾನುಭವಿ/ತಂದೆ ತಾಯಿಯರ ಮಾಹಿತಿಗಳನ್ನು ಪಡೆಯಲು ಸಹಾಯ ಮಾಡುವುದು ಮತ್ತು ಸದರಿ ಮಾಹಿತಿಗಳನ್ನು ಸಂಬಂಧಿಸಿದ ಇಲಾಖೆಗಳ ಕೇಂದ್ರೀಕೃತ ಮಾಹಿತಿ ಕೇಂದ್ರಗಳಿಗೆ ವರ್ಗಾಯಿಸಲು, ವ್ಯವಸ್ಥೆ ಮಾಡುವುದು

10 ಶಿಕ್ಷಣ ಇಲಾಖೆ

1 ವಿದ್ಯಾರ್ಥಿ ವೇತನ ಪಾವತಿಸಲು ಹೆಣ್ಣುಮಗುವು 6 ರಿಂದ 18 ವರ್ಷದವರೆಗೆ ಶಾಲೆಯಲ್ಲಿ ವ್ಯಾಸಂಗ ಮಾಡುವ ಅವಧಿಯಲ್ಲಿನ ಪ್ರಗತಿಯನ್ನು ಪರಿಶೀಲಿಸುವುದು

VII ಇತರ ಆಡಳಿತಾತ್ಮಕ ಕ್ರಮಗಳು

1 ಫಲಾನುಭವಿಯನ್ನು ಗುರುತಿಸಿ ನೋಂದಾಯಿಸಿಕೊಳ್ಳುವ ಹಾಗೂ ಪ್ರಗತಿ ಪರಿಶೀಲನೆ ಮಾಡುವ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹೆಯಾನ ರೂ 25/-ಗಳ ಪ್ರೋತ್ಸಾಹ ಧನ ನೀಡಲಾಗುವುದು

2 ಯೋಜನೆಯ ಅನುಷ್ಠಾನದ ಆಡಳಿತಾತ್ಮಕ ಹೊಣೆಯು ಭಾಗಶಃ ಹಣಕಾಸು ಸಂಸ್ಥೆಯದಾಗಿದ್ದು, ಮತ್ತು ಭಾಗಶಃ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶನಾಲಯ ಹಾಗೂ ಸಚಿವಾಲಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯದಾಗಿರುವುದರಿಂದ, ಇದಕ್ಕಾಗಿ ಪ್ರತ್ಯೇಕವಾಗಿ, ಶೇಕಡ 2ರಷ್ಟು ಅಥವಾ ರೂ ನಾಲ್ಕು ಕೋಟಿ, ಯಾವುದು ಕಡಿಮೆಯೋ ಅದನ್ನು ಆಡಳಿತಾತ್ಮಕ ವೆಚ್ಚಗಳಿಗಾಗಿ ಹಂಚಿಕೆ ಮಾಡಲಾಗುವುದು

3 ಈ ಯೋಜನೆಯನ್ನು ರಾಜ್ಯ ವಲಯದಲ್ಲಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ನಿರ್ದೇಶಕರು ಆಯ್ಕೆಯಾದ ಪಾಲುದಾರ ಹಣಕಾಸು ಸಂಸ್ಥೆಯ ಮುಖಾಂತರ ಮೇಲೆ ತಿಳಿಸಿರುವ ಇಲಾಖೆಗಳ ಸಹಕಾರ ದೊಂದಿಗೆ ಅನುಷ್ಠಾನಗೊಳಿಸುತ್ತಾರೆ

4 ಫಲಾನುಭವಿ ಹೆಣ್ಣುಮಕ್ಕಳ ಜನನದ ರಿಜಿಸ್ಟ್ರೇಷನ್ ಬಗ್ಗೆ ಕ್ರೋಢಿಕೃತ ಮಾಹಿತಿ ಸರ್ಕಾರಕ್ಕೆ ಒದಗಿಸಿದ ನಂತರ ಅನುದಾನದವನ್ನು ಹಂತಹಂತವಾಗಿ ಬಿಡುಗಡೆ ಮಾಡಲಾಗುವುದು

5 ಈ ಯೋಜನೆಯಡಿ ನಿಶ್ಚಿತ ರೇವಣಿ ಹೂಡಲು ಅರ್ಜಿ ಮುಚ್ಚಳಿಕೆ ಪ್ರಮಾಣ, ಪತ್ರ, ಮೇಲ್ವಿಚಾರಕಿಯರ, ಧೃಢೀಕರಣ ಪತ್ರ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಶಿಫಾರಸ್ಸು ಪತ್ರ ಸಹಾಯಕ /ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಛೇರಿ ಇವರ ನಡವಳಿ (ಮಂಜೂರಾತಿ ಆದೇಶ) ಫ್ಲೋ ಚಾರ್ಟ್ ಇವುಗಳ ಮಾದರಿಯನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ನಮೂನೆ 1 ರಿಂದ 6 ರಲ್ಲಿ ನೀಡಲಾಗಿದೆ

6 ಹಣಕಾಸು ಸಂಸ್ಥೆಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೊಂದಿಗೆ ನಿಯತಕಾಲಿಕವಾಗಿ ಹೊಂದಾಣಿಕೆ ಮಾಡಿಕೊಂಡು ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು ವಿತರಣೆಯಾಗದ ಎಲ್ಲಾ ಮೊತ್ತವು ಸರ್ಕಾರಕ್ಕೆ ಪ್ರಾಪ್ತವಾಗುವುದು

7 ಈ ಯೋಜನೆಯ ವೆಚ್ಚವನ್ನು ಲೆಕ್ಕಶೀರ್ಷಿಕೆ 2235–02–102–0–25–100 (ಯೋಜನೆ) ಧನಸಹಾಯ/ಪರಿಹಾರ ಇದರಡಿ ಭರಿಸತಕ್ಕದ್ದು

ಈ ಆದೇಶವನ್ನು ಯೋಜನಾ ಇಲಾಖೆ ಮತ್ತು ಆರ್ಥಿಕ ಇಲಾಖೆಗಳು ಅನಧಿಕೃತ ಟಿಪ್ಪಣಿ ಸಂಖ್ಯೆ ಕ್ರಮವಾಗಿ ಮತ್ತು ದಿ 15 9 2006ರಲ್ಲಿ ನೀಡಿರುವ

ಸಹಮತಿ ಹಾಗೂ ದಿ 23 9 2006ರಂದು ನಡೆದ ಅಧಿಕಾರಯುಕ್ತ ಸಮಿತಿ ಅನುಮೋದನೆ ಮೇರೆಗೆ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ರಂಜಿನಿ ಶ್ರೀಕುಮಾರ್
ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ನಮೂನೆ-1

ಭಾಗ್ಯಲಕ್ಷ್ಮಿ ಯೋಜನೆ

ನೊಂದಾವಣೆ ಅರ್ಜಿ

ಮಗುವಿನೊಂದಿಗಿರುವ ಪೋಷಕರ ಭಾವಚಿತ್ರ

1	ಮಗುವಿನ ಹೆಸರು	
2	ಜನನ ಪ್ರಮಾಣ ಪತ್ರದಂತೆ ಜನ್ಮ ದಿನಾಂಕ(ಮಹಾನಗರ/ನಗರ ಸಭೆ/ಪುರ ಸಭೆ/ಗ್ರಾಮ ಲೆಕ್ಕಿಗರಿಂದ ಪಡೆದಿರಬೇಕು)	
3	ತಾಯಿಯ ಹೆಸರು	
4	ತಂದೆ ಹೆಸರು	
5	ವಿಳಾಸ	
6	(ಅ) ತಾಯಿಯ ಉದ್ಯೋಗ (ಆ) ತಂದೆಯ ಉದ್ಯೋಗ	
7	ಕುಟುಂಬದ ವಾರ್ಷಿಕ ಆದಾಯ	
8	(ಅ) ಕುಟುಂಬದಲ್ಲಿರುವ ಮಕ್ಕಳ ಸಂಖ್ಯೆ (ಆ) ಈಗ ಸೌಲಭ್ಯ, ಪಡೆಯುತ್ತಿರುವ ಹೆಣ್ಣು ಮಗು ಕುಟುಂಬದಲ್ಲಿ ಎಷ್ಟನೆಯದು	

9	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರರು	
10	ಬಡತನ ರೇಖೆಗಿಂತ ಕೆಳಗಿರುವ ಕುಟುಂಬವೆಂದು ಘೋಷಣೆ ಸಂಖ್ಯೆ (ಘೋಷಣೆ ಪ್ರತಿ/ಪಡಿತರ ಚೀಟಿಯ ಪ್ರತಿ ಲಗತ್ತಿಸುವುದು)	
11	ಮಗು ರೋಗನಿರೋಧಕ ಚುಚ್ಚುಮದ್ದು ಪಡೆದಿದೆಯೋ? ಪಡೆದಿದ್ದಲ್ಲಿ ಚುಚ್ಚುಮದ್ದು ಕಾರ್ಡಿನ ಪ್ರತಿ ಲಗತ್ತಿಸುವುದು	

ಸ್ಥಳ
ಅರ್ಜಿದಾರರ ಸಹಿ
(ಮಗುವಿನ ತಾಯಿ/ತಂದೆ/ಪೋಷಕರು)

ದಿನಾಂಕ

- ಹೆಣ್ಣು ಮಗು 31/3/2006ರ ನಂತರ ಜನಿಸಿರಬೇಕು
- ಅಂಗನವಾಡಿ ಕಾರ್ಯಕರ್ತೆಯು ಮಗು ಹುಟ್ಟಿದ ಒಂದು ತಿಂಗಳೊಳಗೆ ಜನನ ಪ್ರಮಾಣ ಪತ್ರದೊಂದಿಗೆ ನಲ್ಲಿಸಬೇಕು
- ಮಗುವಿನ ಹೆಸರು ನಮೂದಿಸುವುದು ಕಡ್ಡಾಯವಾಗಿರುತ್ತದೆ

ನಮೂನೆ–2

ಮುಚ್ಚಳಿಕೆ ಪ್ರಮಾಣ ಪತ್ರ

ಭಾಗ್ಯಲಕ್ಷ್ಮಿ ಯೋಜನೆಯಡಿ ರೂ 10,000/– ನಿಶ್ಚಿತ ಠೇವಣಿ ಸೌಲಭ್ಯ ಪಡೆಯಲು

ಶ್ರೀ ------------------ ತಂದೆ/ಶ್ರೀಮತಿ------------------- ಎಂಬ ಹೆಸರಿನ ತಂದೆ/ತಾಯಿಯಾದ ನಾನು/ನಾವು, ನನಗೆ/ನಮಗೆ ದಿನಾಂಕ------------------- ರಂದು ಹುಟ್ಟಿದ -------------------- ಮೊದಲನೇ/ಎರಡನೇ ಹೆಣ್ಣು ಮಗುವಾಗಿದ್ದು, ಭಾಗ್ಯಲಕ್ಷ್ಮೀ ಯೋಜನೆಯಡಿ ರೂ 10,000/–ಗಳ ಠೇವಣಿ ಹೂಡುವ ಸಲುವಾಗಿ ಸರ್ಕಾರ ವಿಧಿಸಿರುವ ಕೆಳಕಂಡ ಷರತ್ತುಗಳನ್ನು ಒಪ್ಪಿರುತ್ತೇನೆ/ವೆ

1 ಹೆಣ್ಣು ಮಗುವನ್ನು ಲಿಂಗಬೇಧ ತಾರತಮ್ಯ ಮಾಡದೆ ಸಾಕುತ್ತೇನೆ

2 ಯಾವುದೇ ಕಾರಣಕ್ಕೂ ಹೆಣ್ಣು ಮಗುವನ್ನು ಬಾಲ ಕಾರ್ಮಿಕಳನ್ನಾಗಿ ಮಾಡುವುದಿಲ್ಲ

3 ಕನಿಷ್ಠ 8ನೇ ತರಗತಿಯವರೆಗೆ ವಿದ್ಯಾಭ್ಯಾಸ ಕೊಡಿಸುತ್ತೇನೆ

4 ಹದಿನೆಂಟು ವರ್ಷ ತುಂಬುವವರೆಗೆ ಮದುವೆ ಮಾಡುವುದಿಲ್ಲ

ಮೇಲ್ಕಂಡ ಷರತ್ತುಗಳನ್ನು/ಉಲ್ಲಂಘಿಸಿದಲ್ಲಿ ಮಂಜೂರು ಮಾಡಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದೆಂದು ಒಪ್ಪಿ ಸಹಿ ಮಾಡಿರುತ್ತೇನೆ

ಸ್ಥಳ ತಂದೆಯ ಸಹಿ
(ಎಡಗೈ ಹೆಬ್ಬೆಟ್ಟಿನ ಗುರುತು)
ದಿನಾಂಕ ತಾಯಿಯ ಸಹಿ
(ಎಡಗೈ ಹೆಬ್ಬೆಟ್ಟಿನ ಗುರುತು)

ನಮೂನೆ-3

ಮೇಲ್ವಿಚಾರಣೆಯ ದೃಢೀಕರಣ

-------------- ಶಿಶು ಅಭಿವೃದ್ಧಿ ಯೋಜನಾ ಕಚೇರಿ ವ್ಯಾಪ್ತಿಯಲ್ಲಿ --- ---------- ವೃತ್ತದ ------------------------ ಗ್ರಾಮದ ಅಂಗನವಾಡಿ ಕೇಂದ್ರದ ವ್ಯಾಪ್ತಿಯಲ್ಲಿ ವಿಳಾಸ ------------------ ರಲ್ಲಿ ವಾಸಿಸುವ ಶ್ರೀಮತಿ -----------------ಕೋಂ----------- ಇವರು ದಿನಾಂಕ-------------ರಂದು ಒಂದನೇ/ಎರಡನೇ ಹೆಣ್ಣು ಮಗುವಿಗೆ ಜನ್ಮ ನೀಡಿದ್ದು, ಭಾಗ್ಯ ಲಕ್ಷ್ಮಿ ಯೋಜನೆ ಯಡಿ ನಿಶ್ಚಿತ ರೇವಣಿ ರೂ 10,000/- ಕ್ಕೆ ಅರ್ಹರಿರುತ್ತಾರೆ ಮಗುವಿನ ಹೆಸರು------------ ಎಂದು ಇಡಲಾಗಿದೆ ಮಗುವಿನ ಹೆಸರುಳ್ಳ ಜನ್ಮ ಪ್ರಮಾಣ ಪತ್ರ ಪರಿಶೀಲಿಸಿ ಲಗತ್ತಿಸಲಾಗಿದೆ ಮಗುವಿನ ತಂದೆ/ತಾಯಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಕ್ಕೆ ನೇರಿದವರೆಂಬ --- ಸಲ್ಲಿಸಿರುವ ದಾಖಲೆ ವರಿಶೀಲಿಸಿ ದೃಢೀಕರಿಸಿದೆ

ಈ ಕುಟುಂಬದಲ್ಲಿ ಒಟ್ಟು -------------------ಜೀವಂತ ಮಕ್ಕಳಿದ್ದು, ತಾಯಿ ಅಧವಾ ತಂದೆ ಶಾಶ್ವತ ಕುಟುಂಬ ಯೋಜನೆ ವದ್ಧತಿ ಅಳವಡಿಸಿಕೊಂಡಿರುತ್ತಾರೆ

ಸ್ಥಳ ಅಂಗನವಾಡಿ ಮೇಲ್ವಿಚಾರಕಿಯ ನಹಿ
ಕಾರ್ಯಕರ್ತೆಯ ನಹಿ ಹೆಸರು

ದಿನಾಂಕ ಅಂಗನವಾಡಿ ಕೇಂದ್ರ ವೃತ್ತದ ಹೆಸರು

* ವೃತ್ತದ ಮೇಲ್ವಿಚಾರಕಿಯು ಅಂಗನವಾಡಿ ಕಾರ್ಯಕರ್ತೆಯಿಂದ ಎಲ್ಲಾ ಅವಶ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ವಡೆದು ಒಂದು ತಿಂಗಳೊಳಗೆ ಕ್ರೋಢೀಕೃತ ಪಟ್ಟಿಯೊಂದಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು

* ಅಂಗನವಾಡಿ ವ್ಯಾಪ್ತಿಯಿಂದ ಹೊರಗಿರುವ ಮಹಾನಗರ ಪಾಲಿಕೆ/ನಗರ ಸಭಾ ಪ್ರದೇಶಗಳಲ್ಲಿ ಈ ಕಾರ್ಯವನ್ನು ಮಹಾನಗರ ವಾಲಿಕೆ ಸಿಬ್ಬಂದಿ/ ನಗರ ಸಭೆಗಳಲ್ಲಿನ ಸಿಬ್ಬಂದಿಗೆ ವಹಿಸುವುದು

ನಮೂನೆ-4

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಶಿಫಾರಸ್ಸುಸಸ

ಭಾಗ್ಯಲಕ್ಷ್ಮಿ ಯೋಜನೆಯಡಿ ರೂ 10,000/- ನಿಶ್ಚಿತ ರೇವಣಿ ಸೌಲಭ್ಯ ಪಡೆಯಲು

ಶ್ರೀ ———————— ರವರ ಪತ್ನಿ ಶ್ರೀಮತಿ ————————
ಇವರು ———————— ಗ್ರಾಮದ ————————————
ಹೋಬಳಿ ——————————ತಾಲ್ಲೂಕದಲ್ಲಿ ವಾಸಿಸುತ್ತಿದ್ದು——————
ವೃತ್ತದ ಮೇಲ್ವಿಚಾರಕಿ ಶ್ರೀಮತಿ ———————— ಇವರು ಸಲ್ಲಿಸಿರುವ ಎಲ್ಲಾ ವಿವರಗಳು ಸಮರ್ಪಕವಾಗಿರುತ್ತದೆ ಆದುದರಿಂದ ರೂ 10,000/- (ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳ ನಿಶ್ಚಿತ ರೇವಣಿ ಹೂಡಲು ಮಂಜೂರಾತಿಗಾಗಿ ಉಪ/ಸಹಾಯಕ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ————————ಜಿಲ್ಲೆ ಇವರಿಗೆ ಶಿಫಾರಸ್ಸು ಮಾಡಲಾಗಿದೆ

ಸ್ಥಳ
ಶಿಶು ಅಭಿವೃದ್ದಿ ಯೋಜನಾಧಿಕಾರಿಗಳ ಸಹಿ
ಮೊಹರಿನೊಂದಿಗೆ

ದಿನಾಂಕ

* ಶಿಶು ಅಭಿವೃದ್ಧಿ ಯೋಜನಾದಿಕಾರಿಗಳು ಎಲ್ಲಾ ವೃತ್ತಗಳಿಂದ ಪಡೆದ ಮಾಹಿತಿಯನ್ನು ಪರಿಶೀಲಿಸಿ 15 ದಿನಗಳೊಳಗೆ ಸಂಬಂಧಪಟ್ಟ ಉಪ/ಸಹಾಯಕ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಸಲ್ಲಿಸುವುದು

ನಮೂನೆ-4

ಉಪ/ಸಹಾಯಕ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಚೇರಿ ಇವರ ನಡವಳಿಗಳು

ಮಂಜೂರಾತಿ ಆದೇಶ

———————— ಜಿಲ್ಲೆ———————— ತಾಲ್ಲೂಕಿನ ————————
————————ಹೋಬಳಿಯ ——————————ವಿಳಾನದಲ್ಲಿ ವಾನವಾಗಿರುವ ಶ್ರೀಮತಿ ————————ಗಂಡ——————ಇವರಿಗೆ ——————ದಿನಾಂಕದಂದು ಜನಿಸಿದ ಒಂದು /ಎರಡನೇ ಹೆಣ್ಣು ಮಗುವಿಗೆ ಭಾಗ್ಯಲಕ್ಷ್ಮಿ ಯೋಜನೆಯಡಿ ರೂ 10,000/ (ಹತ್ತು ಸಾವಿರ ರೂಪಾಯಿಗಳು)

35	ಇಂಡಿಯನ್ ಆಪೀಸರ್ ಕ್ವಾರ್ಟಸ್, ಬೆಂಗಳೂರು ನೀಲಗಿರಿ ರಸ್ತೆ	440000 00	200000 00	–	
36	ಸ್ಟೇಟ್ ಆಫೀಸರ್ ಕ್ವಾಟ್ರಸ್ ಬೆಂಗಳೂರು ನೀಲಗಿರಿ ರಸ್ತೆ (ಮೈಸೂರಿನ ಅಧೀಕ್ಷಕರ ಅಭಿಯಂತರವರ ವಸತಿ ಗೃಹ)	–	200000 00	–	–
37	3ನೇ ಇನ್ ಪೆಂಟ್ರಿ ಸಾಲುಮನೆಗಳು (ಬೆಂಗಳೂರು ನೀಲಗಿರಿ ರಸ್ತೆ)08 ಮನಗಳು (10 ಕಟ್ಟಡಗಳು))	80000 00	–	–	
38	ಡಿ ಒ ಲಾಡ್ಜ್‌ನ ಹಿಂಬಾಗದಲ್ಲಿರುವ ಎಸ್ ಜಿ ವಸತಿ ಗೃಹಗಳು	–	250000 00	–	
39	ಪಿ ಡಬ್ಲ್ಯೂ ಡಿ ಡ್ರೈವರ್‌ಗಳ ವಸತಿ ಗೃಹಗಳು (ಡಿ ಒ ಲಾಡ್ಜ್ ನ ಹಿಂಬಾಗ)	–	–	–	
40	ಜ್ಯೋತಿನಗರದ ಹಾಲಿನಕೇಂದ್ರದ ಹಿಂಭಾಗದಲ್ಲಿರುವ ಎನ್ ಸಿ ಒ ವಸತಿಗೃಹಗಳು	90000 00	–	–	

ಕ್ರಸಂ	ಇಲಾಖೆ/ಕಟ್ಟಡಗಳ ಹೆಸರು	ಕಳೆದ ಮೂರು ವರ್ಷಗಳಲ್ಲಿ ಕಳಕಂಡ ಕಟ್ಟಡಗಳಿಗೆ ಮಾಡಲಾಗಿರುವ ವೆಚ್ಚದ ವಿವರ	ಷರಾ		
		2003–04	2004–05	2005–06	
41	ವಾಹನ ಇಲಾಖೆಯ ಡೆಪ್ಯೂಟಿ ಕಮೀಷನರ್ ರವರ ವಸತಿಗೃಹಗಳು	–	–	–	–
42	ಊಟಿಯಲ್ಲಿರುವ ತೋಟಗಾರಿಕೆ ನಿರ್ದೇಶಕರ ವಸತಿಗೃಹ	–	200000 00	–	
43	ಊಟಯಲ್ಲಿರುವ ತೋಟಗಾರಿಕಾ ಸಹಾಯಕರ ವಾಸಗೃಹ	50000 00	200000 00	–	
44	ಊಟಿಯಲ್ಲಿರುವ ತೋಟಗಾರಿಕಾ ಆಫೀಸರ್ಸ್ ವಾಸಗೃಹ	–	–	–	
45	ಊಟಿಯಲ್ಲಿರುವ ತೋಟಗಾರಿಕಾ ಸಹಾಯಕರ ವಾಸಗೃಹ	–	–	–	
46	ಊಟಿಯಲ್ಲಿರುವ ಕರ್ನಾಟಕ ಅತಿಥಿ ಗೃಹದ ಮ್ಯಾನೇಜರ್ ರವರ ವಸತಿಗೃಹ	143000 00	150000 00	–	
47	ಸರ್ಕಾರಿ ಭವನದ ಆವರಣದಲ್ಲಿರುವ ಸಿ ಮಾದರಿಯ ವಸತಿಗೃಹಗಳು	184000 00	200000 00	–	
48	ಎನ್ ಆರ್ ಮೊಹಲ್ಲಾದಲ್ಲಿರುವ ಪಶುವೈದ್ಯಕೀಯ ಡಾಕ್ಟರ್ ವಸತಿಗೃಹ	–	–	–	
49	ಎ ಟಿ ಐ ನ ವಿದ್ಯಾನಗರದಲ್ಲಿ ನಿರ್ಮಿಸಿರುವ ವಸತಿಗೃಹಗಳು	–	–	–	
50	ಮೈಸೂರಿನಲ್ಲಿರುವ ಪಿ ಕೆ ಟಿ ಬಿ ಆಸ್ಪತ್ರೆಯ ವಸತಿಗೃಹಗಳು	400000 00	86000 00	–	
51	ಗೋಕುಲಂ 2ನೇ ಹಂತದ ವಸತಿನಿಲಯ	28000 00	250000 00	–	
52	ಗೋಕುಲಂ 3ನೇ ಹಂತದ ವಸತಿಗೃಹಗಳು	20000 00	250000 00	–	

ಕ್ರಸಂ	ಇಲಾಖೆ/ಕಟ್ಟಡಗಳ ಹೆಸರು	ಕಳೆದ ಮೂರು ವರ್ಷಗಳಲ್ಲಿ ಕೆಳಕಂಡ ಕಟ್ಟಡಗಳಿಗೆ ಮಾಡಲಾಗಿರುವ ವೆಚ್ಚದ ವಿವರ	ಷರಾ		
		2003–04	2004–05	2005–06	
53	ಮೈಸೂರಿನಲ್ಲಿರುವ ಕೆ ಆರ್ ಆಸ್ಪತ್ರೆಯ ಆರ್ ಎಂ ಒ ವಸತಿಗೃಹ	–	–	–	–
54	ಸಿ ಎಫ್ ಟಿಆರ್ ಐ ಹತ್ತಿರ ಇರುವ ದಾದಿಯರ ವಸತಿಗೃಹಗಳು	–	200000 00	–	
55	ಮೈಸೂರಿನ ಮೆಡಿಕಲ್ ಕಾಲೇಜಿನ ಎಕ್ಸ್ ವೈ ಮತ್ತು ಪಿ ಎ ವಸತಿಗೃಹಗಳು	–	–	–	
56	ಜೆ ಎಲ್ ಬಿ ರಸ್ತೆಯ ಮೈಸೂರು ವೈದ್ಯಕೀಯ ಮಹಾವಿದ್ಯಾಲಯದ ವೈದ್ಯರ ವಸತಿ ಗೃಹಗಳು	–	350000 00	–	
57	ಮೈಸೂರಿನ ಸಿ ಪಿ ಸಿ ತಾಂತ್ರಿಕ ಶಿಕ್ಷಣ ಸಂಸ್ಥೆಯ ವಾರ್ಡ್‌ನ ವಸತಿಗೃಹ	110000 00	–	–	
58	ಮೈಸೂರಿನ ಸಿ ಪಿ ಸಿ ಸಿಬ್ಬಂದಿವರ್ಗದವರ ವಸತಿಗೃಹಗಳು	110000 00	200000 00	–	
59	ಮೈಸೂರಿನ ಸರಸ್ವತಿಪುರಂನಲ್ಲಿರುವ ಅಗ್ನಿಶಾಮಕ ಠಾಣೆಯ ಸಿಬ್ಬಂದಿ ವಸತಿಗೃಹಗಳು	519000 00	1152000 00	–	
60	ಮೈಸೂರಿನ ಸರಸ್ವತಿಪುರಂನಲ್ಲಿರುವ ಜಿಲ್ಲಾತೋಟಗಾರಿಕಾ ಅಧಿಕಾರಿಗಳ ವಸತಿಗೃಹಗಳು	–	–		
61	ಮೈಸೂರಿನ ಸರ್ಕಾರಿ ಪಠ್ಯಪುಸ್ತಕ ಮುದ್ರಣಾಲಯದ ಜಂಟಿ ನಿರ್ದೇಶಕರ ವಸತಿ ಗೃಹ	–	200000 00	–	
62	ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಪದವಿಪೂರ್ವ ಮಹಿಳಾ ವಿದ್ಯಾರ್ಥಿನಿಲಯ ವಾರ್ಡ್‌ನ ವಸತಿಗೃಹ	–	–	–	

ಕ್ರ.ಸಂ	ಇಲಾಖೆ/ಕಟ್ಟಡಗಳ ಹೆಸರು	ಕಳೆದ ಮೂರು ವರ್ಷಗಳಲ್ಲಿ ಕೆಳಕಂಡ ಕಟ್ಟಡಗಳಿಗೆ ಮಾಡಲಾಗಿರುವ ವೆಚ್ಚದ ವಿವರ	ಷರಾ		
		2003–04	2004–05	2005–06	
63	ಮೈಸೂರಿನ ಜಲದರ್ಶಿನಿ ಆವರಣದಲ್ಲಿರುವ ಸಿಬ್ಬಂದಿ ವರ್ಗದ ವಸತಿಗೃಹಗಳು	–	122000 00	–	–
64	ಮೈಸೂರಿನಲ್ಲಿ ಹುಣಸೂರು ರಸ್ತೆಯಲ್ಲಿರುವ ವಿಶ್ವಕನ್ನಡ ಸಮ್ಮೇಳದ ಅಪಾರ್ಟ್‌ಮೆಂಟ್ ಕಟ್ಟಡಗಳು	–	–	–	
65	6 ಜೆ ಎಂ ಎಫ್ ಸಿ ವಸತಿ ಗೃಹಗಳು	127000 00	–	–	
66	ನ್ಯಾಯಾಧೀಶರ ಜೋಡಿ ಮನೆ ವಸತಿ ಗೃಹಗಳು	–	–	–	
67	ನ್ಯಾಯಾಧೀಶರ ಒಂಟಿ ಮನೆ ವಸತಿ ಗೃಹ	–	–	–	
68	ಜ್ಯೋತಿನಗರದ ಪೊಲೀಸ್ ವಸತಿ ಗೃಹಗಳ ಹೇಮಾವತಿ ಬ್ಲಾಕ್	–	–	–	
69	3ನೇ ಇನ್ ಫೆಂಟ್ರಿ ಸಾಲು ಮನೆಗಳು (ಬೆಂಗಳೂರು ನೀಲಗಿರಿ ರಸ್ತೆ)	–	–	–	
70	ಆಡಳಿತ ತರಬೇತಿ ಸಂಸ್ಥೆಗೆ ಸೇರಿದ ವಿದ್ಯಾನಗರದ ಬಡಾವಣೆಯಲ್ಲಿರುವ ವಸತಿ ಗೃಹಗಳು	–	–	–	

432 **ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು)** . ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಸರ್ಕಾರದಿಂದ ಅನುಮತಿ ಪಡೆಯದೆ ಅಕ್ರಮವಾಗಿ ಕಲ್ಲು ಗಣಿಗುತ್ತಿಗೆಯನ್ನು ನಡೆಸುತ್ತಿರುವವರ ಸಂಖ್ಯೆ ಎಷ್ಟು (ವಿವರ ಒದಗಿಸುವುದು),

ಆ) ಸರ್ಕಾರದಿಂದ ಅನುಮತಿ ಪಡೆದು ಕಲ್ಲು ಗಣಿಗುತ್ತಿಗೆಯನ್ನು ನಡೆಸುತ್ತಿರುವವರ ಸಂಖ್ಯೆ ಎಷ್ಟು,

ಇ) ಸರ್ಕಾರವು ಇವರಿಗೆ ಯಾವ ಮಾನದಂಡದ ಆಧಾರದ ಮೇಲೆ ಅನುಮತಿಯನ್ನು ನೀಡಲಾಗಿದೆ,

ಈ) ಈ ಕಲ್ಲು ಗಣಿಗುತ್ತಿಗೆಯಿಂದ ಊರಿನಲ್ಲಿ ವಾಸಿಸುತ್ತಿರುವ ಗ್ರಾಮಸ್ಥರುಗಳಿಗೆ ಶಬ್ದ ಮಾಲಿನ್ಯವಾಗಿ ನೆಮ್ಮದಿಯಿಂದ ವಾಸಿಸಲು ಸಾಧ್ಯವಾಗದೇ ತೊಂದರೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಉ) ಹಾಗಿದ್ದಲ್ಲಿ ಇಂತಹವರ ಮೇಲೆ ಸರ್ಕಾರವು ಕೈಗೊಂಡಿರುವ ಕ್ರಮವೇನು ,

ಊ) ಗೌರಿಬಿದನೂರು ತಾಲ್ಲೂಕಿನಾದ್ಯಂತ ನಡೆಯುತ್ತಿರುವ ಕಲ್ಲು ಗಣಿ ಗುತ್ತಿಗೆಯಿಂದ ಸರ್ಕಾರಕ್ಕೆ 2006ನೇ ಸಾಲಿನಲ್ಲಿ ಬಂದ ಆದಾಯವೇನು, ಈ ಆದಾಯವನ್ನು ಯಾವ ಯಾವ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರವು ಬಳಸಿಕೊಂಡಿದೆ (ವಿವರ ಒದಗಿಸುವುದು)?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು).

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಈಗ ಯಾವುದೇ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ,

ಆ) ಗೌರಿ ಬಿದನೂರು ತಾಲ್ಲೂಕಿನಲ್ಲಿ ಅನುಮತಿ ಪಡೆದು ನಾಲ್ಕು (4) ಜನರು ಕಲ್ಲು ಗಣಿಗಾರಿಕೆ ನಡೆಸುತ್ತಿದ್ದಾರೆ , ವಿವರ ಈ ಕೆಳಕಂಡಂತಿದೆ,

1) ಮೆ ಜ್ಯೋತಿ ಗ್ರಾನೈಟ್ಸ್– ಗ್ರೇ ಗ್ರಾನೈಟ್, ಸರ್ವೆ ನಂ 154,4,00 ಎಕರೆ ಕಾಮಗೊಂಡನಹಳ್ಳಿ–ಕ ಗ ಗು ಸಂ 664, ದಿನಾಂಕ 23 8 2004 ರಿಂದ 10 ವರ್ಷ

2) ಶ್ರೀ ಡಿ ಪಿ ಚಂದ್ರಶೇಖರಯ್ಯ-ಕಟ್ಟಡದ ಕಲ್ಲು-ಸರ್ವೆ ನಂ 28,2 00 ಎಕರೆ- ಉಪ್ಪಾರಹಳ್ಳಿ-ಕ ಗ ಗು ಸಂ 449, ದಿನಾಂಕ 6 4 2004 ರಿಂದ 5 ವರ್ಷ

3) ಶ್ರೀ ಎಸ್ ವಿ ಸುಬ್ಬಾರೆಡ್ಡಿ-ಕಟ್ಟಡದ ಕಲ್ಲು-ಸರ್ವೆ ನಂ 28,2 00 ಎಕರೆ-ಉಪ್ಪಾರಹಳ್ಳಿ -ಕ ಗ ಗು ಸಂ 450, ದಿನಾಂಕ 6 4 2004 ರಿಂದ 5 ವರ್ಷ

4) ಶ್ರೀ ಯಲ್ಲಪ್ಪ-ಕಟ್ಟಡದ ಕಲ್ಲು-ಸರ್ವೆ ನಂ 28,2 00 ಎಕರೆ-ಉಪ್ಪಾರಹಳ್ಳಿ-ಕ ಗ ಗು ಸಂ 587, ದಿನಾಂಕ 2 4 2005ರಿಂದ 5 ವರ್ಷ

ಇ) ಕಲ್ಲುಗುತ್ತಿಗೆಗಳನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ, 1994ರ ನಿಯಮಗಳ ಅನುಸಾರ ಮಂಜೂರು ಮಾಡಲಾಗಿದೆ

ಈ) ಕಲ್ಲು ಗಣಿಗುತ್ತಿಗೆಯಿಂದ ಊರಿನಲ್ಲಿ ವಾಸಿಸುತ್ತಿರುವ ಗ್ರಾಮಸ್ಥರಿಗೆ ತೊಂದರೆಯಾಗುತ್ತಿರುವ ಬಗ್ಗೆ ಯಾವ ದೂರುಗಳು ಬಂದಿರುವುದಿಲ್ಲ

ಉ) ನಿರ್ದಿಷ್ಟ ದೂರು ಬಂದಲ್ಲಿ, ಸ್ಥಳ ಪರಿಶೀಲನೆ ಮಾಡಿ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು

ಊ) ಗೌರಿಬಿದನೂರು ತಾಲ್ಲೂಕಿನಲ್ಲಿ ನಡೆಯುತ್ತಿರುವ ಕಲ್ಲು ಗಣಿಗುತ್ತಿಗೆಗಳಿಂದ 2006-07ನೇ ಸಾಲಿನಲ್ಲಿ (ಡಿಸೆಂಬರ್ ಅಂತ್ಯದವರೆಗೆ) ರೂ 1 05 ಲಕ್ಷ ಆದಾಯ ಬಂದಿರುತ್ತದೆ ಇಲಾಖೆಯು ಸಂಗ್ರಹಿಸುವ ರಾಜಧನವು ರಾಜ್ಯದ ಬೊಕ್ಕಸಕ್ಕೆ ಸಂದಾಯವಾಗುತ್ತದೆ

433 **ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು)** ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಗೌರಿಬಿದನೂರು ತಾಲೂಕಿನಲ್ಲಿರುವ ಮುಸ್ಲಿಂ ಬಾಂಧವರ ಪ್ರಾರ್ಥನಾ ಮಂದಿರಗಳು ಸುಸ್ಥಿತಿಯಲ್ಲಿ ಇಲ್ಲದೇ ಪ್ರಾರ್ಥನಾ ಕಾರ್ಯಕ್ಕೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಗೌರಿಬಿದನೂರು ತಾಲ್ಲೂಕಿನಲ್ಲಿ ವಕ್ಫ್ ಮಂಡಳಿಯ ವ್ಯಾಪ್ತಿಗೆ ಬರುವ ಪ್ರಾರ್ಥನಾ ಮಂದಿಗಳ ಸಂಖ್ಯೆ ಎಷ್ಟು, ಹಾಗೂ ಇವುಗಳ ಅಭಿವೃದ್ಧಿಗೆ ಸರ್ಕಾರವು ಈ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನವೇನು (ವಿವರ ಒದಗಿಸುವುದು),

ಇ) ಗೌರಿಬಿದನೂರು ತಾಲ್ಲೂಕಿನಲ್ಲಿ ಗಣನೀಯ ಪ್ರಮಾಣದಲ್ಲಿ ಮುಸ್ಲಿಂ ಬಾಂಧವರು ಇರುವುದರಿಂದ ದುಸ್ಥಿತಿಯಲ್ಲಿರುವ ಇವರುಗಳ ರುದ್ರಭೂಮಿಯ ಅಭಿವೃದ್ಧಿಗೆ ಸರ್ಕಾರವು ಯಾವುದೇ ಕ್ರಮ ಕೈಗೊಳ್ಳದೇ ಇರುವುದು ನಿಜವಲ್ಲವೇ,

ಈ) ಈ ಪ್ರಾರ್ಥನಾ ಮಂದಿರ ಹಾಗೂ ಖಬರಸ್ಥಾನ್ ಗಳ ಅಭಿವೃದ್ಧಿಗೆ ಸರ್ಕಾರದ ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಆ) ಗೌರಿಬಿದನೂರು ತಾಲ್ಲೂಕಿನಲ್ಲಿ ವಕ್ಫ್ ಮಂಡಳಿಯ ವ್ಯಾಪ್ತಿಗೆ ಬರುವ ಪ್ರಾರ್ಥನಾ ಮಂದಿರಗಳ ಸಂಖ್ಯೆ36 ಈ ವರ್ಷದಲ್ಲಿ ಸದರಿ ತಾಲ್ಲೂಕಿನ ಒಂದು ಮಸೀದಿಗೆ ಅಭಿವೃದ್ಧಿಗಾಗಿ ರೂ 100 ಲಕ್ಷಗಳ ಅನುದಾನ ಮಂಜೂರು ಮಾಡಲಾಗಿದೆ

ಇ) 2004–05ನೇ ಸಾಲಿನಲ್ಲಿ ಗೌರಿಬಿದನೂರು ತಾಲ್ಲೂಕಿನ ಒಟ್ಟು 05 ರುದ್ರಭೂಮಿಯ ಅಭಿವೃದ್ಧಿಗಾಗಿ ಸರ್ಕಾರದಿಂದ ರೂ 100 ಲಕ್ಷಗಳ ಅನುದಾನ ಬಿಡುಗಡೆಗೊಳಿಸಲಾಗಿದೆ

1	ಖಬ್ರಸ್ಥಾನ್ ಜಾಮಿಯಾ ಮಸೀದಿ ಹಲ್ಲೀರಹಳ್ಳಿ, ಮಾಲೂರು ತಾಲ್ಲೂಕು	20,000–00
2	ಖಬ್ರಸ್ಥಾನ್ ಈಡಾಪುರ್, ಗೌರಿಬಿದನೂರು ತಾಲ್ಲೂಕು	20,000–00
3	ಖಬ್ರಸ್ಥಾನ್ ಬೀಚಗನಹಳ್ಳಿ ಕೋಲಾರ್ ತಾಲ್ಲೂಕು	20,000–00
4	ಖಬ್ರಸ್ಥಾನ್ ಮಿನಿಕನಪುರ್ಕಿ ಗೌರಿಬಿದನೂರು ತಾಲ್ಲೂಕು	20,000–00
5	ಖಬ್ರಸ್ಥಾನ್ ಅಲೀಪುರ, ಗೌರಿಬಿದನೂರು ತಾಲ್ಲೂಕು	20,000–00

ಈ) ಕೋಲಾರ ಜಿಲ್ಲೆ ಗೌರಿ ಬಿದನೂರು ತಾಲ್ಲೂಕಿನ ಗಂಗಸಂದ್ರ ಗ್ರಾಮದ ಜುಮ್ಮಾ ಮಸಜಿದ್ ಅಹಲಿಸುನ್ನತುಲ್ ಜಮಾತ್‌ಗೆ 2006–07ನೇ

ಸಾಲಿನಲ್ಲಿ ರೂ 100 ಲಕ್ಷಗಳ ಸಹಾಯ ಅನುದಾನವನ್ನು ಮಂಜೂರು ಮಾಡಲಾಗಿದೆ

434 **ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು)** ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಗೌರಿಬಿದನೂರು ತಾಲೂಕಿನಲ್ಲಿ ಮರಳು ಗುತ್ತಿಗೆಯಿಂದ ಅಂತರ್‌ಜಲ ನೀರಿನ ಮಟ್ಟವು ಅತೀ ಕಡಿಮೆಯಾಗಿ ಕುಡಿಯಲು ನೀರು ಇಲ್ಲದೇ ರೈತರು ಕಂಗಾಲಾಗಿ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಸರ್ಕಾರವು ಮರಳು ಗುತ್ತಿಗೆಯನ್ನು ರದ್ದುಪಡಿಸಿ ಮುಂದಿನ ಬೇಸಿಗೆಯ ಸಮಯದಲ್ಲಿ ಅಂತರಜಲ ಮಟ್ಟವನ್ನು ಕಾಪಾಡಿ, ಈ ಭಾಗದ ಜನತೆಗೆ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಕೈಗೊಂಡಿರುವ ಕ್ರಮವೇನು,

ಇ) ಮರಳು ಗುತ್ತಿಗೆಯನ್ನು ರದ್ದುಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನಲ್ಲಿ ಇಲಾಖೆಯು ಆಯ್ದುಕೊಂಡಿರುವ ನಿರೀಕ್ಷಣಾ ಕೊಳವೆಬಾವಿಗಳಲ್ಲಿ ಅಂತರ್ಜಲ ಮಟ್ಟದ ಇಳಿಕೆ ಕಂಡುಬಂದಿದೆ ಕೋಲಾರ ಜಿಲ್ಲೆ ರಾಜ್ಯದ ಅತೀ ಕಡಿಮೆ ಮಳೆ ಬೀಳುವ ಪ್ರದೇಶದಲ್ಲೊಂದಾಗಿದೆ ಬೇಸಿಗೆಯಲ್ಲಿ ಅಂತರ್ಜಲ ಮಟ್ಟವು ಸಹಜವಾಗಿ ಕಡಿಮೆಯಾಗುತ್ತದೆ ಹೆಚ್ಚಿನ ಸಂಖ್ಯೆಯ ಕೊಳವೆ ಬಾವಿಗಳ ಉಪಯೋಗದಿಂದಲು ನೀರಿನಮಟ್ಟ ಕಡಿಮೆಯಾಗುತ್ತಿದೆ ಮರಳು ಗುತ್ತಿಗೆಯಿಂದ ಅಂತರ್ಜಲ ಮಟ್ಟ ಸ್ವಲ್ಪಮಟ್ಟಿಗೆ ಕಡಿಮೆಯಾಗಿರುವ ಅವಕಾಶಗಳೂ ಇದೆ

ಆ) ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನಲ್ಲಿ ಮರಳು ಗಣಿಗಾರಿಕೆಗೆ ಯಾವುದೇ ಗುತ್ತಿಗೆಗಳನ್ನು ನೀಡಲಾಗುತ್ತಿಲ್ಲ

ಇ) ಈಗಾಗಲೇ ನೀಡಿರುವ ಮರಳು ಗುತ್ತಿಗೆಯನ್ನು ರದ್ದುಪಡಿಸಲು ಹಾಗೂ ಹೊಸ ಗುತ್ತಿಗೆ ನೀಡದಂತೆ, ಜಿಲ್ಲಾ ಮಟ್ಟದ ಉಸ್ತುವಾರಿ ಸಮಿತಿ ಕ್ರಮ ಕೈಗೊಂಡಿದೆ

436 **ಶ್ರೀ ಸಿದ್ದು ಸಾವದಿ (ಜಮಖಂಡಿ)** : ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 10 ವರ್ಷಗಳಿಂದ ಇಲ್ಲಿಯವರೆಗೆ ನಮ್ಮ ರಾಜ್ಯದಲ್ಲಿ ಸಂಭವಿಸಿರುವ ಭಯೋತ್ಪಾದನಾ ಘಟನೆಗಳಾವುವು, ಅವುಗಳಲ್ಲಿ ಪ್ರಾಣ ಕಳೆದುಕೊಂಡ ಮತ್ತು ಗಾಯಗೊಂಡ ಜನರು ಎಷ್ಟು,

ಆ) ಈ ಎಲ್ಲಾ ಪ್ರಕರಣಗಳಲ್ಲಿ ಬಂಧಿಸಿರುವ ಉಗ್ರಗಾಮಿಗಳಾರು,

ಇ) ಅವರಲ್ಲಿ ಎಷ್ಟು ಜನರಿಗೆ ಶಿಕ್ಷೆಯಾಗಿದೆ ಹಾಗೂ ಉಳಿದ ತನಿಖೆ ಯಾವ ಹಂತದಲ್ಲಿದೆ,

ಈ) ರಾಜ್ಯದಲ್ಲಿ ಇನ್ನೂ ಅಡಗಿ ಕೊಂಡಿರುವ ಶಂಕಿತ ಉಗ್ರರು ಯಾರ್ಯಾರು ಹಾಗೂ ಅವರನ್ನು ಬಂಧಿಸಲು ಕೈಗೊಂಡ ಕ್ರಮಗಳೇನು,

ಉ) ರಾಜ್ಯದ ಯಾವ ಯಾವ ಪ್ರದೇಶ, ಕಟ್ಟಡ, ವ್ಯಕ್ತಿ ಇನ್ನೂ ಮುಂತಾದವು ಉಗ್ರರ ದುಷ್ಕೃತ್ಯಕ್ಕೆ ಬಲಿಯಾಗುವ ಪಟ್ಟಿಯಲ್ಲಿವೆ,

ಊ) ಅದನ್ನು ತಪ್ಪಿಸಲು ಕೈಗೊಂಡ ಮುಂಜಾಗ್ರತಾ ಕ್ರಮಗಳೇನು,

ಋ) ರಾಜ್ಯದಲ್ಲಿ ಉಗ್ರರು ನೆಲೆಯೂರಲು ಇರುವ ಅವಕಾಶಗಳು ಯಾವುವು ಮತ್ತು ಅವರಿಗೆ ಸಹಾಯ ಮಾಡುವವರು ಯಾರು,

ಎ) ಅಂಥವರ ಮೇಲೆ ನಿಗಾ ಇಡಲಾಗಿದೆಯೇ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಕರ್ನಾಟಕ ರಾಜ್ಯದಲ್ಲಿ 10 ವರ್ಷಗಳಿಂದ ಇಲ್ಲಿಯವರೆಗೆ ಈ ಕೆಳಕಂಡ ಭಯೋತ್ಪಾದನಾ ಘಟನೆಗಳು ವರದಿಯಾಗಿರುತ್ತವೆ

ಅ) ದಿ 28 9 2002 ರಂದು ಬೆಂಗಳೂರು ನಗರದ ಸಂಜಯನಗರ ಪೊಲೀಸ್ ಠಾಣಾ ಸರಹದ್ದಿನ ಮನೆಯೊಂದರಲ್ಲಿ ಅಡಗಿದ್ದ ಅಲ್ ಉಮ್ಮ ಭಯೋತ್ಪಾದಕರನ್ನು ತಮಿಳುನಾಡು ಪೊಲೀಸ್ ಬೆಂಗಳೂರು ಪೊಲೀಸರ ಸಹಕಾರದೊಂದಿಗೆ ಬಂಧಿಸಲು ಹೋದಾಗ 5 ಜನ ಭಯೋತ್ಪಾದಕರು ಪೊಲೀಸರ ಮೇಲೆ ಸುಸಜ್ಜಿತ ಶಸ್ತ್ರ ಹಾಗೂ ಸ್ಫೋಟಕ ವಸ್ತುಗಳಿಂದ ದಾಳಿ ಮಾಡಿದಾಗ ಪೊಲೀಸರು ಪ್ರತಿ ದಾಳಿ ನಡೆಸಿದಾಗ ಐದು ಜನ ಉಗ್ರರು ಮೃತಪಟ್ಟಿರುತ್ತಾರೆ

2) ದಿ 28 12 2005ರಂದು ಬೆಂಗಳೂರಿನ ಸದಾಶಿವನಗರದಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ವಿಜ್ಞಾನಿಗಳ ಮೇಲೆ ಎಲ್–ಇ–ಟಿ ಉಗ್ರರು ದಾಳಿ ನಡೆಸಿದಾಗ ಪ್ರೊಫೆಸರ್ ಎಂ ಸಿ ಪುರಿ ಮಡಿದಿದ್ದು ಇನ್ನುಳಿದ 4 ಜನ ಇತರ ವಿಜ್ಞಾನಿಗಳು ಗಾಯಗೊಂಡಿರುತ್ತಾರೆ

3) ದೀನ್ ದಾರ್ ಅಂಜುಮಾನ್ ಸಂಘಟನೆಗೆ ಸೇರಿದ ಉಗ್ರರು ದಿ 8 6 2000ರಂದು ಗುಲ್ಬರ್ಗಾ ಜಿಲ್ಲೆಯ ವಾಡಿ ನಗರದಲ್ಲಿರುವ ಸೆಂಟ್ ಆನ್ಸ್ ಚರ್ಚ್ ಸ್ಫೋಟಿಸಿದ್ದು, ಈ ಸ್ಫೋಟದಲ್ಲಿ ಇಬ್ಬರು ನಾಗರಿಕರು ಗಾಯಗೊಂಡಿರುತ್ತಾರೆ

4) ಇದೇ ಸಂಘಟನೆಯ ಉಗ್ರರು ದಿ 8–7–2000ರಂದು ಹುಬ್ಬಳ್ಳಿ ನಗರದ ಸೆಂಟ್ ಜಾನ್ಸ್ ಲೂದರೆನ್ ಚರ್ಚ್ ಕಟ್ಟಡವನ್ನು ಸ್ಫೋಟಿಸಿ, ಅದಕ್ಕೆ ಧಕ್ಕೆಯನ್ನುಂಟು ಮಾಡಿರುತ್ತಾರೆ

5) ದೀನ್ ದಾರ್ ಅಂಜುಮಾನ್ ಸಂಘಟನೆಯ ಉಗ್ರರು ದಿ 9 7 2000ರಂದು ಬೆಂಗಳೂರಿನ ಜಗಜೀವನರಾಮನಗರದ ಸೆಂಟ್ ಪೀಟರ್ ಚರ್ಚ್‌ನ ಕಟ್ಟಡಕ್ಕೆ ಸ್ಫೋಟಕದಿಂದ ಧಕ್ಕೆ ಮಾಡಿರುತ್ತಾರೆ

6) ಇದೇ ಸಂಘಟನೆಯ ಉಗ್ರರು ದಿ 9 7 2000 ರಂದು ಬೆಂಗಳೂರಿನ ಮಿನರ್ವಮಿಲ್ ಬಳಿ ಮಾರುತಿ ವ್ಯಾನ್ ಸಂಖ್ಯೆ ಜಿ ಎ 1–2786ರಲ್ಲಿ ಸ್ಫೋಟಕ ವಸ್ತುಗಳನ್ನು ಕೊಂಡೊಯ್ಯತ್ತಿದ್ದಾಗ ಆಕಸ್ಮಿಕವಾಗಿ ಸ್ಫೋಟಗೊಂಡಿದ್ದು, ಈ ಸ್ಫೋಟದಿಂದ ಇಬ್ಬರು ಉಗ್ರರು ಸತ್ತಿದ್ದು ಮತ್ತೊಬ್ಬ ಉಗ್ರಾಮಿ ಗಾಯಗೊಂಡಿರುತ್ತಾನೆ

3) ರಾಜ್ಯದಲ್ಲಿ ಸಂಭವಿಸಿರುವ ಭಯೋತ್ಪಾದನೆ ಘಟನೆಗಳ ಪ್ರಕರಣದಲ್ಲಿ ಈ ಕೆಳಕಂಡ ಆರೋಪಿಗಳನ್ನು ಬಂಧಿಸಲಾಗಿದೆ

1) ಮಹಮ್ಮದ್ ರಾಜೂರ್ ರೆಹಮಾನ್ @ ಅಬು

2) ಶೇಖ್ ಅಸಿಂ ಆಲಿ @ ಆಸಿಂ 3) ಮಹಮ್ಮದ್ ಪಾರೂಖ್ @ ಫಾರೂಖ್ ಆಲಿ 4) ಸೈಯದ್ ಹಸನ್ ಉಜಮ 5) ಮಹಮ್ಮದ್ ಸಿದ್ದಿಕಿ 7) ಅಬ್ದುಲ್ ಹಬೀಬ್ @ ಹಬೀಬ್ 8) ಸೈಯದ್‌ಶಂಸು ಜಮ 9) ಶೇಖ್ ಪರುದ್ದೀನ್ ವಲ್ಲಿ @ ಪರುದ್ದೀನ್ 10) ಅಮಾನತ್ ಹುಸೇನ್ ಮುಲ್ಲಾ 11) ಸೈಯದ್ ಅಬ್ದುಲ್ ಖಾದರ್ ಜಿಲಾನಿ 12) ಶೇಖ್ ಹಬೀಬ್ @ 13) ಮಹ್ಮದ್ ಗಾಯಸೂದ್ದೀನ್ 14) ಮಹ್ಮದ್ ಸರ್‌ಫೂದ್ದೀನ್ 15) ಮೀರಾ ಸಾಬ್

ಅಲಿಯಸ್ ಮೀರಾ 16) ಮುನಿರುದ್ದಿನ್ ಮುಲ್ಲಾ 17) ಮಹಮದ್ ರಿಯಾಜುದ್ದೀನ್ 18) ರೀಷಿ ಹಿರೇಮಠ್ @ ಅಬ್ದುಲ್ ರಷೀದ್ ಮುಲ್ಲಾ 19) ಮಹಮ್ಮದ್ ಅಕೀಲ್ ಅಹಮ್ಮದ್ 20) ಮಹಮ್ಮದ್ ಜಾಫರ್ 21) ಬಷೀರ್ ಅಹಮ್ಮದ್ 22) ಅಸ್ಸೋ ಜಮಾ 23) ಸಾಂಗ್ಲೀ ಬಾಷಾ 24) ಮಹಮ್ಮದ್ ಹುಸೇನ್ 25) ಸೈಯದ್ ಖಾಲಿಕ್ ಉಲ್ 26) ಸೈಯದ್ ಮೊಹಮ್ಮದ್ ಇಬ್ರಾಹಿಂ @ ಎಸ್ ಎಂ ಇಬ್ರಾಹಿಂ

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಆವರಣದಲ್ಲಿ ಉಗ್ರರು ನಡೆಸಿದ ದಾಳಿ ಪ್ರಕರಣ ಇನ್ನೂ ತನಿಖಾ ಹಂತದಲ್ಲಿರುತ್ತದೆ

ಮೂರು ಚರ್ಚ್ ಸ್ಫೋಟ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು, ಆರೋಪಿಗಳು ನ್ಯಾಯಾಂಗ ಬಂಧನದಲ್ಲಿರುತ್ತಾರೆ

4) ಬೆಂಗಳೂರು ನಗರದಲ್ಲಿ ಜರುಗಿದ ಕ್ರಿಕೆಟ್ ಪಂದ್ಯ ವೀಕ್ಷಿಸಲು ಬಂದಿದ್ದ 16 ಜನರ ಪೈಕಿ 10 ಜನ ಪಾಕಿಸ್ಥಾನೀಯರು ತಲೆಮರೆಸಿಕೊಂಡಿರುತ್ತಾರೆ ಇವರನ್ನು ಪತ್ತೆ ಮಾಡುವ ಕಾರ್ಯ ಮುಂದುವರೆದಿದೆ

ಅಲ್ಲದೆ ಪಾಕಿಸ್ಥಾನದಿಂದ ಬಂದು ಕರ್ನಾಟಕ ರಾಜ್ಯದಲ್ಲಿ ನೆಲೆಸಿದ್ದ 38 ಜನ ಪಾಕಿಸ್ಥಾನಿ ಪ್ರಜೆಗಳು ತಲೆ ಮರೆಸಿಕೊಂಡಿರುತ್ತಾರೆ ಇವರುಗಳನ್ನು ಪತ್ತೆ ಮಾಡುವ ಕಾರ್ಯ ಮುಂದುವರೆದಿದೆ

5) ರಾಜ್ಯದಲ್ಲಿ ಬೆಂಗಳೂರಿನ ವಿಧಾನಸೌಧ, ವಿಕಾಸಸೌಧ, ಸಂಶೋಧನಾ ಕೇಂದ್ರಗಳು, ಐ ಟಿ/ಬಿ ಟಿ ಕಂಪನಿಗಳು, ವಿಮಾನ ನಿಲ್ದಾಣ ಕೈಗಾ, ಅಣುಸ್ಥಾವರ, ಆಲಮಟ್ಟಿ, ನಾರಾಯಣಪುರ ತುಂಗಭದ್ರಾ ಮತ್ತು ಕೆ ಆರ್ ಎಸ್ ಜಲಾಶಯಗಳು ಹಾಗೂ ಇನ್ನಿತರ ಸೂಕ್ಷ್ಮ ಪ್ರದೇಶಗಳು ಉಗ್ರರ ದಾಳಿಗೆ ಬಲಿಯಾಗುವ ಪಟ್ಟಿಯಲ್ಲಿವೆ, ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ಉಗ್ರರು ಯಾವ ವ್ಯಕ್ತಿಗಳನ್ನು ಗುರಿಯಾಗಿರಿಸಿರುವುದಿಲ್ಲ

6) ಪ್ರತಿ 3 ತಿಂಗಳಿಗೆ ಒಮ್ಮೆ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪ್ರಮುಖ ಇಲಾಖೆಗಳಾದ ಪೊಲೀಸ್ ಸಿ ಆರ್ ಪಿ ಎಫ್ , ಸಿಬಿಐ, ಸಿಬಿಡಿಟಿ, ಎಂಪ್ಲಾಯ್‌ಮೆಂಟ್ ಡೈರೆಕ್ಟರ್ ಕಸ್ಟಮ್ಸ್, ಸ್ಪೆಷಲ್ ಬ್ಯೂರೋ, ಸಿ ಐ ಎಸ್ ಎಸ್ , ಆರ್ಮಿ ಇಂಟೆಲಿಜೆನ್ಸ್ ಬ್ಯೂರೋ, ಸಿ ಐ ಎಸ್ ಎಸ್ ಆರ್ಮಿ ಇಂಟೆಲಿಜೆನ್ಸ್, ಏರ್ ಫೋರ್ಸ್, ಕೋಸ್ಟಲ್ ಗಾರ್ಡ್,

ಆರ್ ಪಿ ಎಫ್, ರಾಜ್ಯ ಗುಪ್ತವಾರ್ತೆ, ಭಯೋತ್ಪಾದಕ ನಿಗ್ರಹ ದಳದ ಮುಖ್ಯಸ್ಥರನ್ನು ಒಳಗೊಂಡಿರುವ ಸಬ್ಸಿಡಿಯರಿ ಮಲ್ಟಿ ಏಜೆನ್ಸಿ ಸೆಂಟರ್‌ನ (SMAC) ಸಭೆಯನ್ನು ನಡೆಸುತ್ತಿದ್ದು, ರಾಜ್ಯದ ಭದ್ರತೆ ಬಗ್ಗೆ ಚರ್ಚಿಸಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಭದ್ರತೆ ವಿಷಯದಲ್ಲಿ ಗುಪ್ತಚರ ವಿಭಾಗದ ಮಾಹಿತಿ ವಿನಿಮಯ ಮಾಡಿಕೊಂಡು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ

1) ವಿಧಾನಸೌಧ, ವಿಕಾಸಸೌಧಗಳ ಭದ್ರತೆ ಬಗ್ಗೆ ಡಿ ಸಿ ಪಿ ರವರ ಹುದ್ದೆಯನ್ನು ಸೃಜಿಸಿ, ಭದ್ರತೆಯನ್ನು ಒದಗಿಸಲಾಗಿದೆ

2) ಕೇಂದ್ರ ಗುಪ್ತಚರ ದಳ/ಅಂತರರಾಜ್ಯ ಗುಪ್ತಚಾರ ದಳದೊಂದಿಗೆ ನಿಕಟ ಸಂಪರ್ಕ ಇಟ್ಟಿದ್ದು, ಮಾಹಿತಿ ವಿನಿಮಯ ಮಾಡಿಕೊಳ್ಳಲಾಗುತ್ತಿದೆ, ಅಪರಿಚಿತರಿಗೆ ಮನೆಗಳನ್ನು ಬಾಡಿಗೆಗೆ ನೀಡುವಾಗ ಮತ್ತು ಹಳೆ ವಾಹನಗಳನ್ನು ಮಾರಾಟ ಮಾಡುವಾಗ ಅಂತಹ ವ್ಯಕ್ತಿಗಳ ಪೂರ್ಣ ಮಾಹಿತಿಯನ್ನು ಪಡೆಯುವಂತೆ ಸ್ಥಳೀಯ ಪೊಲೀಸರಿಗೆ ಸೂಚಿಸಲಾಗಿದೆ ಈ ಬಗ್ಗೆ ಮಾಧ್ಯಮಗಳಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗುತ್ತಿದೆ

7) ಬೆಂಗಳೂರು ನಗರವು ಐಟಿ /ಬಿಟಿ ಕ್ಷೇತ್ರದಲ್ಲಿ ವಿಶ್ವದ ಗಮನ ಸೆಳೆದಿದ್ದು ಉದ್ಯೋಗಾವಕಾಶಕ್ಕಾಗಿ ಹಾಗೂ ವ್ಯಾಪಾರಕ್ಕಾಗಿ ಬೆಂಗಳೂರಿಗೆ ಬಂದು ನೆಲೆಸಿ, ಉಗ್ರಗಾಮಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಸಾಧ್ಯತೆಗಳಿರುತ್ತದೆ ಇವರುಗಳು ಸ್ಥಳೀಯರೊಂದಿಗೆ ಬೆರೆತು ಅವರ ಅಮಾಯಕತೆಯನ್ನು ಬಳಿಸಿಕೊಂಡು ಉಗ್ರಗಾಮಿ ಕಾರ್ಯಚಟುವಟಿಕೆಗಳನ್ನು ನಡೆಸಿರುವ ಪ್ರಸಂಗಗಳು ಬೆಳಕಿಗೆ ಬಂದಿವೆ

8) ನಿಗಾ ಇಡಲಾಗಿದೆ

437 **ಶ್ರೀ ಸಿದ್ದು ಸಾವದಿ (ಜಮಖಂಡಿ)** ಮಾನ್ಯ ಕನ್ನಡ ಮತ್ತು ನಂಸ್ಕೃತಿ ನಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಾ ಮಾಸಾಶನ ಪಡೆಯಲು ಇರುವ ನಿಯಮಾವಳಿಗಳಾವುವು,

ಆ) ಜಮಖಂಡಿ ತಾಲ್ಲೂಕಿನಲ್ಲಿ ಕಲೆಯಲ್ಲಿ ಮಾಸಾಶನ (ಗೌರವಧನ) ಪಡೆಯುವವರ ಸಂಖ್ಯೆ ಎಷ್ಟು ಹಾಗೂ ಎಂದಿನಿಂದ ಮತ್ತು ಯಾವ ಕಲೆಗಾಗಿ ಮಾಸಾಶನ ನೀಡಲಾಗುತ್ತಿದೆ,

ಇ) ಜಮಖಂಡಿ ತಾಲ್ಲೂಕಿನಲ್ಲಿ ಮಾಸಾಶನ ಸಲುವಾಗಿ ಎಷ್ಟು ಅರ್ಜಿಗಳು ಬಾಕಿ ಇವೆ ಹಾಗೂ ಅವುಗಳಿಗೆಲ್ಲಾ ಯಾವಾಗ ಮಂಜೂರಾತಿ ಕೊಡಲಾಗುವುದು,

ಈ) ದಿನಾಂಕ 1–4–2004ರಿಂದ ಇಲ್ಲಿಯ ವರೆವಿಗೂ ಪ್ರತಿ ವರ್ಷ ರಾಜ್ಯದಲ್ಲಿ ಎಷ್ಟು ಜನರಿಗೆ ಮಾಸಾಶನ ಮಂಜೂರು ಮಾಡಲಾಗಿದೆ, (ತಾಲ್ಲೂಕುವಾರು ಮಾಹಿತಿ ಒದಗಿಸುವುದು),

ಉ) ಅನರ್ಹ ಕಲಾವಿದರಿಗೆ ಮಾಸಾಶನ ಬರುತ್ತಿದ್ದು, ನಿಜವಾದ ಕಲಾವಿದರು ಅವಕಾಶದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಊ) ಹಾಗಿದ್ದಲ್ಲಿ ಅಂತಹವರ ಸಂಖ್ಯೆ ಎಷ್ಟು ಹಾಗು ಅವರ ವಿರುದ್ಧ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಎಸ್ ಮಹದೇವಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು):

ಅ) ಕಲಾವಿದರಿಗೆ 58 ವರ್ಷ ವಯಸ್ಸಾಗಿರಬೇಕು ಕನಿಷ್ಠ 25 ವರ್ಷಗಳ ಕಲಾಸೇವೆ ಮಾಡಿರಬೇಕು ಹಾಗೂ ವಾರ್ಷಿಕ ಆದಾಯ ಮಿತಿ 3,6000 00 ಮೀರಿರಬಾರದು, ಅಂಗವಿಕಲ ಕಲಾವಿದರಾಗಿದ್ದಲ್ಲಿ 49 ವರ್ಷ ವಯಸ್ಸಾಗಿರಬೇಕು ಹಾಗೂ ಕನಿಷ್ಠ 20 ವರ್ಷಗಳ ಕಲಾಸೇವೆ ಮಾಡಿರಬೇಕು

ಆ) ಅ) ಜಮಖಂಡಿ ತಾಲ್ಲೂಕಿನಲ್ಲಿ ಮಾಸಾಶನ ಪಡೆಯುತ್ತಿರುವವರ ಸಂಖ್ಯೆ 332

ಆ) ದಿನಾಂಕ 4 2 1975ರಿಂದ ಮಾಸಾಶನ ಮಂಜೂರು ಮಾಡಲಾಗುತ್ತಿದೆ

ಇ) ಜಾನಪದ, ಯಕ್ಷಗಾನ, ಸಂಗೀತ ನೃತ್ಯ ಲಲಿತ ಶಿಲ್ಪಕಲೆ ಸಾಹಿತ್ಯ, ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಹನೀಯರಿಗೆ ಮಾಸಾಶನ ನೀಡಲಾಗುತ್ತಿದೆ

ಇ) ಅ) ಜಮಖಂಡಿ ತಾಲ್ಲೂಕಿಗೆ ಸಂಬಂಧಪಟ್ಟಂತೆ 144 ಅರ್ಜಿಗಳು ಬಾಕಿ ಇವೆ

ಆ) ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯು ಅರ್ಹ ಕಲಾವಿದರನ್ನು ಮತ್ತೊಮ್ಮೆ ಪರಿಶೀಲಿಸಿ ಆಯ್ಕೆ ಮಾಡಲು ವಿವಿಧ ಕಲೆಗಳಿಗೆ

ಸಂಬಂಧಿಸಿದಂತೆ ಸಮಿತಿಗಳನ್ನು ರಚಿಸಿದ್ದು, ಈ ಉಪ ಸಮಿತಿಗಳು ಸಂದರ್ಶನ ಪ್ರಕ್ರಿಯೆ ಪ್ರಾರಂಭಿಸಿದ್ದು, ಅರ್ಹ ಕಲಾವಿದರ ಪಟ್ಟಿಯನ್ನು ನೀಡಿದ ಕೂಡಲೇ ಮಾಸಾಶನವನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು

ಈ) ದಿನಾಂಕ 1 4 2004 ರಿಂದ ಮಾಸಾಶನ ಮಂಜೂರಾಗಿರುವುದಿಲ್ಲ ಆಯ್ಕೆ ಸಮಿತಿಯನ್ನು ರಚಿಸಿದ್ದು, ಆಯ್ಕೆ ಪ್ರಕ್ರಿಯೆ ಆರಂಭವಾಗಿರುತ್ತದೆ

ಉ) ಅ ಹೌದು ಅನರ್ಹ ಕಲಾವಿದರೆಂದು ತಿಳಿದು ಬಂದಂತಹವರ ಬಗ್ಗೆ ವಿಚಾರಣೆನಡೆಸಿ ಅವರಿಗೆ ಮಾಸಾಶನವನ್ನು ರದ್ದುಪಡಿಸಲಾಗಿದೆ

ಊ) ಅನರ್ಹ ಕಲಾವಿದರೆಂದು ತನಿಖೆಯಿಂದ ದೃಢಪಡುವಂತ ಹಾಸನ ಜಿಲ್ಲೆಗೆಸಂಬಂಧಿಸಿದಂತೆ ನಾಲ್ಕು ಜನರಿಗೆ (4) ಹಾಗೂ ಬಿಜಾಪುರ ಜಿಲ್ಲೆಯ ಒಬ್ಬರಿಗೆ (1) ಮಾಸಾಶನ ಮಂಜೂರಾತಿ ಸೌಲಭ್ಯ ರದ್ದುಪಡಿಸಲಾಗಿದೆ

438 **ಶ್ರೀ ಸಿದ್ದು ಸಾವದಿ (ಜಮಖಂಡಿ)** ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ, ರಬಕವಿ, ಬನಹಟ್ಟಿ ಮತ್ತು ತೇರದಾಳ ನಗರ ಸಭೆಗಳ ನೀರು ವಿತರಣಾ ಪೈಪುಗಳ ಜೋಡಣೆ ಗಳನ್ನು ಯಾವಾಗ ಮಾಡಲಾಗಿದೆ, (ವಾರ್ಡ್‌ವಾರು ವಿವರ ಒದಗಿಸುವುದು),

ಆ) ಈ ವಿತರಣಾ ಜಾಲದಲ್ಲಿ ಅನೇಕ ಕಡೆಗಳಲ್ಲಿ ಪೈಪುಗಳು ಪದೆ ಪದೆ ಒಡೆದು ನೀರು ಪೋಲಾಗುವುದಲ್ಲದೇ ಮತ್ತು ಇನ್ನೂ ಅನೇಕ ವಾರ್ಡ್‌ಗಳ ಬಹುತೇಕ ಭಾಗಗಳಲ್ಲಿ ವಿತರಣಾ ಜಾಲವೇ ಇಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಗಳಾಗುತ್ತಿರುವುದು ನಿಜವಲ್ಲವೆ,

ಇ) ಈ ಮೂರು ನಗರಗಳಲ್ಲಿ ವಿತರಣಾ ಪೈಪುಗಳನ್ನು ಯಾವಾಗ ಅಳವಡಿಸಿ ಜನರಿಗೆ ನೀರು ಕೊಡಲಾಗುವುದು,

ಈ) ಜಮಖಂಡಿ ನಗರದ ಕುಡಿಯುವ ನೀರಿನ ಯೋಜನೆಯ ಕಾಮಗಾರಿ ಎಂದಿನಿಂದ ಪ್ರಾರಂಭಿಸಲಾಗಿದೆ ಹಾಗೂ ಗುತ್ತಿಗೆದಾರನ ಟೆಂಡರ್ ಅವಧಿ ಎಂದಿಗೆ ಮುಗಿದಿದೆ ಮತ್ತು ಯಾವಾಗ ಕೆಲಸವನ್ನು ಮುಗಿಸಿ ನೀರು ಕೊಡಲಾಗುವುದು, ಹಾಗೂ ಗುತ್ತಿಗೆದಾರನ ಟೆಂಡರ್ ಅವಧಿ ಎಂದಿಗೆ ಮುಗಿದಿದೆ ಮತ್ತು ಯಾವಾಗ ಕೆಲಸವನ್ನು ಮುಗಿಸಿ ನೀರು ಕೊಡಲಾಗುವುದು,

ಉ) ಅವಧಿ ಮುಗಿದು ವರ್ಷವಾದರೂ ಕೆಲಸ ಮುಗಿಸದೇ ಇರುವ ಗುತ್ತಿಗೆದಾರನ ಮೇಲೆ ಏನು ಕ್ರಮ ಜರುಗಿಸಿದ್ದೀರಿ,

ಊ) ಬೇಸಿಗೆಯಲ್ಲಿ ತೀವ್ರ ಕುಡಿಯುವ ನೀರಿನ ತೊಂದರೆ ಆಗುವುದನ್ನು ತಪ್ಪಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಜಮಖಂಡಿ 1977–78ರಿಂದ 1979–80 ರವರೆಗೆ ರಬಕವಿ ಬನಹಟ್ಟಿ 1996–97 ರಿಂದ 1999–2000 ತೇರದಾಳ–1995–96 ರಲ್ಲಿ ನೀರು ವಿತರಣಾ ವ್ಯೆಮಗಳ ಜೋಡಣೆಯನ್ನು ಮಾಡಲಾಗಿದೆ (ವಾರ್ಡ್‌ವಾರು ವಿವರ ಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

ಆ) ಹೌದು

ಇ) ರಬಕವಿ ಬನಹಟ್ಟಿ ಮತ್ತು ತೇರದಾಳ ಪಟ್ಟಣಗಳಲ್ಲಿ ವಿತರಣಾ ವ್ಯವಸ್ಥೆಯನ್ನು ಅಳವಡಿಸಲಾಗಿದೆ

ಈ) ದಿನಾಂಕ 2 12 2003ರಂದು ಪ್ರಾರಂಭಿಸಲಾಗಿದೆ ಗುತ್ತಿಗೆದಾರರ ಟೆಂಡರ್ ಅವಧಿಯು ದಿನಾಂಕ 1 10 2005ರಂದು ಪೂರ್ಣಗೊಂಡಿರುತ್ತದೆ

ಕಾಮಗಾರಿಯನ್ನು ಅಕ್ಟೋಬರ್ 2007 ರೊಳಗೆ ಪೂರ್ಣಗೊಳಿಸಲಾಗುವುದು

ಉ) ಗುತ್ತಿಗೆದಾರರಿಗೆ ನೋಟೀಸ್ ನ್ನು ದಿನಾಂಕ 5–7–2006 ಮತ್ತು 8–12–2006ರಂದು ಜಾರಿ ಮಾಡಲಾಗಿದ್ದು, ರೂ 1 00 ಲಕ್ಷ ದಂಡವನ್ನು ಸಹ ವಿಧಿಸಲಾಗಿದೆ ಈ ಕಾಮಗಾರಿಗಳು ತೀವ್ರ ಪ್ರಗತಿಯಲ್ಲಿದೆ

ಊ) ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಹಿಪ್ಪರಗಿ ಬ್ಯಾರೇಜಿನಲ್ಲಿ 5 90 ಸಾವಿರ ದಶಲಕ್ಷ ಘನ ಅಡಿ (TMCft) ನೀರು ಶೇಖರಣೆ ಇರುತ್ತದೆ ಆದುದರಿಂದ ಬೇಸಿಗೆಯಲ್ಲಿ ನೀರಿನ ತೊಂದೆ ಉದ್ಭವಿಸುವ ಸಾಧ್ಯತೆಗಳು ಇರುವುದಿಲ್ಲ

ಅನುಬಂಧ–ಅ

ಜಮಖಂಡಿ ಪಟ್ಟಣ

1977–78 ರಿಂದ 1979–80 ರವರೆಗೆ ಜಮಖಂಡಿ ಪಟ್ಟಣ ವ್ಯಾಪ್ತಿಯಲ್ಲಿ ಅಳವಡಿಸಿದ ವಿತರಣಾ ಕೊಳವೆ ಮಾರ್ಗದ ವಿವರಗಳು

1 200 ಮಿ ಮೀ ವ್ಯಾಸದ ಪಿ ವಿ ಸಿ –163 ಮೀಟರು
2 160 ಮಿ ಮೀ ವ್ಯಾಸದ ಪಿ ವಿ ಸಿ –1998 ಮೀಟರು
3 110 ಮಿ ಮೀ ವ್ಯಾಸದ ಪಿ ವಿ ಸಿ – 4592 ಮೀಟರು
4 90 ಮಿ ಮೀ ವ್ಯಾಸದ ಪಿ ವಿ ಸಿ –10242 ಮೀಟರು
5 80 ಮಿ ಮೀ ವ್ಯಾಸದ ಸಿ ಐ –15600 ಮೀಟರು
6 100 ಮಿ ಮೀ ವ್ಯಾಸದ ಸಿ ಐ –1200 ಮೀಟರು
7 125 ಮಿ ಮೀ ವ್ಯಾಸದ ಸಿ ಐ –500 ಮೀಟರು
8 150 ಮಿ ಮೀ ವ್ಯಾಸದ ಸಿ ಐ –3200 ಮೀಟರು
9 200 ಮಿ ಮೀ ವ್ಯಾಸದ ಸಿ ಐ –1100 ಮೀಟರು
10 225 ಮಿ ಮೀ ವ್ಯಾಸದ ಸಿ ಐ – 2000 ಮೀಟರು

2000–2001ರಲ್ಲಿ ಜಮಖಂಡಿ ಪಟ್ಟಣ ವ್ಯಾಪ್ತಿಯಲ್ಲಿ ಮುಧೋಳ ರಸ್ತೆಯ ಗುಡ್ಡದ ಮೇಲಿರುವ ಆರ್ ಸಿ ಸಿ ಸಂಪ್ ನಿಂದ ದಾನಮ್ಮ ದೇವಸ್ಥಾನದವರೆಗೆ, ಕೋಹಿನೀರು ಗ್ಯಾರೇಜ್ ಹತ್ತಿರ ಪ್ರಭಾತ್ ನಗರದಲ್ಲಿ ಹಾಗೂ ಅಬುಬಕರ್ ದರ್ಗಾ ಹತ್ತಿರ ಅಳವಡಿಸಿದ ವಿತರಣಾ ಕೊಳವೆಗಳ ವಿವರ

1 200 ಮಿ ಮೀ ವ್ಯಾಸದ ಪಿ ವಿ ಸಿ –132 ಮೀಟರು
2 160 ಮಿ ಮೀ ವ್ಯಾಸದ ಪಿ ವಿ ಸಿ –1362 ಮೀಟರು
3 110 ಮಿ ಮೀ ವ್ಯಾಸದ ಪಿ ವಿ ಸಿ –2208 ಮೀಟರು
4 90 ಮಿ ಮೀ ವ್ಯಾಸದ ಪಿ ವಿ ಸಿ –3558 ಮೀಟರು

ಅನುಬಂಧ–ಆ

ರಬಕವಿ–ಬನಹಟ್ಟಿ ನಗರ

1996–97 ರಿಂದ 1999–2000ರಲ್ಲಿ ಪಟ್ಟಣ ವ್ಯಾಪ್ತಿಯಲ್ಲಿ ಅಶೋಕ ಕಾಲೋನಿ, ಬನಹಟ್ಟಿ ಹೊಸಭಾವಿ ಏರಿಯಾ, ಗುಂದನಕರ ಮತ್ತಿಕೆರೆ ಏರಿಯಾ, ಕೆ ಹೆಚ್ ಡಿ ಸಿ ಕಾಲೋನಿ, ಬನಹಟ್ಟಿ ಬಸವನಗರ, ಬನಹಟ್ಟಿ ಲಕ್ಷ್ಮೀ ಗುಡಿ ಏರಿಯಾ, ದರ್ಗಾ ರಸ್ತೆ, ಕೆ ಇ ಬಿ ಕಛೇರಿ ರಸ್ತೆ, ಇದಗಾ ಮೈದಾನ ರಸ್ತೆ, ದತ್ತಾತ್ರೆಯ ದೇವಸ್ಥಾನ ರಸ್ತೆ, ಬನಹಟ್ಟಿ ಪಿಲ್ಟರ್ ಹೌಸ್, ರಬಕವಿ ದುರಾದಬಾವಿ, ಪಟ್ಟಣ ಹೈಸ್ಕೂಲ, ಗಣಪತಿ ದೇವಸ್ಥಾನ ರಸ್ತೆ ಮತ್ತು ಬನಹಟ್ಟಿ ಅಶೋಕ ನಗರದಲ್ಲಿ ಅಳವಡಿಸಿದ ವಿತರಣಾ ಕೊಳವೆ ಮಾರ್ಗದ ವಿವರಗಳು

1 250 ಮಿ ಮೀ ವ್ಯಾಸದ ಪಿ ವಿ ಸಿ –532 ಮೀಟರು
2 200 ಮಿ ಮೀ ವ್ಯಾಸದ ಪಿ ವಿ ಸಿ – 785 ಮೀಟರು
3 160 ಮಿ ಮೀ ವ್ಯಾಸದ ಪಿ ವಿ ಸಿ –1825 ಮೀಟರು
4 110 ಮಿ ಮೀ ವ್ಯಾಸದ ಪಿ ವಿ ಸಿ –5596 ಮೀಟರು
5 90 ಮಿ ಮೀ ವ್ಯಾಸದ ಪಿ ವಿ ಸಿ –20262 ಮೀಟರು

ಅನುಬಂಧ–ಇ

ತೇರದಾಳ ಪಟ್ಟಣ

1995–96 ರಲ್ಲಿ ಪಟ್ಟಣ ವ್ಯಾಪ್ತಿಯಲ್ಲಿ ಅಳವಡಿಸಿದ ವಿತರಣಾ ಕೊಳವೆ ಮಾರ್ಗದ ವಿವರಗಳು

1 250 ಮಿ ಮೀ ವ್ಯಾಸದ ಪಿ ವಿ ಸಿ –1525 ಮೀಟರು
2 200 ಮಿ ಮೀ ವ್ಯಾಸದ ಪಿ ವಿ ಸಿ –195 ಮೀಟರು
3 160 ಮಿ ಮೀ ವ್ಯಾಸದ ಪಿ ವಿ ಸಿ – 796 ಮೀಟರು
4 110 ಮಿ ಮೀ ವ್ಯಾಸದ ಪಿ ವಿ ಸಿ –1156 ಮೀಟರು
5 90 ಮಿ ಮೀ ವ್ಯಾಸದ ಸಿ ಐ –6464 ಮೀಟರು

2005–2006ರಲ್ಲಿ ಪಟ್ಟಣ ವ್ಯಾಪ್ತಿಯಲ್ಲಿ ಅಳವಡಿಸಿದ ವಿತರಣಾ ಕೊಳವೆ ಮಾರ್ಗದ ವಿವರಗಳು

ದೇವರಾಜ ನಗರ

1 200 ಮಿ ಮೀ ವ್ಯಾಸದ ಡಿ ಐ 265 ಮೀಟರು
2 150 ಮಿ ಮೀ ವ್ಯಾಸದ ಡಿ ಐ 305 ಮೀಟರು
3 100 ಮಿ ಮೀ ವ್ಯಾಸದ ಡಿ ಐ 1415 ಮೀಟರು
4 80 ಮಿ ಮೀ ವ್ಯಾಸದ ಡಿ ಐ 1188 ಮೀಟರು

440 (634) **ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್)** ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ಮತ್ತು ಸವಣೂರ ತಾಲ್ಲೂಕುಗಳಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಗುತ್ತಿಗೆಯ ಟೆಂಡರ್ ಮೊತ್ತ ಎಷ್ಟು ಹಾಗು ಯಾವ ಸಂಸ್ಥೆಗೆ (ಗುತ್ತಿಗೆದಾರರು) ಗುತ್ತಿಗೆ ನೀಡಲಾಗಿದೆ,

ಆ) ಈ ಯೋಜನೆಯ ಕಾಮಗಾರಿ ಈಗ ಯಾವ ಹಂತದಲ್ಲಿದೆ (ಗ್ರಾಮವಾರು ಮಾಹಿತಿ ಒದಗಿಸುವುದು),

ಇ) ಈ ಯೋಜನೆಯಡಿಯಲ್ಲಿ ಸವಣೂರು ತಾಲ್ಲೂಕಿನ ತೊಂಡೂರ ಗ್ರಾಮದಲ್ಲಿ ವಿದ್ಯುದೀಕರಣವಾಗಿರುವ ಗ್ರಾಮಗಳ ವಿದ್ಯುತ್ ಪರಿವೀಕ್ಷಣೆಯನ್ನು ಮಾಡದೇ ವಿದ್ಯುತ್‌ಗೆ ಚಾಲನೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಪರಿವೀಕ್ಷಣೆ ಇಲ್ಲದೇ ವಿದ್ಯುತ್‌ಗೆ ಚಾಲನೆ ನೀಡಿದವರು ಯಾರು ಹಾಗು ಅವರ ಮೇಲೆ ಸರ್ಕಾರ ಯೋಗ್ಯ ಕ್ರಮ ಕೈಗೊಳ್ಳುವುದೇ

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಜೀವ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿಯಲ್ಲಿನ ಕಾಮಗಾರಿಗಳನ್ನು ಜಿಲ್ಲಾವಾರು ಕೈಗೆತ್ತಿಕೊಳ್ಳಲಾಗಿದ್ದು, ಹಾವೇರಿ ಜಿಲ್ಲೆಯ ಕಾಮಗಾರಿಗಳ ಗುತ್ತಿಗೆಯ ಟೆಂಡರ್‌ನ ಒಟ್ಟು ಮೊತ್ತ ರೂ 32 13 ಕೋಟಿಗಳಾಗಿರುತ್ತದೆ ಇದರಲ್ಲಿ ಶಿಗ್ಗಾಂವ್ ಮತ್ತು ಸವಣೂರ ತಾಲ್ಲೂಕುಗಳಲ್ಲಿನ ರಾಜೀವ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಕಾಮಗಾರಿಗಳ ಮೊತ್ತವೂ ಸೇರಿರುತ್ತದೆ ಶಿಗ್ಗಾಂವ ಮತ್ತು ಸವಣೂರ ತಾಲ್ಲೂಕುಗಳಲ್ಲಿನ ರಾಜೀವಗಾಂಧಿ ಗ್ರಾಮೀಣ ವಿದ್ದುದೀಕರಣ ಯೋಜನೆಯ ಕಾಮಗಾರಿಗಳ ಗುತ್ತಿಗೆಯ ಟೆಂಡರ್ ಮೊತ್ತ ಅನುಕ್ರಮವಾಗಿ ರೂ 2 15 ಕೋಟಿ ಮತ್ತು ರೂ 3 07 ಕೋಟಿಗಳಾಗಿರುತ್ತದೆ

ಸದರಿ ಕಾಮಗಾರಿಗಳನ್ನು ಮೆ ಎ ಬಿ ಬಿ ಲಿಮಿಟೆಡ್ ವಸಂತನಗರ, ಬೆಂಗಳೂರು ಸಂಸ್ಥೆಗೆ ವಹಿಸಲಾಗಿದೆ

ಆ) ಈ ಯೋಜನೆಯ ಶೇಕಡ 80 ರಷ್ಟು ಕಾಮಗಾರಿಗಳು ಮುಗಿದಿರುತ್ತವೆ ಗ್ರಾಮವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ

ಇ) ಈ ಯೋಜನೆಯಡಿಯಲ್ಲಿ ಸವಣೂರ ತಾಲ್ಲೂಕಿನ ತೊಂಡೂರು ಗ್ರಾಮದಲ್ಲಿ ವಿದ್ಯುದೀಕರಣವಾಗಿರುವ ಗ್ರಾಮಗಳ ವಿದ್ಯುತ್ ಪರಿವೀಕ್ಷಣೆಯನ್ನು ಮಾಡದೇ ವಿದ್ಯುತ್ ಚಾಲನೆ ನೀಡಿರುವುದು ಗಮನಕ್ಕೆ ಬಂದಿರುತ್ತದೆ

ಈ) ಶ್ರೀ ಸಿ ಎಸ್ ಭಜಂತ್ರಿ, ಮೆಕ್ಯಾನಿಕ್ ದರ್ಜೆ–2, ಹು ವಿ ಸ ಕಂ, ಸವಣೂರ ಶಾಖೆ ಇವರು ಪರಿವೀಕ್ಷಣೆ ಇಲ್ಲದೆ ವಿದ್ಯುತ್ ಚಾಲನೆ ನೀಡಿರುವುದರ ಕುರಿತು ಸಂಬಂಧಿಸಿದ ಅಧಿಕಾರಿಗಳು ಪರಿಶೀಲನೆ ನಡೆಸಿ ನೀಡಿದ ವರದಿಯನ್ನು ಆಧರಿಸಿ, ಸದರಿ ನೌಕರನನ್ನು ದಿನಾಂಕ 1 2 2007 ರಂದು ಅಮಾನತ್ತಿನಲ್ಲಿಟ್ಟು ಕ್ರಮ ಜರುಗಿಸಲಾಗಿದೆ

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಸಿಂಧುರ ಜ ರಾಜಶೇಖರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 634 ಕ್ಕೆ ಅನುಬಂಧ

ರಾಜೀವ ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ಶಿಗ್ಗಾಂವ ಮತ್ತ ಸವಣೂರ ತಾಲ್ಲೂಕುಗಳಲ್ಲಿ ಕೈಗೊಂಡ ಕಾಮಗಾರಿಗಳ ಗ್ರಾಮವಾರು ವಿವರಗಳು

ಕ್ರಸಂ	ಗ್ರಾಮ	ಗ್ರಾಮದ ಸೆನ್ಸಸ್ ಕೋಡ್ ನಂ	ಹ್ಯಾಬಿಟೇಷನ್ (ಹ್ಯಾಮ್ಲೆಟ್, ಹರಿಜನ ಬಸ್ತಿ, ಜನತಾ ಕಾಲೋನಿ ಮುಂತಾದವುಗಳು) ಕೋಡ್ ನಂಬರ್ ಸಹಿತ	ಬ್ಲಾಕಿನ ಹೆಸರು	ಜಿಲ್ಲೆಯ ಹೆಸರು	11ಕೆ ವಿ ಲೈನುಗಳು	25 ಕೆ ವಿ ಪರಿವರ್ತಕ	ಎಲ್ ಟಿ ಲೈನುಗಳು (ಕಿ ಮೀಗಳಲ್ಲಿ)		ಒಟ್ಟು ಎಲ್ ಟಿ ಲೈನಿನುಗಳು	ಒಳಗೊಂಡ ಒಟ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ
						ಕಿಮಿಗಳಲ್ಲಿ	ಸಂಖ್ಯೆ ಗಳಲ್ಲಿ	1ಫೇಸ್ 3 ವೈರ್	3 ಫೇಸ್ 5 ವೈರ್	ಗ್ರಾಮದಲ್ಲಿಯ ಒಟ್ಟು ಎಲ್ ಟಿ ಮಾರ್ಗದ ಕೈಗೊಂಡವಿವರ	
1	ಬೆಳವಲಕೊಪ್ಪ	81800		ಶಿಗ್ಗಾಂವ	ಹಾವೇರಿ			0 611		0 611	
2	ಕುಂದೂರ	82400	JC-1	ಶಿಗ್ಗಾಂವ	ಹಾವೇರಿ						
3	ಮುತ್ತಳ್ಳಿ	813700		ಶಿಗ್ಗಾಂವ	ಹಾವೇರಿ						
4	ಕಮಲನಗರ	815000		ಶಿಗ್ಗಾಂವ	ಹಾವೇರಿ	1 018	1	0 511	0 024	0 535	64
5	ತಡಸ	815200	JC-1	ಶಿಗ್ಗಾಂವ	ಹಾವೇರಿ						
6	ತಿಮ್ಮಾಪುರ	815300	JC-1	ಶಿಗ್ಗಾಂವ	ಹಾವೇರಿ			0 658		0 658	28
7	ಅಡವಿಸೂಮಾಪುರ	815400	JC-1	ಶಿಗ್ಗಾಂವ	ಹಾವೇರಿ			1 354		1 354	
8	ಮಮದಾಪುರ	815600		ಶಿಗ್ಗಾಂವ	ಹಾವೇರಿ			0 343		0 343	
9	ಕುನ್ನುರ	815700	JC-1	ಶಿಗ್ಗಾಂವ	ಹಾವೇರಿ	0 1	1	0 884	0 08	0 964	70
10	ನೀರಲಗಿ	815800		ಶಿಗ್ಗಾಂವ	ಹಾವೇರಿ			0 108		0 108	18
11	ಕಡಹಳ್ಳಿ	815900		ಶಿಗ್ಗಾಂವ	ಹಾವೇರಿ						
12	ಶ್ಯಾಡಂಬಿ	816000		ಶಿಗ್ಗಾಂವ	ಹಾವೇರಿ						
13	ದುಂಡಶಿತಾಂಡ	816100	JC-1	ಶಿಗ್ಗಾಂವ	ಹಾವೇರಿ	0 117	1	0 490	0 139	0 629	

ಕ್ರಸಂ	ಗ್ರಾಮ	ಗ್ರಾಮದ ಸೆನ್ಸಸ್ ಕೋಡ್ ನಂ	ಹ್ಯಾಬಿಟೇಷನ್ (ಹ್ಯಾಮ್ಲೆಟ್, ಹರಿಜನ ಬಸ್ತಿ, ಜನತಾ ಕಾಲೋನಿ ಮುಂತಾದವುಗಳು) ಕೋಡ್ ನಂಬರ್ ಸಹಿತ	ಬ್ಲಾಕಿನ ಹೆಸರು	ಜಿಲ್ಲೆಯ ಹೆಸರು	11ಕೆ ವಿ ಲೈನುಗಳು	25 ಕೆ ವಿ ಪರಿವರ್ತಕ	ಎಲ್ ಟಿ ಲೈನುಗಳು (ಕಿ ಮೀಗಳಲ್ಲಿ)		ಒಟ್ಟು ಎಲ್ ಟಿ ಲೈನಿನುಗಳು	ಒಳಗೊಂಡ ಒಟ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ
						ಕಿಮಿಗಳಲ್ಲಿ	ಸಂಖ್ಯೆಗಳಲ್ಲಿ	1ಪೇಸ್ 3 ವೈರ್	3 ಫೇಸ್ 5 ವೈರ್	ಗ್ರಾಮದಲ್ಲಿಯ ಒಟ್ಟು ಎಲ್ ಟಿ ಮಾರ್ಗದ ಕೈಗೊಂಡವಿವರ	
14	ಜಜೊಂಡಲಗಟ್ಟಿ	816200		ಶಿಗ್ಗಾಂವ	ಹಾವೇರಿ						
15	ಅರಟಾಳ	816300		ಶಿಗ್ಗಾಂವ	ಹಾವೇರಿ						
16	ಬಿ ಬಸಾಪುರ	816400		ಶಿಗ್ಗಾಂವ	ಹಾವೇರಿ	0 21	1	0 226	0 122	0 348	50
17	ಮಡ್ಲಿ	816500	JC-1	ಶಿಗ್ಗಾಂವ	ಹಾವೇರಿ						
18	ಹುಲಸೂಗಿ	816600		ಶಿಗ್ಗಾಂವ	ಹಾವೇರಿ			0 090		0 09	
19	ಹಿರೇಮಣಕಟ್ಟ	816700	JC-1	ಶಿಗ್ಗಾಂವ	ಹಾವೇರಿ			0 276		0 276	39
20	ಬಿಸೇಟ್ಟಕಟ್ಟಿ	816800		ಶಿಗ್ಗಾಂವ	ಹಾವೇರಿ						
21	ಗೊಟಗೋಡಿ	816900		ಶಿಗ್ಗಾಂವ	ಹಾವೇರಿ						
22	ಎಸ್ ಸೂಮಾಪುರ	817000		ಶಿಗ್ಗಾಂವ	ಹಾವೇರಿ	0 25	1	0 295	0 172	0 467	60
23	ವನಹಳ್ಳಿ	817100		ಶಿಗ್ಗಾಂವ	ಹಾವೇರಿ			0 212		0 212	13
24	ಕಾಮನಹಳ್ಳಿ	817200		ಶಿಗ್ಗಾಂವ	ಹಾವೇರಿ						13
25	ಮಾಕಾಪುರ	817300		ಶಿಗ್ಗಾಂವ	ಹಾವೇರಿ			0 095		0 095	
26	ಯತ್ತಿನಹಳ್ಳಿ	817400	JC-1	ಶಿಗ್ಗಾಂವ	ಹಾವೇರಿ			0 308		0 308	
27	ಹೋಸುರು	817500	JC-1	ಶಿಗ್ಗಾಂವ	ಹಾವೇರಿ			0 795		0795	
28	ಬಸವನಕೊಪ್ಪ	817600		ಶಿಗ್ಗಾಂವ	ಹಾವೇರಿ						
29	ಬದಾಮುರ	817700		ಶಿಗ್ಗಾಂವ	ಹಾವೇರಿ						

ಕ್ರ.ಸಂ	ಗ್ರಾಮ	ಗ್ರಾಮದ ಸೆನ್ಸಸ್ ಕೋಡ್ ನಂ	ಹ್ಯಾಬಿಟೇಷನ್ (ಹ್ಯಾಮ್ಲೆಟ್, ಹರಿಜನ ಬಸ್ತಿ ಜನತಾ ಕಾಲೋನಿ ಮುಂತಾದವುಗಳು) ಕೋಡ್ ನಂಬರ್ ಸಹಿತ	ಬ್ಲಾಕಿನ ಹೆಸರು	ಜಿಲ್ಲೆಯ ಹೆಸರು	11ಕೆ ವಿ ಲೈನುಗಳು	25 ಕೆ ವಿ ಪರಿವರ್ತಕ	ಎಲ್ ಟಿ ಲೈನುಗಳು (ಕಿ ಮೀಗಳಲ್ಲಿ)		ಒಟ್ಟು ಎಲ್ ಟಿ ಲೈನಿನುಗಳು	ಒಳಗೊಂಡ ಒಟ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ
						ಕಿಮಿಗಳಲ್ಲಿ	ಸಂಖ್ಯೆ ಗಳಲ್ಲಿ	1ಪೇಸ್ 3 ವೈರ್	3 ಫೇಸ್ 5 ವೈರ್	ಗ್ರಾಮದಲ್ಲಿಯ ಒಟ್ಟು ಎಲ್ ಟಿ ಮಾರ್ಗದ ಕೈಗೊಂಡವಿವರ	
30	ಕೋಣನಕೇರಿ	817800	JC-1	ಶಿಗ್ಗಾಂವ	ಹಾವೇರಿ	1 035	1	0 844	0 236	1 08	
31	ಮುಲಕೆರಿ	817900		ಶಿಗ್ಗಾಂವ	ಹಾವೇರಿ						
32	ಶಾಬಾಳ	818000		ಶಿಗ್ಗಾಂವ	ಹಾವೇರಿ			0 337	0 249	0 586	
33	ನೀರಲಕಟ್ಟಿ	818100		ಶಿಗ್ಗಾಂವ	ಹಾವೇರಿ						
34	ಚಂದ್ರಾಪುರ	81200	JC-1	ಶಿಗ್ಗಾಂವ	ಹಾವೇರಿ			0 200		0 2	
35	ಹಿರೇಬೆಂಡಿಗೆರೆ	818300	JC-1	ಶಿಗ್ಗಾಂವ	ಹಾವೇರಿ			0 550		0 55	
36	ಚಿಕ್ಕಬೆಂಡಿಗೇರಿ	818400		ಶಿಗ್ಗಾಂವ	ಹಾವೇರಿ			0 116		0 116	
37	ಪಾಣಿಗಟ್ಟಿ	818600	JC-1	ಶಿಗ್ಗಾಂವ	ಹಾವೇರಿ			0 584		0 584	
38	ಬಸವನಾಳ	818700	JC-1	ಶಿಗ್ಗಾಂವ	ಹಾವೇರಿ	0 036	1	1 137	0 612	1 749	110
39	ಅತ್ತಿಗೇರಿ	818800	JC-1	ಶಿಗ್ಗಾಂವ	ಹಾವೇರಿ	0 252	2	2 142	0 161	2 303	125
40	ಶಿಸುವಿನಾಳ	818900	JC-1	ಶಿಗ್ಗಾಂವ	ಹಾವೇರಿ						40
41	ಹುಲಗೂರು	819000	JC-1, JC-2	ಶಿಗ್ಗಾಂವ	ಹಾವೇರಿ	0 726	2	0 664	0 522	1 186	300
42	ಕಳಕೊಂಡ	819100	JC 1	ಶಿಗ್ಗಾಂವ	ಹಾವೇರಿ	0 116	1	0 686	0 147	0 833	67
43	ಸುಪಾರಿಗಟ್ಟಿ	819200		ಶಿಗ್ಗಾಂವ	ಹಾವೇರಿ						
44	ಬೆಳಗಲಿ	819300		ಶಿಗ್ಗಾಂವ	ಹಾವೇರಿ						

ಕ್ರಸಂ	ಗ್ರಾಮ	ಗ್ರಾಮದ ಸೆನ್ಸಸ್ ಕೋಡ್ ನಂ	ಹ್ಯಾಬಿಟೇಷನ್ (ಹ್ಯಾಮ್ಲೆಟ್, ಹರಿಜನ ಬಸ್ತಿ, ಜನತಾ ಕಾಲೋನಿ ಮುಂತಾದವುಗಳು) ಕೋಡ್ ನಂಬರ್ ಸಹಿತ	ಬ್ಲಾಕಿನ ಹೆಸರು	ಜಿಲ್ಲೆಯ ಹೆಸರು	11ಕೆ ವಿ ಲೈನುಗಳು	25 ಕೆ ವಿ ಪರಿವರ್ತಕ	ಎಲ್ ಟಿ ಲೈನುಗಳು (ಕಿ ಮೀಗಳಲ್ಲಿ)		ಒಟ್ಟು ಎಲ್ ಟಿ ಲೈನಿನುಗಳು	ಒಳಗೊಂಡ ಒಟ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ
						ಕಿಮಿಗಳಲ್ಲಿ	ಸಂಖ್ಯೆಗಳಲ್ಲಿ	1 ಪೇಸ್ 3 ವೈರ್	3 ಫೇಸ್ 5 ವೈರ್	ಗ್ರಾಮದಲ್ಲಿಯ ಒಟ್ಟು ಎಲ್ ಟಿ ಮಾರ್ಗದ ಕೈಗೊಂಡವಿವರ	
45	ಚಿಕ್ಕಮಣಿಕಟ್ಟಿ	819400	JC-1	ಶಿಗ್ಗಾಂವ	ಹಾವೇರಿ						
46	ಕಬನೂರು	819500		ಶಿಗ್ಗಾಂವ	ಹಾವೇರಿ	0 316	1	0 813	0 246	1 059	49
47	ಕೇಂಗಾಪುರ	819600	JC-1	ಶಿಗ್ಗಾಂವ	ಹಾವೇರಿ						
48	ಬನ್ನೂರು	819700	JC-1	ಶಿಗ್ಗಾಂವ	ಹಾವೇರಿ			0 876		0 876	
49	ಮುಗಳಿ	819800		ಶಿಗ್ಗಾಂವ	ಹಾವೇರಿ			0 670		0 76	39
50	ಬನ್ನಿಕೊಪ್ಪ	819900		ಶಿಗ್ಗಾಂವ	ಹಾವೇರಿ						
51	ಹಿರೇಮಲ್ಲೂರು	820000	JC-1	ಶಿಗ್ಗಾಂವ	ಹಾವೇರಿ			1 025		1 025	
52	ಗಂಜಿಗಟ್ಟಿ	820100		ಶಿಗ್ಗಾಂವ	ಹಾವೇರಿ			0 259		0 259	
53	ಶಿವಪುರ	820300		ಶಿಗ್ಗಾಂವ	ಹಾವೇರಿ	0 124	1	1 142	0 239	1 381	
54	ಚಿಕ್ಕಮಲ್ಲೂರು	820500		ಶಿಗ್ಗಾಂವ	ಹಾವೇರಿ			0 240		0 24	
55	ಕಂಕಣವಾಡ	820600		ಶಿಗ್ಗಾಂವ	ಹಾವೇರಿ			0 207		0 207	
56	ಮುದ್ದಿನಕೊಪ್ಪ	820700		ಶಿಗ್ಗಾಂವ	ಹಾವೇರಿ						
57	ತೂರುರು	820800		ಶಿಗ್ಗಾಂವ	ಹಾವೇರಿ						
58	ಕಲಕಟ್ಟಿ	820900		ಶಿಗ್ಗಾಂವ	ಹಾವೇರಿ						
59	ಮಂಚಿಕೊಪ್ಪ	821000		ಶಿಗ್ಗಾಂವ	ಹಾವೇರಿ						
60	ನಿಡಗುಂದಿ	821100	JC-1	ಶಿಗ್ಗಾಂವ	ಹಾವೇರಿ						

ಕ್ರಸಂ	ಗ್ರಾಮ	ಗ್ರಾಮದ ಸೆನ್ಸಸ್ ಕೋಡ್ ನಂ	ಹ್ಯಾಬಿಟೇಷನ್ (ಹ್ಯಾಮ್ಲೆಟ್, ಹರಿಜನ ಬಸ್ತಿ, ಜನತಾ ಕಾಲೋನಿ ಮುಂತಾದವುಗಳು) ಕೋಡ್ ನಂಬರ್ ಸಹಿತ	ಬ್ಲಾಕಿನ ಹೆಸರು	ಜಿಲ್ಲೆಯ ಹೆಸರು	11ಕೆ ವಿ ಲೈನುಗಳು	25 ಕೆ ವಿ ಪರಿವರ್ತಕ	ಎಲ್ ಟಿ ಲೈನುಗಳು (ಕಿ ಮೀಗಳಲ್ಲಿ)		ಒಟ್ಟು ಎಲ್ ಟಿ ಲೈನಿನುಗಳು	ಒಳಗೊಂಡ ಒಟ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ
						ಕಿಮಿಗಳಲ್ಲಿ	ಸಂಖ್ಯೆ ಗಳಲ್ಲಿ	1ಪೇಸ್ 3 ವೈರ್	3 ಫೇಸ್ 5 ವೈರ್	ಗ್ರಾಮದಲ್ಲಿಯ ಒಟ್ಟು ಎಲ್ ಟಿ ಮಾರ್ಗದ ಕೈಗೊಂಡವಿವರ	
61	ಹುಣಸಿಕಟ್ಟಿ	821200		ಶಿಗ್ಗಾಂವ	ಹಾವೇರಿ			0 608		0 608	40
62	ಕಲ್ಯಾಣ	821300	JC-1	ಶಿಗ್ಗಾಂವ	ಹಾವೇರಿ			0 435	0 246	0 435	40
63	ಕುರಸಾಪುರ	821400	JC-1	ಶಿಗ್ಗಾಂವ	ಹಾವೇರಿ			0 503		0 503	
64	ಚಾಕಾಪುರ	821500		ಶಿಗ್ಗಾಂವ	ಹಾವೇರಿ						
65	ಹನುಮನಹಳ್ಳಿ	821600	JC-1	ಶಿಗ್ಗಾಂವ	ಹಾವೇರಿ			0 214		0 214	
66	ಮುತಳ್ಳಿ	821700		ಶಿಗ್ಗಾಂವ	ಹಾವೇರಿ			0 146		0 146	
67	ಚಿಕ್ಕನೆಲ್ಲೂರ	821800		ಶಿಗ್ಗಾಂವ	ಹಾವೇರಿ						
68	ಬಿಸನಹಳ್ಳಿ	821900	JC-1	ಶಿಗ್ಗಾಂವ	ಹಾವೇರಿ			0 25		0 25	
69	ಹೊಟ್ಟುರು	822000		ಶಿಗ್ಗಾಂವ	ಹಾವೇರಿ			0 225		0 225	
70	ಬಾಡಾ	822100		ಶಿಗ್ಗಾಂವ	ಹಾವೇರಿ						50
71	ಸಿಮುಗಾಪುರ	822200	JC-1	ಶಿಗ್ಗಾಂವ	ಹಾವೇರಿ	0 153		0 310	0 043	0 353	1
72	ಮುಗಳಿಕಟ್ಟಿ	822300		ಶಿಗ್ಗಾಂವ	ಹಾವೇರಿ						
73	ಅಂದಲಗಿ	822400	JC-1	ಶಿಗ್ಗಾಂವ	ಹಾವೇರಿ						200
74	ಶಡಗರವಳ್ಳಿ	822500	JC-1	ಶಿಗ್ಗಾಂವ	ಹಾವೇರಿ						
75	ಹನಕನಹಳ್ಳಿ	822600		ಶಿಗ್ಗಾಂವ	ಹಾವೇರಿ						

ಕ್ರ.ಸಂ	ಗ್ರಾಮ	ಗ್ರಾಮದ ಸೆನ್ಸಸ್ ಕೋಡ್ ನಂ	ಹ್ಯಾಬಿಟೇಷನ್ (ಹ್ಯಾಮ್ಲೆಟ್, ಹರಿಜನ ಬಸ್ತಿ, ಜನತಾ ಕಾಲೋನಿ ಮುಂತಾದವುಗಳು) ಕೋಡ್ ನಂಬರ್ ಸಹಿತ	ಬ್ಲಾಕಿನ ಹೆಸರು	ಜಿಲ್ಲೆಯ ಹೆಸರು	11ಕೆ ವಿ ಲೈನುಗಳು	25 ಕೆ ವಿ ಪರಿವರ್ತಕ	ಎಲ್ ಟಿ ಲೈನುಗಳು (ಕಿ ಮೀಗಳಲ್ಲಿ)		ಒಟ್ಟು ಎಲ್ ಟಿ ಲೈನಿನುಗಳು	ಒಳಗೊಂಡ ಒಟ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ
						ಕಿಮಿಗಳಲ್ಲಿ	ಸಂಖ್ಯೆ ಗಳಲ್ಲಿ	1ಪೇಸ್ 3 ವೈರ್	3 ಫೇಸ್ 5 ವೈರ್	ಗ್ರಾಮದಲ್ಲಿಯ ಒಟ್ಟು ಎಲ್ ಟಿ ಮಾರ್ಗದ ಕೈಗೊಂಡವಿವರ	
76	ಹುನಗುಂದ	822700		ಶಿಗ್ಗಾಂವ	ಹಾವೇರಿ						
77	ಶಶಿಡ್ಲಾಪುರ	822800		ಶಿಗ್ಗಾಂವ	ಹಾವೇರಿ						
78	ಮಲನಾಯಕನಕೊಪ್ಪ	822900		ಶಿಗ್ಗಾಂವ	ಹಾವೇರಿ						
79	ಎಮ್ ಬಸರಿಕಟ್ಟಿ	823000		ಶಿಗ್ಗಾಂವ	ಹಾವೇರಿ			0 617		0 617	40
80	ನಾರಾಯಣಪುರ	823100		ಶಿಗ್ಗಾಂವ	ಹಾವೇರಿ			0 36		0 36	
81	ಮುನವಳ್ಳಿ	823200		ಶಿಗ್ಗಾಂವ	ಹಾವೇರಿ						
82	ಇಬ್ರಾಹಿಮಪುರ	823300		ಶಿಗ್ಗಾಂವ	ಹಾವೇರಿ						
83	ಸದಾಶಿವಪೇಟ	823400		ಶಿಗ್ಗಾಂವ	ಹಾವೇರಿ						
84	ಹಳೆಬಂಕಾಪುರ	823500	JC-1	ಶಿಗ್ಗಾಂವ	ಹಾವೇರಿ	0 481	1	0,616	0,129	0 745	60
85	ಹುಲಿಕಟ್ಟಿ	823600		ಶಿಗ್ಗಾಂವ	ಹಾವೇರಿ						
86	ಲಕ್ಕಿಕೊಪ್ಪ	823700		ಶಿಗ್ಗಾಂವ	ಹಾವೇರಿ						
87	ಹೂತನಹಳ್ಳಿ	823800	JC-1	ಶಿಗ್ಗಾಂವ	ಹಾವೇರಿ						
88	ಗುಡ್ಡದಚನ್ನಾಪುರ	823900	JC-1	ಶಿಗ್ಗಾಂವ	ಹಾವೇರಿ						
89	ಜಲ್ಲಿಕಟ್ಟಿ	824000		ಶಿಗ್ಗಾಂವ	ಹಾವೇರಿ						
90	ಜಕ್ಕನಕಟ್ಟಿ	824100		ಶಿಗ್ಗಾಂವ	ಹಾವೇರಿ			0 622		0 622	
					ಒಟ್ಟು	4 934	15	24 654	3 121	27 775	1516

ಸವಣೂರು ತಾಲ್ಲೂಕು

ಕ್ರ.ಸಂ	ಗ್ರಾಮ	ಗ್ರಾಮದ ಸೆನ್ಸಸ್ ಕೋಡ್ ನಂ	ಹ್ಯಾಬಿಟೇಷನ್ (ಹ್ಯಾಮ್ಲೆಟ್, ಹರಿಜನ ಬಸ್ತಿ, ಜನತಾ ಕಾಲೋನಿ ಮುಮತಾದವುಗಳು) ಕೋಡ್ ನಂಬರ್ ಸಹಿತ	ಬ್ಲಾಕಿನ ಹೆಸರು	ಜಿಲ್ಲೆಯ ಹೆಸರು	11ಕೆ ವಿ ಲೈನುಗಳು	25 ಕೆ ವಿ ಪರಿವರ್ತಕ	ಎಲ್ ಟಿ ಲೈನುಗಳು (ಕಿ ಮೀಗಳಲ್ಲಿ)		ಒಟ್ಟು ಎಲ್ ಟಿ ಲೈನಿನುಗಳು	ಒಳಗೊಂಡ ಒಟ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ
						ಕಿಮಿಗಳಲ್ಲಿ	ಸಂಖ್ಯೆ ಗಳಲ್ಲಿ	1ಪೇಸ್ 3 ವೈರ್	3 ಫೇಸ್ 5 ವೈರ್	ಗ್ರಾಮದಲ್ಲಿಯ ಒಟ್ಟು ಎಲ್ ಟಿ ಮಾರ್ಗದ ಕೈಗೊಂಡವಿವರ	
1	ಜಕ್ಕಿನಕಟ್ಟಿ	824200		ಸವಣೂರು	ಹಾವೇರಿ			0 450		0 45	
2	ಮಾದಾಪುರ	824300	JC-1	ಸವಣೂರು	ಹಾವೇರಿ	0 079	1	0 518	0 08	0 661	130
3	ಗೂನಾಳ	824400	JC-1 JC-2	ಸವಣೂರು	ಹಾವೇರಿ						
4	ಚೌಡಾಳ	824500	JC-1,	ಸವಣೂರು	ಹಾವೇರಿ						
5	ಕಾರಡಗಿ	824600	JC-1,	ಸವಣೂರು	ಹಾವೇರಿ	0 326	2	1 642	0 479	2 121	320
6	ಮಾಂತ್ರೂಡಿ	824700	JC-1, JC-2,	ಸವಣೂರು	ಹಾವೇರಿ			0 400		0 4	
7	ಚಿಲ್ಲೂರ	824800	JC-1	ಸವಣೂರು	ಹಾವೇರಿ	0 073	1	0 325	0 088	0 413	65
8	ಬಾಡ್ನಿ	824900	JC-1 ,	ಸವಣೂರು	ಹಾವೇರಿ			1 500		1 5	108
9	ಅಲ್ಲಿಪುರ	825000	JC-1,	ಸವಣೂರು	ಹಾವೇರಿ	0 277	1	0 715	0 165	0 88	122
10	ಬೇವಿನಹಳ್ಳಿ	825100	JC-1,	ಸವಣೂರು	ಹಾವೇರಿ			0 506		0 506	55
11	ಗುಂಡೂರ	825200	JC-1, JC-2,	ಸವಣೂರು	ಹಾವೇರಿ	0 044	1	0750	0 049	0,799	67
12	ಹೊಸನೀರಲಗಿ	825300	JC-1 JC-2,	ಸವಣೂರು	ಹಾವೇರಿ	0 2	1	0 090	0 176	0 266	88
13	ನಂದಿಹಳ್ಳಿ	825400		ಸವಣೂರು	ಹಾವೇರಿ						1
14	ಮಾನ್ನೂರ	825500		ಸವಣೂರು	ಹಾವೇರಿ			0 465		0 465	39

ಕ್ರಸಂ	ಗ್ರಾಮ	ಗ್ರಾಮದ ಸೆನ್ಸಸ್ ಕೋಡ್ ನಂ	ಹ್ಯಾಬಿಟೇಷನ್ (ಹ್ಯಾಮ್ಲೆಟ್, ಹರಿಜನ ಬಸ್ತಿ ಜನತಾ ಕಾಲೋನಿ ಮುಂತಾದವುಗಳು) ಕೋಡ್ ನಂಬರ್ ಸಹಿತ	ಬ್ಲಾಕಿನ ಹೆಸರು	ಜಿಲ್ಲೆಯ ಹೆಸರು	11ಕೆ ವಿ ಲೈನುಗಳು	25 ಕೆ ವಿ ಪರಿವರ್ತಕ	ಎಲ್ ಟಿ ಲೈನುಗಳು (ಕಿ ಮೀಗಳಲ್ಲಿ)		ಒಟ್ಟು ಎಲ್ ಟಿ ಲೈನಿನುಗಳು	ಒಳಗೊಂಡ ಒಟ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ
						ಕಿಮಿಗಳಲ್ಲಿ	ಸಂಖ್ಯೆ ಗಳಲ್ಲಿ	1ಪೇಸ್ 3 ವೈರ್	3 ಫೇಸ್ 5 ವೈರ್	ಗ್ರಾಮದಲ್ಲಿಯ ಒಟ್ಟು ಎಲ್ ಟಿ ಮಾರ್ಗದ ಕೈಗೊಂಡವಿವರ	
15	ತಗ್ಗಿಹಳ್ಳಿ	825600	JC-1,	ಸವಣೂರು	ಹಾವೇರಿ						
16	ಮಾಹೂರ	825800	JC-1	ಸವಣೂರು	ಹಾವೇರಿ	0 05	1	0 500	0 2	0 7	86
17	ಪಕ್ಕಿರನಂದಿಹಳ್ಳಿ	825900	,	ಸವಣೂರು	ಹಾವೇರಿ			0 488		0 488	32
18	ಚಿಕ್ಕಬೂದಿಹಾಳ	826000		ಸವಣೂರು	ಹಾವೇರಿ						2
19	ಸಾವೂರ	826100		ಸವಣೂರು	ಹಾವೇರಿ			0 370		0 37	20
20	ಬರದೂರ	826200	JC-1,	ಸವಣೂರು	ಹಾವೇರಿ						60
21	ಚಲ್ಲಾಳ	826300	JC-1,	ಸವಣೂರು	ಹಾವೇರಿ			0 500		0 5	50
22	ಹುರಳಿಕುಪಿ	826400	JC-1 JC-2	ಸವಣೂರು	ಹಾವೇರಿ	0 933	2	3,270	0 899	4 169	419
23	ತಳ್ಳಿಹಳ್ಳಿ	826500	JC-1,	ಸವಣೂರು	ಹಾವೇರಿ	0 605	1	0 560	0 05	0 61	100
24	ಹೊಸಳ್ಳಿ	826600	JC-1, JC-2	ಸವಣೂರು	ಹಾವೇರಿ			0 487		0 487	14
25	ತೊಂಡೂರು	826700	JC-1, JC-2	ಸವಣೂರು	ಹಾವೇರಿ		1	3 110	0 424	3 534	310
26	ಮೆಳ್ಳಾಗಟ್ಟಿ	826800	JC-1,	ಸವಣೂರು	ಹಾವೇರಿ						
27	ಕುರುಬರಮಲ್ಲೂರು	826900	JC-1, JC-2,	ಸವಣೂರು	ಹಾವೇರಿ	0 316	2				176
28	ಕಲ್ಲಡು	827000		ಸವಣೂರು	ಹಾವೇರಿ						15
29	ತವರಮೆಳ್ಳಿಹಳ್ಳಿ	827100	JC-1, JC-2,	ಸವಣೂರು	ಹಾವೇರಿ			0 308		0 308	72
30	ಹಳೆಹಲಸೂರ	827200		ಸವಣೂರು	ಹಾವೇರಿ						48

ಕ್ರಸಂ	ಗ್ರಾಮ	ಗ್ರಾಮದ ಸೆನ್ಸಸ್ ಕೋಡ್ ನಂ	ಹ್ಯಾಬಿಟೇಷನ್ (ಹ್ಯಾಮ್ಲೆಟ್, ಹರಿಜನ ಬಸ್ತಿ, ಜನತಾ ಕಾಲೋನಿ ಮುಂತಾದವುಗಳು) ಕೋಡ್ ನಂಬರ್ ಸಹಿತ	ಬ್ಲಾಕಿನ ಹೆಸರು	ಜಿಲ್ಲೆಯ ಹೆಸರು	11ಕೆ ವಿ ಲೈನುಗಳು	25 ಕೆ ವಿ ಪರಿವರ್ತಕ	ಎಲ್ ಟಿ ಲೈನುಗಳು (ಕಿ ಮೀಗಳಲ್ಲಿ)		ಒಟ್ಟು ಎಲ್ ಟಿ ಲೈನಿನುಗಳು	ಒಳಗೊಂಡ ಒಟ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ
						ಕಿಮಿಗಳಲ್ಲಿ	ಸಂಖ್ಯೆ ಗಳಲ್ಲಿ	1ಪೇಸ್ 3 ವೈರ್	3 ಫೇಸ್ 5 ವೈರ್	ಗ್ರಾಮದಲ್ಲಿಯ ಒಟ್ಟು ಎಲ್ ಟಿ ಮಾರ್ಗದ ಕೈಗೊಂಡವಿವರ	
30	ಹಳೆಹಲಸೂರ	827200		ಸವಣೂರ	ಹಾವೇರಿ						48
31	ಕುನಿಮೆಳ್ಳಿಹಳ್ಳಿ	827300	JC-1 JC-2,	ಸವಣೂರ	ಹಾವೇರಿ						
32	ಮನ್ನಂಗಿ	827400	JC-1,	ಸವಣೂರ	ಹಾವೇರಿ						
33	ಯಲವಗಿ	827500	JC-1,	ಸವಣೂರ	ಹಾವೇರಿ	0 179	1	1 707	0 062	1 769	120
34	ಹುವಿನಶಿಗ್ಲಿ	827600	JC-1, JC-2,	ಸವಣೂರ	ಹಾವೇರಿ	0 100	1	0 922	0 06	0 982	105
35	ಬಸವನಕೊಪ್ಪ	827700	JC-1, JC-2,	ಸವಣೂರ	ಹಾವೇರಿ			0 295		0 295	19
36	ಹೆಸರೂರ	827800	JC-1, JC-2,	ಸವಣೂರ	ಹಾವೇರಿ	0 099	1	0 860	0 26	1 12	252
37	ಸಿದ್ದಾಪೂರ	827900	JC-1,	ಸವಣೂರ	ಹಾವೇರಿ			0 361		0 361	120
38	ಹೊನ್ನಿಕೊಪ್ಪ	828100	JC-1,	ಸವಣೂರ	ಹಾವೇರಿ			0 212		0 212	74
39	ನಾಯಿಕೇರೂರ	828200	JC-1, JC-2,	ಸವಣೂರ	ಹಾವೇರಿ	0 280	1	0 448		0 448	114
40	ಮೂರುತೀಪುರ	828300		ಸವಣೂರ	ಹಾವೇರಿ			0 502		0 502	27
41	ಶಿರಬಡಗಿ	828400	JC-1, JC-2,	ಸವಣೂರ	ಹಾವೇರಿ	0 178	1	2 000	0 156	2 156	150
42	ವಡ್ನಿಕೊಪ್ಪ	828600	JC-1,	ಸವಣೂರ	ಹಾವೇರಿ	0 135	1	0 420	0 083	0 503	50
43	ಕಡಕೋಳ	828700	JC-1, JC-2,	ಸವಣೂರ	ಹಾವೇರಿ	0 840	3	2 880	0 636	3 516	300
44	ಪೆರಮವಾಡಿ	828800		ಸವಣೂರ	ಹಾವೇರಿ						5

ಕ್ರಸಂ	ಗ್ರಾಮ	ಗ್ರಾಮದ ಸೆನ್ಸಸ್ ಕೋಡ್ ನಂ	ಹ್ಯಾಬಿಟೇಷನ್ (ಹ್ಯಾಮ್ಲೆಟ್, ಹರಿಜನ ಬಸ್ತಿ ಜನತಾ ಕಾಲೋನಿ ಮುಂತಾದವುಗಳು) ಕೋಡ್ ನಂಬರ್ ಸಹಿತ	ಬ್ಲಾಕಿನ ಹೆಸರು	ಜಿಲ್ಲೆಯ ಹೆಸರು	11ಕೆ ವಿ ಲೈನುಗಳು	25 ಕೆ ವಿ ಪರಿವರ್ತಕ	ಎಲ್ ಟಿ ಲೈನುಗಳು (ಕಿ ಮೀಗಳಲ್ಲಿ)		ಒಟ್ಟು ಎಲ್ ಟಿ ಲೈನಿನುಗಳು	ಒಳಗೊಂಡ ಒಟ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ
						ಕಿಮಿಗಳಲ್ಲಿ	ಸಂಖ್ಯೆ ಗಳಲ್ಲಿ	1ಪೇಸ್ 3 ವೈರ್	3 ಫೇಸ್ 5 ವೈರ್	ಗ್ರಾಮದಲ್ಲಿಯ ಒಟ್ಟು ಎಲ್ ಟಿ ಮಾರ್ಗದ ಕೈಗೊಂಡವಿವರ	
45	ಕಲಲಿವಾಳ	828800	JC-1 JC-2,	ಸವಣೂರ	ಹಾವೇರಿ			1 000		1	113
46	ಬೈರಾಪುರ	828900	JC-1,	ಸವಣೂರ	ಹಾವೇರಿ			0 221		0 221	60
47	ಇಚ್ಚಂಗಿ	829000	JC-1 JC-2	ಸವಣೂರ	ಹಾವೇರಿ	0 4	1	0 511	0 1	0 611	125
48	ಸೇವಾಲಾಲಪುರ	829100		ಸವಣೂರ	ಹಾವೇರಿ						
49	ಕ್ರಿಸ್ತಾಪುರ	829100		ಸವಣೂರ	ಹಾವೇರಿ			0 900		0 9	100
50	ಹತ್ತಿಮತ್ತೂರ	829200	JC-1 JC 2,& JC 3	ಸವಣೂರ	ಹಾವೇರಿ	1 982	3	1 850	0 386	2 236	415
51	ಅಲ್ಲಾಪುರ	829300	JC-1 JC-2	ಸವಣೂರು	ಹಾವೇರಿ						
52	ಕಳಕೊಡ	829400	JC-1,	ಸವಣೂರು	ಹಾವೇರಿ						
53	ಇಚಂಯಲ್ಲಾಪೂರ	829500	JC-1, JC-2,	ಸವಣೂರು	ಹಾವೇರಿ			0 250		0 25	30
54	ಹಿರೇಮರಳಿಹಳ್ಳಿ	829600	JC-1, JC-2,	ಸವಣೂರು	ಹಾವೇರಿ			0 320		0 32	103
55	ಚಿಕ್ಕಮರಳಿಹಳ್ಳಿ	829700	JC-1	ಸವಣೂರು	ಹಾವೇರಿ						80
56	ಡೊಂಬರಮತ್ತೂರು	829800	JC-1	ಸವಣೂರು	ಹಾವೇರಿ			0 450		0 45	103

:- 67

ಕ್ರ ಸಂ	ಗ್ರಾಮ	ಗ್ರಾಮದ ಸೆನ್ಸಸ್ ಕೋಡ್ ನಂ	ಹ್ಯಾಬಿಟೇಷನ್ (ಹ್ಯಾಮ್ಲೆಟ್ ಹರಿಜನ ಬಸ್ತಿ, ಜನತಾ ಕಾಲೋನಿ ಮುಂತಾದವುಗಳು) ಕೋಡ್ ನಂಬರ್ ಸಹಿತ	ಬ್ಲಾಕಿನ ಹೆಸರು	ಜಿಲ್ಲೆಯ ಹೆಸರು	11ಕೆ ವಿ ಲೈನುಗಳು	25 ಕೆ ವಿ ಪರಿವರ್ತಕ	ಎಲ್ ಟಿ ಲೈನುಗಳು (ಕಿ ಮೀಗಳಲ್ಲಿ)		ಒಟ್ಟು ಎಲ್ ಟಿ ಲೈನಿನುಗಳು	ಒಳಗೊಂಡ ಒಟ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ
						ಕಿಮಿಗಳಲ್ಲಿ	ಸಂಖ್ಯೆ ಗಳಲ್ಲಿ	1ಪೇಸ್ 3 ವೈರ್	3 ಫೇಸ್ 5 ವೈರ್	ಗ್ರಾಮದಲ್ಲಿಯ ಒಟ್ಟು ಎಲ್ ಟಿ ಮಾರ್ಗದ ಕೈಗೊಂಡವಿವರ	
57	ಕ ಬಿ ತಿಮ್ಮಾಪೂರ	829900	JC-1,	ಸವಣೂರ	ಹಾವೇರಿ						20
58	ಕಳಸೂರ	830000	JC-1, JC-2	ಸವಣೂರ	ಹಾವೇರಿ	0 463	1	0 986	0 062	1 048	150
59	ಮಂಟಗಣಿ	830100	JC-1,	ಸವಣೂರ	ಹಾವೇರಿ	0 436	1	0 345	0 11	0 455	50
60	ಕಲಕೋಟಿ	830200	JC-1,	ಸವಣೂರ	ಹಾವೇರಿ	0 916	1	0 746	0 046	0 792	185
61	ಹಿರೇಮುಗದೂರ	830300	JC-1,	ಸವಣೂರ	ಹಾವೇರಿ						50
62	ನದೀನೀರಲಗಿ	830400	JC-1,	ಸವಣೂರ	ಹಾವೇರಿ			0 150		0 15	15
63	ಚಿಕ್ಕಮುಗದೂರ	830500	JC-1,	ಸವಣೂರ	ಹಾವೇರಿ	1 500	1	0 600	0 14	0 74	50
64	ಅರಳಿಹಳ್ಳಿ	830600	JC-1	ಸವಣೂರ	ಹಾವೇರಿ			0 330		0 33	50
					ಒಟ್ಟು	9 691	31	36 283	4 711	40 994	5434

441 **ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್)** ಮಾನ್ಯ ಪೌರಾಡಳಿತ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರ ಪುರಸಭೆಯ ಮುಖ್ಯಾಧಿಕಾರಿಯ ನಿರ್ಲಕ್ಷತನದಿಂದ IDSMT ಯೋಜನೆಯಡಿಯಲ್ಲಿ ನಿರ್ಮಾಣಗೊಂಡಿರುವ ಮಳಿಗೆಗಳು ಖಾಲಿ ಇದ್ದು ಪುರಸಭೆಗೆ ಬರುವ ಆದಾಯ ಬರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಖಾಲಿ ಇರುವ ಮಳಿಗೆಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರ ಯೋಗ್ಯ ಕ್ರಮ ಕೈಗೊಳ್ಳುವುದೇ,

ಇ) ಸವಣೂರ ಪುರಸಭೆಗೆ ಕರ್ನಾಟಕ ನಗರ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯ ಮೂಲಕ KMRP ಗೆ ಆಯ್ಕೆಗೊಂಡಿದ್ದರೂ ಅದನ್ನು ಇಲ್ಲಿಯವರೆವಿಗೂ ಕಾರ್ಯರೂಪಕ್ಕೆ ತರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ಈ ಯೋಜನೆಗೆ ತೀವ್ರಗತಿಯಲ್ಲಿ ಹಣ ಬಿಡುಗಡೆಗೊಳಿಸಿ ಕಾರ್ಯರೂಪಕ್ಕೆ ತರಲಾಗುವುದೇ?

ಶ್ರೀ ಆರ್ ಶ್ರೀನಿವಾಸ್ (ಪೌರಾಡಳಿತ ಸಚಿವರು)

ಅ) ಸವಣೂರ ಪುರಸಭೆ ವ್ಯಾಪ್ತಿಯಲ್ಲಿ IDSMT ಯೋಜನೆಯಡಿಯಲ್ಲಿ ಒಟ್ಟು 80 ಮಳಿಗೆಗಳನ್ನು ನಿರ್ಮಿಸಲಾಗಿದ್ದು ಈಗಾಗಲೇ 71 ಮಳಿಗೆಗಳನ್ನು ಬಹಿರಂಗ ಹರಾಜು ಮೂಲಕ ಗುತ್ತಿಗೆಗೆ ನೀಡಲಾಗಿದೆ ಉಳಿದ 9 ಮಳಿಗೆಗಳಿಗೆ ಬಿಡ್ಡುದಾರರು ಭಾಗವಹಿಸದೇ ಇರುವುದರಿಂದ ಖಾಲಿ ಇರುತ್ತದೆ

ಆ) ಖಾಲಿ ಇರುವ 9 ಮಳಿಗೆಗಳನ್ನು ಮರು ಹರಾಜು ಮೂಲಕ ವಿಲೇವಾರಿ ಮಾಡಲು ಕೂಡಲೇ ಕ್ರಮ ಕೈಗೊಳ್ಳಲಾಗುವುದು

ಇ) ಸವಣೂರ ಪುರಸಭೆಗೆ ರೂ 400 ಲಕ್ಷಗಳ ಬಂಡವಾಳ ಹೂಡಿಕೆ ಯೋಜನೆಯನ್ನು ತಯಾರಿಸಲಾಗಿದೆ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಯೋಜನಾ ಸಮಾಲೋಚಕರನ್ನು ನೇಮಿಸುವ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಶೀಘ್ರದಲ್ಲಿಯೇ ನೇಮಕಾತಿ ಮಾಡಲಾಗುವುದು

ಈ) ಯೋಜನಾ ವರದಿಗೆ ಜಿಲ್ಲಾ ಮಟ್ಟದ ಅನುಷ್ಠಾನ ನಮಿತಿಯಿಂದ ಅನುಮೋದನೆ ದೊರಕಿದ ಕೂಡಲೇ ಹಣವನ್ನು ಬಿಡುಗಡೆ ಮಾಡಲಾಗುವುದು

442 **ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್)** ಮಾನ್ಯ ಕಂದಾಯ ನಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲೂಕಾ-ಬಾಡಾ ಗ್ರಾಮದ ಸಂತ ಶ್ರೀ ಕನಕದಾಸರು ಜನ್ಮ ತಾಳಿದ ಸು–ಕ್ಷೇತ್ರವಾಗಿದ್ದರೂ ಇಲ್ಲಿಯವರೆವಿಗೂ ಯಾವುದೇ ಅಭಿವೃದ್ಧಿ ಕಾಣದೇ ಅತೀ ಹಿಂದುಳಿದ ಗ್ರಾಮವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಬಾಡಾ ಗ್ರಾಮವು ಭಾವೈಕ್ಯತೆಯ ಕೇಂದ್ರವಾಗಿರುವುದರಿಂದ ಸಂತ ಶ್ರೀ ಕನಕದಾಸರ ಪ್ರಾಧಿಕಾರವನ್ನು ಸ್ಥಾಪಿಸಲು ಸರ್ಕಾರ ಕ್ರಮಕೈಗೊಳ್ಳುವುದೇ,

ಇ) ಹಾಗಿದ್ದಲ್ಲಿ ಯಾವಾಗ ಸ್ಥಾಪನೆ ಮಾಡಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಬಂದಿದೆ

ಆ) ಸರ್ಕಾರವು ಈಗಾಗಲೇ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮವನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಹಾಗೂ ಈ ಅಧಿನಿಯಮಯವನ್ನು ಜಾರಿಗೆ ಬರುವುದನ್ನು ಬಾಕಿ ಇಟ್ಟು ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರವನ್ನು ಕಾರ್ಯಾದೇಶದ ಮೂಲಕ ಸರ್ಕಾರಿ ಆದೇಶ ಸಂ ಕಂಇ ಆರ್‌ಇಹೆಚ್ 2005 ದಿನಾಂಕ 11 1 2007 ರಂದು ರಚನೆ ಮಾಡಿರುತ್ತದೆ ಅದರಲ್ಲಿ ಬಾಡಾ ಗ್ರಾಮದ ಅಭಿವೃದ್ಧಿಯ ಬಗ್ಗೆ ಆದ್ಯತೆ ಮೇಲೆ ಪರಿಗಣಿಸಲಾಗಿದೆ

ಇ) ಉದ್ಭವಿಸುವುದಿಲ್ಲ

443 (637) **ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್)** ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವಣೂರ ಬಸ್ ಘಟಕದಲ್ಲಿರುವ ಅನೇಕ ಬಸ್‌ಗಳು ಸುಮಾರು 8 ಲಕ್ಷ ಕಿ ಮೀಗಿಂತ ಹೆಚ್ಚಿಗೆ ಓಡಿ ನಿರುಪಯುಕ್ತ (ಸ್ಕ್ರ್ಯಾಪ್) ಹಾಗೂ ಕವಚಗಳು ಸರಿಯಿಲ್ಲದೆ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನದಲ್ಲಿದೆಯೇ,

ಆ) ಸವಣೂರ ಬಸ್ ಘಟಕದಿಂದ ಇನ್ನೂ ಅನೇಕ ಹೊಸ ಅನುಸೂಚಿಗಳನ್ನು ಕಾರ್ಯಾಚರಣೆಗೆ ತರಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ?

ಶ್ರೀ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಹೌದು

ಈ ಘಟಕದಲ್ಲಿ 8 ವಾಹನಗಳು ಮಾತ್ರ 8 ಲಕ್ಷ ಕಿ ಮೀಗಳು ಕ್ರಮಿಸಿದ್ದು, ಎಲ್ಲಾ ವಾಹನಗಳು ಸುಸ್ಥಿತಿಯಲ್ಲಿರುತ್ತದೆ

ಆ) 2006-07 ಮತ್ತು 2007-08 ನೇ ಸಾಲಿನ ಕ್ರಿಯಾ ಯೋಜನೆಯಡಿಯಲ್ಲಿ ಸವಣೂರ ಘಟಕದಿಂದ 8 ಹೊಸ ಅನುಸೂಚಿಗಳನ್ನು ಕಾರ್ಯಾಚರಣೆಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ

444 (451) **ಶ್ರೀ ಶ್ರೀನಿವಾಸಗೌಡ ಕೆ (ಕೋಲಾರ)** ಮಾನ್ಯ ಲೋಕೋವಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಲೋಡ್ ಶೆಡ್ಡಿಂಗ್ ವಿದ್ಯುಚ್ಛಕ್ತಿ ಇಲ್ಲದೆ ಎಷ್ಟು ಗಂಟೆ ವಿದ್ಯುತ್ ನ್ನು ಒದಗಿಸಲಾಗುತ್ತಿದೆ,

ಆ) ಹಾಗಿದ್ದಲ್ಲಿ, ಇದುವರೆವಿಗೂ ಲೋಡ್ ಶೆಡ್ಡಿಂಗ್ ಇಲ್ಲದೆ ಎಷ್ಟು ಗಂಟೆ ಕಾಲ ವಿದ್ಯುಚ್ಛಕ್ತಿ ಕೊಡಲಾಗಿದೆ,

ಇ) ಜಿಲ್ಲೆಯಲ್ಲಿ ವಿದ್ಯುತ್ ಕೊರತೆಯಿಂದ ಬೆಳೆ ನಾಶವಾಗಿರುವುದು ನಿಜವಲ್ಲವೆ,

ಈ) ರಾಜ್ಯದ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವ ಎಲ್ಲಾ ನದಿಗಳು ತುಂಬಿದ್ದರೂ ಕೂಡ ದಿನಕ್ಕೆ 16 ಗಂಟೆ ವಿದ್ಯುಚ್ಛಕ್ತಿ ಒದಗಿಸದೇ ಇರಲು ಕಾರಣಗಳೇನು,

ಉ) ನಗರ ಪ್ರದೇಶ ವ್ಯಾಪ್ತಿಯಲ್ಲಿ ವಿದ್ಯುಚ್ಛಕ್ತಿ ಕೊರತೆಯನ್ನು ನೀಗಿಸಲು ಪರಿಹಾರಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮತ್ತು ಆ) ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ದಿನವಹಿ 9 ಗಂಟೆಗಳ ಅವಧಿಗೆ 3 ಫೇಸ್ ನಲ್ಲಿ 9 ಗಂಟೆಗಳ ಅವಧಿಗೆ ಸಿಂಗಲ್‌ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಬಾಕಿ

ಉಳಿದ 6 ಗಂಟೆಯ ಅವಧಿಯಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ ಆದರೆ ಕೆಲವು ಪ್ರದೇಶಗಳಲ್ಲಿ ತಾಂತ್ರಿಕ ಇತಿಮಿತಿಗಳಿಂದಾಗಿ ಸ್ವಲ್ಪ ಮಾರ್ಪಾಟುಗಳನ್ನ ಮಾಡುವುದು ಅನಿವಾರ್ಯವಾಗುತ್ತದೆ ಅಲ್ಲದೇ ಕರ್ನಾಟಕವೂ ಸಹಾ ದಕ್ಷಿಣ ರಾಜ್ಯಗಳ ವಿದ್ಯುತ್ ವ್ಯವಸ್ಥೆಯ ಒಂದು ಭಾಗವಾಗಿರುವುದರಿಂದ ಗ್ರಿಡ್ ಶಿಸ್ತನ್ನು ಕಾಪಾಡುವುದು ಬಹಳ ಅಗತ್ಯವಾಗಿರುತ್ತದೆ ಇಲ್ಲದಿದ್ದಲ್ಲಿ, ಇಡೀ ದಕ್ಷಿಣ ರಾಜ್ಯಗಳ ವಿದ್ಯುತ್ ವ್ಯವಸ್ಥೆಯೇ ಸಂಪೂರ್ಣ ಕುಸಿಯುವ ಸಂಭವವಿರುತ್ತದೆ ಗ್ರೇಡ್ ಶಿಸ್ತನ್ನು ಕಾಪಾಡುವ ಸಮಯದಲ್ಲಿ ವಿದ್ಯುತ್ ವ್ಯವಸ್ಥೆಯ ಫ್ರೀಕ್ವೆನ್ಸಿ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕಾಗಿರುವುದರಿಂದ ಫ್ರೀಕ್ವೆನ್ಸಿ ನಿಗದಿತ ಮಟ್ಟದಲ್ಲಿ ಇರುವಂತೆ ನೋಡಿಕೊಳ್ಳಲು ಕೆಲವೊಮ್ಮೆ ಅನಿವಾರ್ಯವಾಗಿ ಲೋಡ್ ಶೆಡ್ಡಿಂಗ್ ನಿರ್ವಹಿಸಬೇಕಾಗಿರುತ್ತದೆ

ಕೋಲಾರ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಸ್ವಲ್ಪ ಮಾರ್ಪಾಡುಗಳನ್ನು ಮಾಡಿಕೊಂಡು ವಿದ್ಯುತ್ ಸರಬರಾಜು ಮಾಡುವ ಫೀಡರ್ ಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿ ಒಂದು ಗುಂಪಿಗೆ 8 ಗಂಟೆ ಅವಧಿಗೆ 3 ಫೇಸ್ ನಲ್ಲಿ 9 ಗಂಟೆಗಳ ಅವಧಿಗೆ ಸಿಂಗಲ್ ಫೇಸ್ ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಬಾಕಿ 7 ಗಂಟೆಗಳ ಅವಧಿಗೆ ವಿದ್ಯುತ್ ಸರಬರಾಜು ಇರುವುದಿಲ್ಲ (ಲೋಡ್ ಶೆಡ್ಡಿಂಗ್ ಮಾಡಲಾಗುತ್ತದೆ) ಇನ್ನೊಂದು ಗುಂಪಿಗೆ 9 ಗಂಟೆ ಅವಧಿಗೆ 3 ಫೇಸ್ ನಲ್ಲಿ 9 ಗಂಟೆಗಳ ಅವಧಿಗೆ ಸಿಂಗಲ್ ಫೇಸ್ ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಬಾಕಿ 6 ಗಂಟೆಗಳ ಅವಧಿಗೆ ವಿದ್ಯುತ್ ಸರಬರಾಜು ಇರುವುದಿಲ್ಲ (ಲೋಡ್ ಶೆಡ್ಡಿಂಗ್ ಮಾಡಲಾಗುತ್ತದೆ) ಈ ಎರಡೂ ಗುಂಪುಗಳ ವಿದ್ಯುತ್ ಸರಬರಾಜಿನ ಸಮಯ ಮತ್ತು ಲೋಡ್ ಶೆಡ್ಡಿಂಗ್ ಅವಧಿಯನ್ನು ವಾರಕ್ಕೊಮ್ಮೆ ಅದಲು ಬದಲು ಮಾಡಲಾಗುತ್ತಿದೆ ಇದರಿಂದ ಎರಡೂ ಗುಂಪುಗಳ ನಡುವೆ ವಿದ್ಯುತ್ ಸರಬರಾಜು ಹಾಗೂ ಲೋಡ್ ಶೆಡ್ಡಿಂಗ್ ವಿಷಯಗಳಲ್ಲಿ ತಾರತಮ್ಯ ಉಂಟಾಗುವುದಿಲ್ಲ

ಇ) ರಾಜ್ಯವು ಎದುರಿಸುತ್ತಿರುವ ವಿದ್ಯುತ್ ಕೊರತೆಯ ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ನಿಯಮಿತ ಲೋಡ್ ಶೆಡ್ಡಿಂಗ್ ನಿರ್ವಹಿಸುವುದು ಅನಿವಾರ್ಯವಾಗಿರುತ್ತದೆ ಆಶ್ವಾಸಿತ ಅವಧಿಗೆ 3 ಫೇಸ್‌ನಲ್ಲಿ ವಿದ್ಯುತ್

ಸರಬರಾಜು ಒದಗಿಸಲು ಕವಿಪ್ರನಿನಿ ಮತ್ತು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿವೆ

ಈ) ರಾಜ್ಯದ ಪ್ರಮುಖ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳ ಜಲಾನಯನ ಪ್ರದೇಶಗಳಲ್ಲಿ ಉಂಟಾದ ಉತ್ತಮ ಮಳೆಯಿಂದಾಗಿ ಜಲಾಶಯಗಳು ತುಂಬಿದ್ದರೂ ಸಹ ರಾಜ್ಯದ ಬಹುತೇಕ ಜಿಲ್ಲೆಗಳು ಮಳೆಯ ಅಭಾವದಿಂದಾಗಿ ಬರಗಾಲಕ್ಕೆ ತುತ್ತಾಗಿವೆ ಈ ಕಾರಣದಿಂದ ನೀರಾವರಿ ಪಂಪ ಸೆಟ್ಟುಗಳಿಂದ ವಿದ್ಯುತ್ ಬೇಡಿಕೆ ಹೆಚ್ಚಾಗಿ, ಕಳೆದ ವರ್ಷವಾದ 2005–06ಕ್ಕೆ ಹೋಲಿಸಿದಲ್ಲಿ ಪ್ರಸಕ್ತ ವರ್ಷದಲ್ಲಿನ ವಿದ್ಯುತ್ ಬೇಡಿಕೆ ಹೆಚ್ಚಾಗಿರುತ್ತದೆ ಕಳೆದ ವರ್ಷವಾದ 2005–06ರಲ್ಲಿ ಏಪ್ರಿಲ್ –05 ರಿಂದ ಜನವರಿ 06 ರವರೆಗಿನ ಅವಧಿಯಲ್ಲಿ ಬಳಕೆಯಾದ ವಿದ್ಯುತ್ತಿನ ಪ್ರಮಾಣ 27,424 ದಶಲಕ್ಷ ಯೂನಿಟ್ಟುಗಳು, ಆದರೆ ಪ್ರಸಕ್ತ ವರ್ಷದಲ್ಲಿ ಏಪ್ರಿಲ್–06 ರಿಂದ ಜನವರಿ–07ರವರೆಗಿನ ಅವಧಿಯಲ್ಲಿ ಪೂರೈಕೆ ಮಾಡಲಾದ ವಿದ್ಯುತ್ತಿನ ಪ್ರಮಾಣ 32 692 ದಶಲಕ್ಷ ಯೂನಿಟ್ಟುಗಳು 5267 ದಶಲಕ್ಷ ಯೂನಿಟ್ಟುಗಳಷ್ಟು (ಶೇ 19 ರಷ್ಟು) ವಿದ್ಯುತ್ ನ್ನು ಪ್ರಸಕ್ತ ವರ್ಷದಲ್ಲಿ ಹೆಚ್ಚುವರಿಯಾಗಿ ಸರಬರಾಜು ಮಾಡಲಾಗಿರುತ್ತದೆ ಜಲಾಶಯಗಳು ತುಂಬಿದ ಪರಿಣಾಮ ಜಲ ವಿದ್ಯುತ್ ಲಭ್ಯತೆ ಅಧಿಕಗೊಂಡಿದ್ದರಿಂದ ಮುಂಗಾರು ವಿಫಲಗೊಂಡ ತಿಂಗಳುಗಳಾದ ಜುಲೈ, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ –06 ತಿಂಗಳುಗಳಲ್ಲಿ ರೈತರ ಹಿತದೃಷ್ಟಿಯಿಂದ ಲೋಡ್ ಶೆಡ್ಡಿಂಗ್ ನಿರ್ವಹಿಸದೆಯೇ ನೀರಾವರಿ ಪಂಪುಸೆಟ್ಟುಗಳ ಹೆಚ್ಚುವರಿ ವಿದ್ಯುತ್ ಬೇಡಿಕೆಯನ್ನು ಪೂರೈಕೆ ಮಾಡಲಾಯಿತು ಆದರೆ ಈಗ ಬೇಸಿಗೆ ಪ್ರಾರಂಭವಾಗುತ್ತಿದ್ದು, ಮುಂದಿನ ತಿಂಗಳುಗಳಲ್ಲಿ ವಿದ್ಯುತ್ ಬೇಡಿಕೆ ಮತ್ತಷ್ಟು ಹೆಚ್ಚಳಗೊಳ್ಳುವುದರಿಂದ ವಿದ್ಯುತ್ ಲಭ್ಯತೆ ಮತ್ತು ಬೇಡಿಕೆಯ ನಡುವೆ ಸಮತೋಲನವನ್ನು ಕಾಯ್ದುಕೊಳ್ಳಲು ಗ್ರಾಮಾಂತರ ಪ್ರದೇಶಗಳಲ್ಲಿ ನಿಯಮಿತ ಲೋಡ್ ಶೆಡ್ಡಿಂಗ್ ನಿರ್ವಹಿಸಬೇಕಾಗಿರುತ್ತದೆ

ಉ) ನಗರ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್ ನ್ನು ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಮಾಡಲಾಗುತ್ತದೆ ನಗರ ಪ್ರದೇಶಗಳಲ್ಲಿ ದಿನವಹಿ 24 ಗಂಟೆಗಳ ನಿರಂತರ ವಿದ್ಯುತ್ ಸರಬರಾಜಿನ ವ್ಯವಸ್ಥೆಗೆ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಆರ್ಥಿಕ ಹಿತ ದೃಷ್ಟಿಯಿಂದ ಇದು ಅಗತ್ಯವೂ ಆಗಿದೆ ಕವಿಪ್ರನಿನಿ ಮತ್ತು ವಿದ್ಯುತ್

ಸರಬರಾಜು ಕಂಪನಿಗಳು ನಗರ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ

1) ಹೊಸ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆ

2) ಹಾಲಿ ಇರುವ ವಿದ್ಯುತ್ ಉಪಕೇಂದ್ರಗಳ ಬಲವರ್ಧನೆ

3) ವಿತರಣಾ ವ್ಯವಸ್ಥೆಯ ಬಲಪಡಿಸುವಿಕೆ

4) ವಿದ್ಯುತ್ ಪ್ರಸರಣಾ ಮಾರ್ಗಗಳ ಬಲಪಡಿಸುವಿಕೆ ಮತ್ತು ಹೊಸ ವಿದ್ಯುತ್ ಪ್ರಸರಣಾ ಮಾರ್ಗಗಳ ನಿರ್ಮಾಣ

5) ವಿತರಣಾ ವ್ಯವಸ್ಥೆಯಲ್ಲಿ ಹೆಚ್ಚುವರಿ ವಿತರಣಾ ಟ್ರಾನ್ಸ್ ಫಾರ್ಮರ್ ಗಳ ಅಳವಡಿಕೆ

ವಿದ್ಯುತ್ ಕೊರತೆ ರಾಜ್ಯ ವ್ಯಾಪ್ತಿ ವಿಷಯವಾಗಿರುವುದರಿಂದ, ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವುದು ವಿದ್ಯುತ್ ಕೊರತೆಯ ನಿವಾರಣೆಗೆ ಪ್ರಮುಖ ಪರಿಹಾರವಾಗಿದೆ ಆದುದರಿಂದ ಮುಂದಿನ 3 ರಿಂದ 4 ವರ್ಷಗಳ ಅವಧಿಯಲ್ಲಿ ಸುಮಾರು 3000 ಮೆಗಾವಾಟ್‌ನಷ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚುವರಿಯಾಗಿ ವಿದ್ಯುತ್ ವ್ಯವಸ್ಥೆಗೆ ಸೇರ್ಪಡೆಗೊಳಿಸಲು ಪ್ರಯತ್ನಗಳನ್ನು ಮಾಡಲಾಗುತ್ತಿದ್ದು, ಇದು ಸಾಕಾರಗೊಂಡಲ್ಲಿ ನಗರ ಪ್ರದೇಶಗಳು ಸೇರಿದಂತೆ ರಾಜ್ಯದಲ್ಲಿ ವಿದ್ಯುತ್ ಕೊರತೆ ಕಡಿಮೆಯಾಗುವ ಆಶಾಭಾವನೆಯನ್ನು ಹೊಂದಲಾಗಿದೆ

445 (345) **ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ)** ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗುಡಿಬಂಡೆ ತಾಲ್ಲೂಕಿನ ಸೋಮೇನಹಳ್ಳಿ ಹಾಗೂ ಗೌರಿಬಿದನೂರು ತಾಲ್ಲೂಕು ಗುಂಡ್ಲು ಕೊತ್ತೂರಿನ ಬಳಿ ನೂತನ ವಿದ್ಯುತ್ ಸಬ್‌ಸ್ಟೇಷನ್ ಗಳನ್ನು ಪ್ರಾರಂಭಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ,

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮತ್ತು ಆ) ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಗುಡಿಬಂಡೆ ತಾಲ್ಲೂಕಿನ ಸೋಮೇನಹಳ್ಳಿಯ ಸಮೀಪದಲ್ಲಿರುವ ಪೆರೆಸಂದ್ರ

ಮತ್ತು ನಾದಲಿಗಳಲ್ಲಿ 66/11 ಕೆ ವಿ ವಿದ್ಯುತ್ ಉಪ ಕೇಂದ್ರಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿದೆ ಗೌರಿಬಿದನೂರು ತಾಲ್ಲೂಕಿನ ಗುಂಡ್ಲು ಕೊತ್ತೂರಿನ ಬಳಿ ನೂತನ 66/11 ಕೆ ವಿ ವಿದ್ಯುತ್ ಸಬ್ ಸ್ಟೇಷನ್ನನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಕಾಮಗಾರಿ ಗುತ್ತಿಗೆಯನ್ನು ಗುತ್ತಿಗೆದಾರರಿಗೆ ದಿನಾಂಕ 8 12 2006 ರಂದು, ವಹಿಸಲಾಗಿದ್ದು ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ ಕಾಮಗಾರಿಯು ಸೆಪ್ಟೆಂಬರ್ 2007ರ ಅಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ

ಸೋಮೇನಹಳ್ಳಿಯಲ್ಲಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾಪ ಸದ್ಯಕ್ಕೆ ಇರುವುದಿಲ್ಲ

446 (346) **ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ)** ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ ಡಿ ಎಂ ನಂಜುಂಡಪ್ಪ ವರದಿಯನ್ವಯ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ನಬಾರ್ಡ್ ಯೋಜನೆಯಡಿ ವಿಶೇಷ ಅನುದಾನ ನೀಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೆ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಡಾ ಡಿ ಎಂ ನಂಜುಂಡಪ್ಪ ಸಮಿತಿಯ ಅಂತಿಮ ವರದಿಯನ್ನು ಜೂನ್-2202 ರಲ್ಲಿ ಪಡೆಯಲಾಗಿದೆ ಈ ವರದಿಯಲ್ಲಿ ಅತಿ ಹಿಂದುಳಿದ ತಾಲ್ಲೂಕುಗಳು ಎಂದು ಗುರುತಿಸಲಾಗಿರುವ 39 ತಾಲ್ಲೂಕುಗಳಲ್ಲಿ 2003-04 2004-05 ಮತ್ತು 2005-06ನೇ ಸಾಲುಗಳಲ್ಲಿ 286 ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು 187 24 ಕೋಟಿ ರೂ ಮೊತ್ತದಲ್ಲಿ ನಬಾರ್ಡ್‌ನಿಂದ ಅನುಮೋದನೆ ಪಡೆದು ಕೈಗೊಳ್ಳಲಾಗಿದೆ ಇದಲ್ಲದೆ 2006-07ನೇ ಸಾಲಿನಲ್ಲಿ 107 ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು 72 60 ಕೋಟಿ ರೂ ಮೊತ್ತದಲ್ಲಿ ಕೈಗೊಳ್ಳಲು ಪ್ರಸ್ತಾವಿಸಲಾಗಿದೆ

ಆ) ಮೇಲೆ ತಿಳಿಸಿರುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ

447 (151) **ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ)** ಮಾನ್ಯ ಸಹಕಾರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರ ಇಲಾಖೆಯಲ್ಲಿ ವಿವಿಧ ಚೀಟಿ ಸಂಸ್ಥೆಗಳು (ಚಿಟ್ ಫಂಡ್) ಇಟ್ಟಿರುವ ಭದ್ರತಾ ರೇವಣಿ ಹಣ ಎಷ್ಟು, ಸಂಸ್ಥೆವಾರು, ಜಿಲ್ಲಾವಾರು ವಿವರ ನೀಡುವುದು),

ಆ) ಈ ರೀತಿಯ ಭದ್ರತಾ ರೇವಣಿ ಮೊತ್ತಕ್ಕೆ ವಿಧಿಸುವ ಬಡ್ಡಿ ಹಾಗೂ ಅವಧಿ ಮುಗಿದ ಬಳಿಕ ಹಿಂತಿರುಗಿಸಲು ಅನುಸರಿಸುವ ಮಾನದಂಡಗಳೇನು,

ಇ) ಇಂತಹ ಭದ್ರತಾ ಹಣ ಬಿಡುಗಡೆ ಮಾಡುವಲ್ಲಿ ಇಲಾಖಾ ಅಧಿಕಾರಿಗಳು ನೌಕರರು ಷಾಮೀಲಾಗಿ ಅವ್ಯವಹಾರ ಅಕ್ರಮ ನಡೆದಿರುವುದು ಬೆಳಕಿಗೆ ಬಂದಿದೆಯೆ?

ಈ) ಚಿಟ್ ಫಂಡ್ ವಿಭಾಗದಲ್ಲಿ (ನಕಲಿ ಸಹಿ) ಪ್ರಕರಣದ ಬಗ್ಗೆ ಇಲಾಖೆ ತನಿಖೆ ಕೈಗೊಂಡಿದೆಯೇ,

ಉ) ಇದರಲ್ಲಿ ಷಾಮೀಲಾಗಿರುವ ಅಧಿಕಾರಿ/ನೌಕರರು ಯಾರ್ಯಾರು ಮತ್ತು ಇವರ ಮೇಲೆ ಕೈಗೊಂಡಿರುವ ಕ್ರಮಗಳೇನು? (ಹೆಸರು ಮತ್ತು ಹುದ್ದೆಯ ವಿವರ ನೀಡುವುದು)

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ) ರಾಜ್ಯದಲ್ಲಿನ 27 ಜಿಲ್ಲೆಗಳಲ್ಲಿ 358 ಚೀಟಿ ಸಂಸ್ಥೆಗಳು ಇರುತ್ತವೆ ಅವುಗಳು ಸರ್ಕಾರಕ್ಕೆ ಪಾವತಿಸಿದ ಭದ್ರತಾ ರೇವಣಿ ಮೊತ್ತ ರೂ 11053 38 ಲಕ್ಷಗಳು ಇರುತ್ತದೆ

ಆ) ಆರ್ ಬಿ ಯ ಅನುಮೋದಿಸಿದ ವಿವಿಧ ಬ್ಯಾಂಕುಗಳು ಬಡ್ಡಿಯನ್ನು ಸಾಲಿಯಾನ ಶೇಕಡ 5 ರಿಂದ 8 ರ ದರದಲ್ಲಿ ನೀಡುತ್ತಿರುತ್ತವೆ ಅವಧಿ ಮುಗಿದ ಭದ್ರತಾ ರೇವಣಿಯನ್ನು ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 20(1)(ಎ) ರನ್ವಯ ಸಕ್ಷಮ ಪ್ರಾಧಿಕಾರದ ಮತ್ತು ಚೀಟಿ ಸಂಸ್ಥೆಯ ಜಂಟಿ ಹೆಸರಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಅನುಮೋದಿಸಿದ ವಿವಿಧ ಬ್ಯಾಂಕುಗಳಲ್ಲಿ ರೇವಣಿ ಮಾಡಿದ ಭದ್ರತಾ ರೇವಣಿಯನ್ನು 1983 ರ ಚೀಟಿ ನಿಧಿ ನಿಯಮ 16(1)ರನ್ವಯ ಪ್ರಕಟಣೆ ಹೊರಡಿಸಿ, 15 ದಿನಗಳ ಕಾಲಾವಕಾಶ ನೀಡಿ ಈ ಅವಧಿಯಲ್ಲಿ ಚಂದಾದಾರರಿಂದ ಆಕ್ಷೇಪಣೆಗಳು ಬಾರದಿದ್ದ ಪಕ್ಷದಲ್ಲಿ ಆಯಾ ಗುಂಪಿಗೆ ಸಂಬಂಧಿಸಿದ ಭದ್ರತಾ ರೇವಣಿ ಮೊಬಲಗನ್ನು ಹಿಂದಿರುಗಿಸಲು ಸಂಬಂಧಿಸಿದ ಬ್ಯಾಂಕುಗಳಿಗೆ ಆದೇಶ ನೀಡಲಾಗುತ್ತದೆ

ಇ) ಬೆಂಗಳೂರು ಪ್ರಾಂತದ ಚೀಟಿ ಜಂಟಿ ನಿಬಂಧಕರ ಕಛೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರು ಮೇಲಾಧಿಕಾರಿಯವರ ನಕಲಿ ಸಹಿ ಮಾಡಿ, ರೇವಣಿ ಹಣ ರಸೀತಿಗಳನ್ನು ವಾಪಸ್ಸು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ

ಈ) ಸಹಕಾರ ಸಂಘಗಳ ನಿಬಂಧಕರು ಸಂ ಆರ್ ಸಿಎಸ್/ಸಿಬ್ಬಂದಿ /20/ಇಸಿಸಿ2005–06, ದಿನಾಂಕ 5–7–2005 ರಲ್ಲಿ ವಿಚಾರಣೆಗೆ ಆದೇಶಿಸಿ ಕ್ರಮ ಕೈಗೊಳ್ಳಲಾಗಿದೆ ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕಾ ಸಹಕಾರ ಸಂಘಗಳು) ಇವರು ಪ್ರಾಥಮಿಕ ತನಿಖೆ ನಡೆಸಿ ವರದಿ ಸಲ್ಲಿಸಿರುತ್ತಾರೆ

ಉ) ಈ ಪ್ರಕರಣದಲ್ಲಿ ಷಾಮೀಲಾಗಿರುವ ನೌಕರ ಶ್ರೀ ಎನ್ ಜೆ ಗೋಪಾಲ, ದ್ವಿತೀಯ ದರ್ಜೆ ಸಹಾಯಕರು ಇವರು ಎಸಗಿರುವ ದಂಡಾರ್ಹ ಅಪರಾಧಕ್ಕಾಗಿ ಸೆಂಟ್ರಲ್ ಪೊಲೀಸ್ ಠಾಣೆ, ಬೆಂಗಳೂರು, ಇಲ್ಲಿ ಇಲಾಖಾವತಿಯಿಂದ ಎಫ್ ಐ ಆರ್, ಸಂ 110/2005 ರಂತೆ ದಿನಾಂಕ 29 7 2005 ರಂದು ದೂರು ದಾಖಲಿಸಲಾಗಿದೆ ಈ ದೂರು ಅರ್ಜಿ ಮೇಲೆ ತನಿಖೆ ನಡೆಸಿದ ನಂತರ ಇದು ಸದ್ಯಕ್ಕೆ ಪತ್ತೆಯಾಗದ ಪ್ರಕರಣ ಎಂಬುದಾಗಿ ಪೊಲೀಸ್ ತನಿಖಾಧಿಕಾರಿಗಳು ದಿನಾಂಕ 6 3 2006ರಂದು ವರದಿ ಮಾಡಿದ ಹಿನ್ನೆಲೆಯಲ್ಲಿ ಈ ಬಗ್ಗೆ ಕಟ್ಟುನಿಟ್ಟಿನ ತನಿಖಾ ಕ್ರಮ ಕೈಗೊಂಡು ನ್ಯಾಯಾಲಯಕ್ಕೆ ಆರೋಪ ಪಟ್ಟಿಯನ್ನು ಸಲ್ಲಿಸುವ ದಿಸೆಯಲ್ಲಿ ಸಂಬಂಧಿಸಿದವರಿಗೆ ಅವಶ್ಯ ಸೂಚನೆ ನೀಡುವಂತೆ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಇವರನ್ನು ಕೋರಲಾಗಿರುತ್ತದೆ

ಈ ನೌಕರರ ವಿರುದ್ಧ 25 1 2006 ರಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದ್ದು, ಸದರಿ ನೌಕರರು ಈ ಕ್ರಮ ಪ್ರಶ್ನಿಸಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು ಇದರ ಮುಂದೆ ಸಲ್ಲಿಸಿದ ಅರ್ಜಿ ಸಂ 2050/2006 ರಲ್ಲಿ ನ್ಯಾಯಮಂಡಳಿಯು ವಿಚಾರಣಾ ನಡವಳಿಗೆ ತಡೆಯಾಜ್ಞೆ ನೀಡಿ ಆದೇಶಿಸಿರುತ್ತದೆ ಈ ಅರ್ಜಿ ಸಂಬಂಧ ನ್ಯಾಯಮಂಡಳಿಯ ನಿರ್ದೇಶನದ ಮೇರೆಗೆ ಇಲಾಖಾ ವಿಚಾರಣೆಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲೆಗಳನ್ನು ನ್ಯಾಯಮಂಡಳಿಯ ಪರಿಶೀಲನೆಗೆ ದಿನಾಂಕ 3 6 2006ರಲ್ಲಿ ಸಲ್ಲಿಸಲಾಗಿದೆ ನ್ಯಾಯಾಲಯವು ನಿಡಿರುವ ಮಧ್ಯಂತರ ತಡೆಯಾಜ್ಞೆ ತೆರವಿಗೆ ಮತ್ತು ಈ ಅರ್ಜಿ ಶೀಘ್ರ ಇತ್ಯರ್ಥಕ್ಕೆ ಇಲಾಖಾ ವತಿಯಿಂದ ಪ್ರಮಾಣೀಕರಿಸಿ

ದಿನಾಂಕ 15 9 2006 ರಂದು ಲಿಖಿತ ಆಕ್ಷೇಪಣಾ ಹೇಳಿಕೆಯನ್ನು ನಲ್ಲಿಸಲಾಗಿದೆ ಮತ್ತು ಈ ಬಗ್ಗೆ ಅವಶ್ಯ ತುರ್ತು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಸರ್ಕಾರಿ ವಕೀಲರನ್ನು ಕೋರಲಾಗಿದೆ ಹಾಗೂ ಸದರಿ ಅರ್ಜಿ ಕರ್ನಾಟಕ ನ್ಯಾಯಮಂಡಳಿಯಲ್ಲಿ ಇತ್ಯರ್ಥಕ್ಕೆ ಬಾಕಿ ಇದೆ

448 (840) **ಶ್ರೀ ಸುನಿತ ವೀರಪ್ಪಗೌಡ ಜೆ (ಬನ್ನೂರು)** ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡ ಹೊಸ ಕಾಲೇಜು ಹಾಲಿ ಇದ್ದ ಕಾಲೇಜು ಹಾಗೂ ಪ್ರೌಢಶಾಲೆಗಳಿಗೆ ಹೊಸ ಕಟ್ಟಡ ಹಾಗೂ ಹೆಚ್ಚುವರಿ ಕೊರಡಿ ಕಾಮಗಾರಿಗಳೆಷ್ಟು (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು),

ಆ) ಈ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಅನುದಾನದ ಮೊತ್ತ ಎಷ್ಟು,

ಇ) ಸದರಿ ಕ್ಷೇತ್ರಗಳಲ್ಲಿ ಮುಂದೆ ಕೈಗೊಳ್ಳಲಾಗುವ ಉದ್ದೇಶಿತ ಹೆಚ್ಚುವರಿ ಕೊರಡಿಗಳ ನಿರ್ಮಾಣದ ಕಾಮಗಾರಿಗಳು ಯಾವುವು?

ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮೈಸೂರು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಒಟ್ಟು 15 ಹೊಸ ಕಾಲೇಜು ಕಟ್ಟಡಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ (ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ) ಹಾಲಿ ಇರುವ ಒಟ್ಟು 9 ಕಾಲೇಜುಗಳಿಗೆ ಹೆಚ್ಚುವರಿ ಕೊರಡಿಗಳನ್ನು ನಿರ್ಮಿಸಲು ಉದ್ದೇಶಿನಲಾಗಿದೆ

ಬಿ) ಪ್ರೌಢಶಾಲಾ ಕಟ್ಟಡಗಳಿಗೆ ಹೆಚ್ಚುವರಿ ಕೊರಡಿಗಳನ್ನು ನಿರ್ಮಿಸುವುದು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ

